ಜನಪದ ವಿಚಾರ

ಬೆಲೆ : ರೂ ೧೦-೦೦

ಚಿಂತನ * ದರ್ಶನ * ವಿಮರ್ಶನ

ಜನಪದ ಸೇವಾ ಟ್ರಸ್ಟ್ ಪ್ರಕಟಣೆ

ತಿಂಗಳ ವೈಚಾರಿಕ ಡೈಜೆಸ್ಟ್

ಸಂಪುಟ-೧೪ ಫೆಬ್ರವರಿ-೨೦೧೪ ಸಂಚಿಕೆ-೭

ಭಾರತೀಯ ಮತದಾರ ಮತ್ತು ಲೋಕಸಭಾ ಚುನಾವಣೆ

ಗುಲಾಮ ಹಳ್ಳಿಗಳ ಸ್ವತಂತ್ರ ದೇಶ

ತುಂಬು ಬದುಕು ತುಂಬಿ ಹರಿದ ಬೆಳಕು

ಕೈಮಗ್ಗ ಉದ್ಯೋಗವನ್ನು ಸರ್ಕಾರ ನಾಶಮಾಡದಿರಲಿ

ಕನಕದಾಸರ ಪ್ರಸ್ತುತತೆ

ಜನಪದ ವಿಚಾರದಲ್ಲಿ ಫೆಬ್ರವರಿ - ೨೦೧೪

ಜನಪದ ವಿಚಾರ

ತಿಂಗಳ ವೈಚಾರಿಕ ಡೈಜೆಸ್ಟ್

ಫೆಬ್ರವರಿ - ೨೦೧೪
ಸಂಪುಟ - ೧೪
ಸಂಚಿಕೆ - ೭

ಸಂಪಾದಕ
ಸುರೇಂದ್ರ ಕೌಲಗಿ

ಸಲಹಾ ಸಮಿತಿ
ಜನಪದ ಸೇವಾ ಟ್ರಸ್ಟ್
ಧರ್ಮದರ್ಶಿ ಮಂಡಳಿ

ಚಂದಾ ವಿವರ
ವಾರ್ಷಿಕ : ರೂ ೧೦೦/-
ಬಿಡಿ ಸಂಚಿಕೆ : ರೂ ೧೦/-

ಸಂಪರ್ಕ ವಿಳಾಸ
ಜನಪದ ಸೇವಾ ಟ್ರಸ್ಟ್(ರಿ)
ಮೇಲುಕೋಟೆ-೫೭೧೪೩೧
ಜಿಲ್ಲಾ ಮಂಡ್ಯ

✆ 08236 316344

✆ 08236 299854

e-mail : janapada@yahoo.com
web: janapada.net

ಸಿಮೋಲ್ಲಂಘನ

ಹೋಗೋಣ ಬಾ!
ಇನ್ನು ಸೀಮೆಯನು ದಾಟಿ!!

ಪಂಗಡವ ಪಂಗಡವ ವಿಂಗಡಿಸಿ ಕೆಟ್ಟು
ಸಂಗಡಿಸಿ ಕೂಡಿರುವ ಬಾಳುವೆಯ ಗುಟ್ಟು
ಕಂಗೊಳಿಸಿ ಹಾಗಿರುವ ಬಿರುದನ್ನು ತೊಟ್ಟು
ಹೋಗೋಣ ಬಾ ಇನ್ನು ಸೀಮೆಯನು ದಾಟಿ

ಇಲ್ಲಸಲ್ಲದ ಕಾಲತೊಡರುಗಳ ಕಡಿದು
ಬಲ್ಲವರು ತೋರಿರುವ ಹಾದಿಯನು ಹಿಡಿದು
ಎಲ್ಲರೂ ಒಂದಾಗಿ ಒಂದಾಗಿ ನಡೆದು
ಹೋಗೋಣ ನಾವೆಲ್ಲ ಸೀಮೆಯನು ದಾಟಿ

ಅಕ್ಕತಂಗೆಂದಿರಿಗೆ ವಿದ್ಯೆಯನು ಕಲಿಸಿ
ಚಿಕ್ಕಮಕ್ಕಳ ಬುದ್ಧಿ ಮುದ್ದಾಡಿ ಬಲಿಸಿ
ನಕ್ಕು ನಲಿದಾಡಿ ಹಿರಿಕಿರಿಯರನು ಒಲಿಸಿ
ಅಡಿಗಡಿಗೆ ಹೋಗೋಣ ಸೀಮೆಯನು ದಾಟಿ

ಮಾಡಿದರೆ ನನ್ನಿ ತಾ ಮಾಡುವರು ನನ್ನಿ
ನೋಡಿ ನೋಡಿದವರ್ಗೆ ಬನ್ನಿಬನ್ನೆನ್ನಿ
ಕೊಡಬನ್ನಿ-ಕೊಳಬನ್ನಿ-ಕೊಡುವೆನೀ ಬನ್ನಿ
ಹೀಗೆಂದು ಸಾಗೋಣ ಸೀಮೆಯನು ದಾಟಿ

ಹಿಂದಿರುವ ಹಗೆಯೀಗ ಅಂಗಾರವಾಯ್ತು
ಮುಂದಿರುವ ಗೆಳೆತನ ಸಿಂಗಾರವಾಯ್ತು
ಹೋಗೋಣ ಬಾ ಇನ್ನು ಸೀಮೆಯನು ದಾಟಿ

- ಅಂಬಿಕಾತನಯ ದತ್ತ

ವಿಚಾರ ದೀಪ್ತಿ

ಮತ್ತೆ ಅದೇ ಪ್ರಶ್ನೆ. ಈ ಸಾರಿಯ ಮಡಿಕೇರಿ ಸಾಹಿತ್ಯ ಸಮ್ಮೇಳನದ ಅಧ್ಯಕ್ಷ ನಾ.ಡಿಸೋಜ ಅವರೂ ಅದೇ ಪ್ರಶ್ನೆ ಎತ್ತಿದ್ದಾರೆ. 'ಕನ್ನಡ ಉಳೀದೀತೆ' ಎಂಬ ಪ್ರಶ್ನೆ ಅದು. ನಾರ್ಬರ್ಟ್ ಡಿಸೋಜ ಸಜ್ಜನ ಸಾಹಿತಿ. ಅವರು ಯಾರನ್ನಾದರೂ ಎಂದಾದರೂ ನೋಯಿಸಿದ್ದನ್ನು ಕಾಣೆ. ಕನ್ನಡ ಭಾಷೆಯ ಕಾರಣಕ್ಕಾಗಿಯೇ ಸಮ್ಮೇಳನದ ಕೊನೆಯ ದಿನ ಅವರು 'ಆಸೆಬುರುಕ ಸಾಹಿತಿ'ಗಳನ್ನೂ ತರಾಟೆಗೆ ತೆಗೆದುಕೊಂಡಿದ್ದಾರೆ! ಸಾತ್ವಿಕರ ಸಿಟ್ಟಿಗೆ ಅರ್ಥ ಮತ್ತು ಮೌಲ್ಯ ಎರಡೂ ಜಾಸ್ತಿ. ಕನ್ನಡದ ಪರವಾಗಿ ಹೀಗೆ ಧ್ವನಿ ಎತ್ತಿದ ಮೊದಲಿಗರೂ ಅವರೇನಲ್ಲ. ಬಹುಶಃ ಕೊನೆಯವರೂ ಆಗಿರಲಾರರು. ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನ ನಡೆದಾಗಲೆಲ್ಲ ಕನ್ನಡ ಭಾಷೆ ಉಳಿಸಬೇಕು ಎಂಬ ಕೂಗು ಹಿಂದೆಯೂ ಕೇಳಿ ಬರುತ್ತಿತ್ತು. ಮುಂದೆಯೂ ಕೇಳಿ ಬರುತ್ತದೆ. ಬಹುಶಃ ಅದಕ್ಕೆ ಕೊನೆ ಇರಲಾರದು.

ದೇಶಕ್ಕೆ ಸ್ವಾತಂತ್ರ್ಯ ಬರುವುದಕ್ಕಿಂತ ಮುಂಚೆಯೇ ೧೯೪೪ರಲ್ಲಿ ಎ.ಆರ್. ಕೃಷ್ಣಶಾಸ್ತ್ರಿಗಳು ಹೈದರಾಬಾದಿನಲ್ಲಿ ನಡೆದ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷತೆ ವಹಿಸಿ ಕನ್ನಡ ಭಾಷೆ ಎದುರಿಸುವ ಆತಂಕಗಳನ್ನು ಕುರಿತು ಆಡಿದ ಮಾತುಗಳನ್ನು ಯಾರೂ ಮರೆತಿರಲಾರರು. ಶಾಸ್ತ್ರಿಗಳು ಹೇಳಿದ್ದರು : ನಮ್ಮ ದೇಶದಲ್ಲಿ ಬೌದ್ಧಧರ್ಮ ಖಿಲವಾಗಿ ಹೋದಂತೆ, ನಷ್ಟವಾಗಿ ಹೋದಂತೆ ಸಂಸ್ಕೃತವೂ ಆಗಿ ಹೋಗುವುದಾದರೆ, ಅದು ಹೊರದೇಶಗಳಲ್ಲಿ ಬದುಕಿರುತ್ತದೆ. ಬಾಳುತ್ತಿರುತ್ತದೆ. ಆದರೆ, ಕನ್ನಡ? ಕನ್ನಡಿಗರೇ, ನಿಮ್ಮ ಕನ್ನಡವನ್ನು ಇಂಡಿಯಾ ದೇಶದ ದಕ್ಷಿಣ ಭಾಗದಲ್ಲಿ ಒಂದು ಅಂಗೈ ಅಗಲ ಬಿಟ್ಟರೆ ಮತ್ತೆಲ್ಲಿಯೂ ನೋಡಲಾರಿರಿ. ನೀವು ಅದನ್ನು ಅಲಕ್ಷ್ಯ ಮಾಡಿದರೆ ಮಿಕ್ಕ ಯಾವ ದೇಶದ ಯಾವ ಜನರೂ ಅದನ್ನು ಎತ್ತಿ ಹಿಡಿಯಲಾರರು. ಅದು ಹೋದರೆ ಹೋಗಲಿ ಎನ್ನುವ ಹಾಗಿದ್ದರೆ, ಈ ಕಡೆ ಬಂಗಾಳ ಕೊಲ್ಲಿಯಿದೆ. ಆ ಕಡೆ ಅರಬ್ಬೀ ಸಮುದ್ರ ಇದೆ; ಗುಡಿಸಿಹಾಕಿಬಿಡಿ. ಇತರ ಭಾಷೆಗಳು ಒತ್ತಿಕೊಂಡು ಬರಲಿ, ಆಕ್ರಮಿಸಿಕೊಳ್ಳಲಿ!

ಅವರು ಒಬ್ಬ ದೊಡ್ಡ ಸಂಸ್ಕೃತ ವಿದ್ವಾಂಸರಾಗಿದ್ದರು. ಆದರೂ 'ಆ ಭಾಷೆ ಖಿಲವಾಗಿ, ನಷ್ಟವಾಗಿ ಹೋಗುವುದಾದರೆ ಹೋಗಲಿ' ಎನ್ನಲು ಅವರಿಗೆ ಅಳುಕೇನೂ ಇರಲಿಲ್ಲ. ಆದರೆ, ಕನ್ನಡ ಭಾಷೆ ಬಗೆಗಿನ ಅವರ ಅಳುಕು ನಿಜವಾಗಿದೆ. ಕನ್ನಡಿಗರಿಗೆ ಕನ್ನಡ ಭಾಷೆ ಬೇಕಾಗಿದೆ ಎಂದು ಅನಿಸುವುದಿಲ್ಲ. ಇತ್ತ ಬಂಗಾಳ ಕೊಲ್ಲಿಗೆ, ಅತ್ತ ಅರಬ್ಬೀ ಸಮುದ್ರಕ್ಕೆ ಕನ್ನಡವನ್ನು ನಾವು ತಳ್ಳುವ ಕಾಲ ಬಹಳ ದೂರವೇನೂಯಿಲ್ಲ. ಅಥವಾ ಅದೇ ನಿಧಾನವಾಗಿ ಸರಿದುಹೋಗಿ ಬಿಡಬಹುದು.

– ಪದ್ಮರಾಜ ದಂಡಾವತಿ

ಭಾರತೀಯ ಮತದಾರ ಮತ್ತು ಲೋಕಸಭಾ ಚುನಾವಣೆ

- ಸುರೇಂದ್ರ ಕೌಲಗಿ

ಮತದಾರನ ಕೈಲಿದೆ ದೇಶದ ಭವಿಷ್ಯದ ಕೀಲಿಕೈ

೨೦೦೯ ರಲ್ಲಿ ಲೋಕಸಭೆಗೆ ಚುನಾವಣೆಯಾಗಿತ್ತು. ೫ವರ್ಷಗಳ ದೀರ್ಘ ಸಮಯದ ನಂತರ ಮತ್ತೊಂದು ಮಹಾ ಚುನಾವಣೆ ದೇಶದ ಹೊಸ್ತಿಲಲ್ಲಿ ನಿಂತಿದೆ. ಕಳೆದು ಹೋದ ಐದು ವರ್ಷಗಳ ಕಾಲವೂ ಸುದೀರ್ಘ ಗಾಢ ನಿದ್ರೆಯಲ್ಲಿದ್ದ ಮತದಾರ ಈಗ ಒಮ್ಮೆಲೆ ಕೆಟ್ಟ ಕನಸನ್ನು ಕಂಡರೀತಿಯಲ್ಲಿ ಗಾಬರಿಯಾಗಿ ಕಣ್ತೆರೆದಿದ್ದಾನೆ. ನಿದ್ದೆಯ ಗುಂಗಿನಲ್ಲಿರುವ ಮತದಾರನಿಗೆ ಹಾಸಿಗೆಯಿಂದ ಎದ್ದೇಳಲು ಮನಸ್ಸಾಗದೆ ಸುಮ್ಮನೆ ಕೂತಿದ್ದಾನೆ. ತಕ್ಷಣಕ್ಕೆ ಏನು ಮಾಡಬೇಕೆಂದು ಅವನಿಗೆ ತೋಚುತ್ತಿಲ್ಲ. ಯೋಚನೆ ಮಾಡಲು ಮತ್ತು ಕಾರ್ಯಪ್ರವೃತ್ತನಾಗಲು ಸ್ವಲ್ಪ ಸಮಯ ಬೇಕು. ಈಗಾಗಲೇ ದೇಶದಾದ್ಯಂತ ಚುನಾವಣೆಯ ಬಿರುಗಾಳಿಯಿಂದ ದೇಶವೆಲ್ಲ ಧೂಳಿನಿಂದ ಆವರಿಸಲ್ಪಟ್ಟಿದೆ. ೧೯೫೨ರಲ್ಲಿ ನಡೆದ ಪ್ರಥಮ ಲೋಕಸಭಾ ಚುನಾವಣೆಯಿಂದ ೨೦೧೪ರ ಹದಿನಾಲ್ಕನೆಯ ಚುನಾವಣೆವರೆಗೆ ನಡೆದ ಹದಿನಾಲ್ಕು ಮಹಾ ಚುನಾವಣೆಗಳಿಂದ ಭಾರತೀಯ ಮತದಾರ ಏನೆಲ್ಲ ರಾಜಕೀಯ ಅನುಭವ ಪಡೆದಿದ್ದಾನೊ ಮತ್ತು ರಾಜ್ಯಶಾಸ್ತ್ರ ತಿಳಿದಿದ್ದಾನೊ ಅದೆಲ್ಲದರ ಪರೀಕ್ಷೆ ಬರಲಿರುವ ಹದಿನಾಲ್ಕನೇ ಚುನಾವಣೆಯಲ್ಲಿ ಆಗಲಿದೆ. ಈ ಅವಧಿಯಲ್ಲಿ ಮತದಾರ ಪರಿಪಕ್ವ ರಾಜಕಾರಣಿಯಾಗಿದ್ದರೆ ಮತ್ತು ರಾಜ್ಯಶಾಸ್ತ್ರದ ಓ ನಾಮ ತಿಳಿದ್ದಿದ್ದರೆ ದೇಶದ ರಾಜಕಾರಣ ಬಹುವಾಗಿ ಮತ್ತು ಒಳ್ಳೆಯದಕ್ಕಾಗಿ ಬದಲಾವಣೆಯಾಗಲಿದೆ. ಒಂದು ವೇಳೆ ಮತದಾರ ರಾಜಕಾರಣದ ಪ್ರೌಢಿಮೆಯನ್ನು ಬೆಳೆಸಿಕೊಳ್ಳದೆ ಹೋಗಿದ್ದರೆ ಹಾಗೂ ರಾಜ್ಯಶಾಸ್ತ್ರವನ್ನು ಅರ್ಥಮಾಡಿಕೊಳ್ಳದೆ ಹೋಗಿದ್ದರೆ ದೇಶದ ಮುಂದಿನ ರಾಜಕೀಯ ಇತಿಹಾಸ ದುರಂತಮಯವಾಗಿ ಪರಿಣಮಿಸಬಹುದು.

ದೇಶದ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಜನರು ದ್ವಿಮುಖಿಯಾದ ಪಾತ್ರವನ್ನು ನಟಿಸಬೇಕಾಗುತ್ತದೆ. ಒಂದನೆಯ ಪಾತ್ರ ನಾಗರೀಕ ಸಮಾಜದ ಪ್ರಜೆಯಾಗಿ ನಿರ್ವಹಿಸಬೇಕಾದ ಜವಾಬ್ದಾರಿಗಳು; ಮತ್ತು ಎರಡನೆಯದಾಗಿ ಪ್ರಭುತ್ವದ ಮತದಾರನಾಗಿ ನಿರ್ವಹಿಸಬೇಕಾದ ಜವಾಬ್ದಾರಿಗಳು. ಪ್ರಜೆಯಾಗಿ ಮತ್ತು ಮತದಾರನಾಗಿ ತನ್ನ ಪಾತ್ರಗಳನ್ನು ನಿರ್ವಹಿಸಬೇಕಾದ ಮತದಾರ ಪ್ರೌಢನೂ ಕುಶಲಿಯೂ ಮತ್ತು ನಟನಕಲಾ ಚತುರನೂ ಆಗಿರಬೇಕಾಗುತ್ತದೆ. ಮತದಾರ ಮತ್ತು ನಾಗರೀಕ ಮಧ್ಯದ ವ್ಯತ್ಯಾಸದ ಗೆರೆ ಬಹಳ ತೆಳುವಾಗಿದೆ. ಕೆಲವು ಸಲ ಏಕಕಾಲಕ್ಕೆ ಅವನು ನಾಗರೀಕನಾಗಿ ಮತ್ತು ಮತದಾರನಾಗಿ ಜವಾಬ್ದಾರಿಯನ್ನು

ನಿರ್ವಹಿಸಬೇಕಾಗುತ್ತದೆ. ಅಂಥ ಸಂದರ್ಭದಲ್ಲಿ ತನ್ನ ನಾಗರೀಕ ಕರ್ತವ್ಯವನ್ನು ನಿರ್ವಹಿಸುವಾಗ ಮತದಾರನಾಗಿ ನಿರ್ವಹಿಸಬೇಕಾದ ರಾಜಕಾರಣದ ಕರ್ತವ್ಯದೊಂದಿಗೆ ಘರ್ಷಣೆಯಾಗದಂತೆ ಎಚ್ಚರದಿಂದ ಇರಬೇಕಾಗುತ್ತದೆ.

ಭಾರತ ವಿಶಾಲವಾದ ದೇಶ. ನೂರು ಕೋಟಿಗೂ ಮಿಗಿಲಾದ ಜನಸಂಖ್ಯೆ, ನೂರಾರು ಭಾಷೆಗಳು, ಸಾವಿರಾರು ಜಾತಿಗಳು, ಹತ್ತಾರು ಸಿದ್ಧಾಂತಗಳು, ಹತ್ತಾರು ಧರ್ಮಗಳು, ಹತ್ತಾರು ವಿವಿಧ ಬಗೆಯ ಭೌಗೋಳಿಕ ಸನ್ನಿವೇಶ ಇರುವ ದೇಶ ಭಾರತ. ಜಗತ್ತಿನಲ್ಲಿರುವ ಎಲ್ಲಾ ವೈವಿಧ್ಯಮಯ ಸಂಸ್ಕೃತಿಯನ್ನು ಒಳಗೊಂಡಿರುವ ಭಾರತದಲ್ಲಿಯ ರಾಜ್ಯಶಾಸ್ತ್ರ ಬೇರೆಲ್ಲ ರಾಷ್ಟ್ರಗಳಲ್ಲಿಯ ರಾಜ್ಯಶಾಸ್ತ್ರಗಳಿಗಿಂತ ಖಂಡಿತವಾಗಿಯೂ ಭಿನ್ನವಾಗಿರಬೇಕಾಗುತ್ತದೆ. ಇದುವರೆಗಿನಂತೆ ಪಶ್ಚಿಮ ರಾಷ್ಟ್ರಗಳಲ್ಲಿ ಪ್ರಚಲಿತವಿರುವ ರಾಜ್ಯಶಾಸ್ತ್ರ, ಕೈಗಾರಿಕಾ ನೀತಿ ಮತ್ತು ಅರ್ಥಶಾಸ್ತ್ರ ಮುಂತಾದವುಗಳನ್ನು ತದ್ವತ್ತಾಗಿ ನಕಲು ಮಾಡುವ ರಾಜನೀತಿ, ಅರ್ಥನೀತಿ ಭಾರತಕ್ಕೆ ಸಲ್ಲಲಾರದು. ಅದೇ ರೀತಿ ಏಷ್ಯಾ ಖಂಡದ ರಾಷ್ಟ್ರಗಳಾದ ಚೀನಾ ಮತ್ತು ಜಪಾನಿನ ಅನುಕರಣೆಯೂ ಸಲ್ಲಲಾರದು. ಭಾರತದ ಮಣ್ಣು, ಗಾಳಿ, ನೀರು, ಹವಾಮಾನ, ಸಂಸ್ಕೃತಿ ಮುಂತಾದವುಗಳಿಗೆ ನ್ಯಾಯ ಸಲ್ಲಿಸುವ ಮತ್ತು ಗೌರವ ಸಲ್ಲಿಸುವ ಸಮಾಜ ವ್ಯವಸ್ಥೆಯನ್ನು ಹಾಗೂ ರಾಜನೀತಿಯನ್ನು ರೂಪಿಸುವ ಹೊಸ ರಾಜ್ಯ ವ್ಯವಸ್ಥೆ ಬೇಕು. ೨೦೧೪ರ ಲೋಕಸಭಾ ಚುನಾವಣೆ ಮೇಲ್ಕಾಣಿಸಿದ ರೀತಿಯಲ್ಲಿಯ ಹೊಸ ರಾಜ್ಯ ವ್ಯವಸ್ಥೆಯನ್ನು ರೂಪಿಸಲು ಸಹಾಯಕವಾಗುವುದೇ ಎಂಬುದು ದೊಡ್ಡ ಪ್ರಶ್ನೆಯಾಗಿದೆ. ಈ ಪ್ರಶ್ನೆ ಕುರಿತು ದೇಶದ ಪ್ರತಿಯೊಬ್ಬ ಮತದಾರ ಆಲೋಚನೆ ಮಾಡಬೇಕಿದೆ. ಚುನಾವಣೆಗೆ ಇನ್ನು ಕೇವಲ ಐದುತಿಂಗಳು ಮಾತ್ರ ಇದೆ. ಈ ಐದು ತಿಂಗಳ ಒಳಗಾಗಿ ಮತದಾರ ಆ ಪ್ರಶ್ನೆಯನ್ನು ಕರಿತು ಆಲೋಚಿಸಬೇಕಿದೆ. ಉತ್ತರ ಕಂಡು ಹಿಡಿಯ ಬೇಕಿದೆ. ಎಲ್ಲಕ್ಕಿಂತ ಮಿಗಿಲಾಗಿ ದೇಶದ ಬಹುತ್ವವನ್ನು ಉಳಿಸಿಕೊಂಡು ಏಕತ್ವವನ್ನೂ ಜೀವನದ ಒಂದು ಪದ್ಧತಿಯನ್ನಾಗಿಸುವ ನಾಯಕನು ಬೇಕಿದೆ. ಪ್ರಚಲಿತ ಹಾಗೂ ಪರಂಪರಾಗತವಾಗಿರುವ ಇಂದಿನ ರಾಜಕೀಯ ಜೇಡರ ಬಲೆಯನ್ನು ಕಿತ್ತು ಹಾಕಿ ಹೊಸ ದರ್ಶನದ ಹೊಳಪು ಕೊಡುವಂಥ ನಾಯಕ ದೇಶಕ್ಕೆ ಬೇಕಿದೆ.

೧೯೪೮ರ ಜನವರಿ ೩೦ರಂದು ಗಾಂಧೀ ಹತ್ಯೆಯಾದ ಮೇಲೆ ದೇಶವನ್ನು ಕೂಡಿಡುವ ನಾಯಕತ್ವದ ಹತ್ಯೆಯು ಆದಂತಾಯಿತು. ೧೯೪೮ರ ನಂತರದ ರಾಜಕಾರಣ ದೇಶವನ್ನು ಒಡೆದು ಆಡಳಿತ ನಡೆಸುವ ಸರ್ಕಾರಗಳಲ್ಲಿ ಪರ್ಯಾವಸಾನವಾಯಿತೇ ಹೊರತು ಗಾಂಧೀಯಂಥ ನೇತಾರರನ್ನು ಸೃಷ್ಟಿಸುವ ಕೆಲಸಮಾಡಲಿಲ್ಲ. ಇಂಗ್ಲೀಷರ ಆಡಳಿತ ಕಾಲದಲ್ಲಿ ಮೂರು ಬೃಹತ್ ಆಡಳಿತಾತ್ಮಕ ರಾಜ್ಯಗಳಿದ್ದವು: ಬ್ರಿಟಿಷ್ ಪ್ರೆಸಿಡೆನ್ಸಿ, ಸದರ್ನ್ ಪ್ರೆಸಿಡೆನ್ಸಿ ಮತ್ತು ಈಸ್ಟರ್ನ್ ಪ್ರೆಸಿಡೆನ್ಸಿ. ಸ್ವತಂತ್ರ್ಯಾನಂತರದ ರಾಜ್ಯಗಳ ಸಂಖ್ಯೆ ೨೭ಕ್ಕೆ ಏರಿದೆ. ಇನ್ನೂ ಒಟ್ಟು ೬೦ ರಾಜ್ಯಗಳು ರಚಿತವಾಗುವ ಸಂಭವವಿದೆ. ಮೀಸಲಾತಿ ಪದ್ಧತಿ ಜಾರಿಯಾದೊಡನೆ ಜಾತಿಗಳ ಸಂಖ್ಯೆ ಅಗಣಿತವಾಯಿತು ಮತ್ತು ಜಾತಿ ಭಾವನೆ ಬಲವಾಯಿತು. ಅಲ್ಪಸಂಖ್ಯಾತ ಮತ್ತು ಬಹುಸಂಖ್ಯಾತ ಹೆಸರಿನಲ್ಲಿ ಧರ್ಮಗಳ ವಿಂಗಡಣೆಯಾಯಿತು.

ಭಾಷಾಧಾರಿತ ರಾಜ್ಯಗಳಾಗಿ ಒಂದೊಂದು ಪ್ರದೇಶವೂ ತನ್ನದೇ ಆದ ರೀತಿಯಲ್ಲಿ ದ್ವೀಪವಾಗಿ ಉಳೀಯಿತು. ಸಂವಿಧಾನ ಹೇಳಿದ ಧರ್ಮ ನಿರಪೇಕ್ಷಿತ (Secular Nation) ರಾಷ್ಟವಾಗಬೇಕಂದು ಬಯಸಿದ್ದ ಮಾತು ದೇಶಕ್ಕೆ ಸ್ವಾತಂತ್ರ್ಯ ಬಂದು ಆರು ದಶಕಗಳಾದರೂ ಜಾರಿಗೆ ಬರಲಿಲ್ಲ. ಬದಲಿಗೆ ದೇಶ ಜಾತೀಯತೆ ಮತ್ತು ಧರ್ಮಾಂಧತೆಯ ಕಡೆಗೆ ಹೋಗುತ್ತಿದೆ. ಕವಿ ರವೀಂದ್ರನಾಥ ಟಾಗೋರ್ ತಮ್ಮ ಕನಸಿನ ಭಾರತ ಹೇಗಿರಬೇಕೆಂಬುದನ್ನು ಬಯಸಿದ್ದರೊ ಅಂಥ ಭಾರತ ದೇಶ ನಿರ್ಮಿತವಾಗಲೇ ಇಲ್ಲ. ದೇಶದ ಈಗಿನ ಮತದಾರರ ಮೇಲೆ ರವೀಂದ್ರರ ಆ ಕನಸನ್ನು ನನಸನ್ನಾಗಿ ಮಾಡುವ ಜವಾಬ್ದಾರಿಯಿದೆ. ರವೀಂದ್ರರು ಕಂಡ ಕನಸು ಈ ೨೧ನೇ ಶತಮಾನದ ಅತ್ಯಾಧುನಿಕ ಸನ್ನಿವೇಶದಲ್ಲಿಯೂ ಪ್ರಸ್ತುತವಾಗುತ್ತದೆ. ಎಂಬ ಕಾರಣಕ್ಕಾಗಿ ಅವರು ಹಾಡಿದ ರಾಷ್ಟ್ರಗೀತೆಯನ್ನು ಇಲ್ಲಿ ಸ್ಮರಿಸಲಾಗಿದೆ.

ಎಲ್ಲಿ ಮನ ನಿರ್ಭೀತ
ಎಲ್ಲಿ ಶಿರ ನಿಮಿರಿ ನಿಂದಿಹುದೊ
ಎಲ್ಲಿ ಜ್ಞಾನ ನಿರಾತಂಕ,
ಎಲ್ಲಿ ಜಗ ಸಂಕುಚಿತ ಭಿತ್ತಿಗಳ ದೆಸೆಯಿಂದ
ನುಚ್ಚು ನೂರಾಗಿ ಒಡೆದಿಲ್ಲವೊ.
ಎಲ್ಲಿ ನುಡಿ ಸತ್ಯದಂತರಾಳದಿಂದಲಿ ಹೊಮ್ಮುವುದೊ
ಎಲ್ಲಿ ದಣಿಯದ ಕಾರ್ಯ. ಪೂರ್ಣತೆಗೆ ಕೈಚಾಚಿ
ನಿಂತಿಹುದೊ
ಎಲ್ಲಿ ವಿವೇಚನೆಯ ಸ್ವಚ್ಛ ತೊರೆ, ಜಡ ಸಂಪ್ರದಾಯದ
ಮರಳು ಬೀಳಿನಲ್ಲಿ ಇಂಗಿಲ್ಲವೊ
ಎಲ್ಲಿ ಮನವನು ನೀನು ಹಬ್ಬಿ ಹರಡುವ
ಚಿಂತನಾಕಾರ್ಯಗಳಲ್ಲಿ ಕರೆದೊಯ್ಯುತಿಹೆಯೊ-ಅಲ್ಲಿ,
ಆ ಸ್ವಾತಂತ್ರ್ಯ ನಂದನದಿ, ಈ ನನ್ನ ರಾಷ್ಟ್ರವನು
ಎಚ್ಚರಿಸು, ಹೇ ತಂದೆ,

ಕವಿಯ ಆಶಯ ಪ್ರಕಾರ ದೇಶದ ಪ್ರಜೆಗಳ ಮನೋಭಾವ ಬದಲಾದಲ್ಲಿ ಸಂವಿಧಾನ ಘೋಷಿಸಿರುವ ಉದಾತ್ತ ಧ್ಯೇಯಗಳು ಪ್ರಾತ್ಯಕ್ಷಿಕೆಗೆ ಇಳಿಯುವವು. ಜಗತ್ತಿನಲ್ಲಿ ಪ್ರಜಾಪ್ರಭುತ್ವದ ಗಾಳಿ ಬೀಸಲು ಪ್ರಾರಂಭಿಸಿದ್ದು ೧೬೮೮ ರಿಂದ. ಇಂಗ್ಲೆಂಡ್‌ನಲ್ಲಿ ಹುಟ್ಟಿದ ಈ ಗಾಳಿ ಪ್ರಪಂಚದಾದ್ಯಂತ ಬೀಸಲು ಪ್ರಾರಂಭಿಸಿತು. ಯಾವ ದೇಶದಲ್ಲಿ ಸರ್ವಾಧಿಕಾರವಿತ್ತೊ ಅಲ್ಲೆಲ್ಲ ಜನರು ಬಂಡಾಯವೆದ್ದು ಪ್ರಜಾಪ್ರಭುತ್ವವನ್ನು ಸ್ಥಾಪಿಸಿಕೊಂಡರು. ಮೊದಲನೆ ಮಹಾಯುದ್ಧ ಪ್ರಜಾಪ್ರಭುತ್ವಕ್ಕೆ ಜಗತ್ತನ್ನು ಸುರಕ್ಷಿತವನ್ನಾಗಿ ಮಾಡಲು ನಡೆಯಿತೆಂದು ಕೆಲವರು ಅಭಿಪ್ರಾಯ ಪಡುತ್ತಾರೆ. ಅಂದಿನಿಂದ ಇಂದಿನವರೆಗೂ ಪ್ರಜಾಪ್ರಭುತ್ವಕ್ಕಾಗಿ ಹೋರಾಟಗಳು ನಡೆಯುತ್ತಲೇಯಿವೆ. ಕೆಲ ದೇಶಗಳಲ್ಲಿ ಪ್ರಜಾಪ್ರಭುತ್ವ ಬಂದಾಗಿದೆ. ಇನ್ನು ಕೆಲವು ದೇಶಗಳಲ್ಲಿ ಮಿಲಿಟರಿ ಸರ್ಕಾರದ ವಿರುದ್ಧ ಜನ ಪ್ರಜಾಪ್ರಭುತ್ವಕ್ಕಾಗಿ ಹೋರಾಟ ನಡೆಸಿದ್ದಾರೆ. ಇಂಗ್ಲೆಂಡನ್ನು ಪ್ರಜಾಪ್ರಭುತ್ವದ ತವರು ಮನೆ ಎಂದು ಹೇಳಲಾಗುತ್ತದೆ.

ಭಾರತದೇಶದಲ್ಲಿ ಪ್ರಜಾಪ್ರಭುತ್ವ ಬಂದು ಆರು ದಶಕಗಳಾದವು. ತುಂಬಾ ಹಳೆಯದಾದ ಇಂಗ್ಲೆಂಡ್‌ನ ಪ್ರಜಾಪ್ರಭುತ್ವ ಕೂಡ ಇನ್ನೂ ಪರಿಪಕ್ವತೆಯ ಕಡೆಗೆ ಹೋಗಲು ಪ್ರಯತ್ನಿಸುತ್ತಿದೆ. ಭಾರತ ಈ ವಿಷಯದಲ್ಲಿ ಇನ್ನೂ ದೀರ್ಘ ದಾರಿಯನ್ನು ಸವೆಸಬೇಕಿದೆ. ಮಹಾ–ಚುನಾವಣೆಗಳು ಪ್ರಜಾಪ್ರಭುತ್ವವನ್ನು ಪರಿಪಕ್ವಗೊಳಿಸುವ ಪ್ರಕ್ರಿಯೆಗಳಾಗಿವೆ. ಆದ್ದರಿಂದ ಚುನಾವಣೆಯ ವಿಷಯ ಬಂದಾಗಲೆಲ್ಲಾ ಮತದಾರನ ಪಾತ್ರ ಬಹಳ ಮುಖ್ಯವಾಗುತ್ತದೆ. ಅವನು ತನ್ನ ನಾಗರೀಕತೆಯ ಜವಾಬ್ದಾರಿಯೊಂದಿಗೆ ರಾಜಕಾರಣದ ಜವಾಬ್ದಾರಿಯನ್ನು ನಿರ್ವಹಿಸಬೇಕಾಗುತ್ತದೆ. ಇಪ್ಪತ್ತೊಂದನೇ ಶತಮಾನದಲ್ಲಿ ಪ್ರಜಾಪ್ರಭುತ್ವ ಸರ್ಕಾರಗಳು ಅಂತಿಮ ದುರಂತದೆಡೆಗೆ ವೇಗವಾಗಿ ಧಾವಿಸುತ್ತಿವೆ. ಆ ದುರಂತವು ಪ್ರಜಾಪ್ರಭುತ್ವ ಅವನತಿ ಹೊಂದುವುದೇ ಅಥವಾ ಉನ್ನತಿ ಹೊಂದುವುದೇ ಎಂಬುದನ್ನು ತೀರ್ಮಾನಿಸಲಿದೆ. ಇಂಥ ಸಂಧರ್ಬದಲ್ಲಿ ಭಾರತದ ಪ್ರಜಾಪ್ರಭುತ್ವದ ಮೇಲೆ ವಿಶೇಷ ಹೊಣೆಗಾರಿಕೆ ಇದೆ. ಅದು ತನ್ನ ಪ್ರಾಜ್ಞತೆಯನ್ನು ಜಗತ್ತಿಗೆ ತೋರಿಸಬೇಕಿದೆ. ತನ್ಮೂಲಕ ಜಗತ್ತಿನ ವಿವಿಧ ರಾಷ್ಟ್ರಗಳಲ್ಲಿರುವ ಪ್ರಜಾಪ್ರಭುತ್ವಕ್ಕೆ ಮತ್ತು ಇನ್ನು ಮುಂದೆ ಪ್ರಜಾಪ್ರಭುತ್ವ ಹೊಂದುವ ರಾಷ್ಟ್ರಗಳಿಗೆ ಮಾರ್ಗದರ್ಶಕವಾಗಬೇಕಿದೆ. ಗಾಂಧೀಜಿಯವರು ಭಾರತ ಅಹಿಂಸೆ, ಶಾಂತಿ, ಸರ್ವೋದಯ ಇತ್ಯಾದಿ ವಿಚಾರಗಳಲ್ಲಿ ನಾಯಕ ದೇಶವಾಗಬೇಕೆಂದು ಬಯಸಿದ್ದರು. ನೆಹರೂ ಕೂಡ ಜಗತ್ತಿನ ಯಾವುದೇ ರಾಜಕೀಯ ಬಣ್ಣಕ್ಕೆ ಸೇರದೆ ಭಾರತ ದೇಶ ತನ್ನದೇ ಆದ ನೀತಿಯನ್ನು ಅನುಸರಿಸುವುದಕ್ಕೆ ಸಾಧ್ಯವಾಗುವಂತೆ ತಟಸ್ಥ ನೀತಿಯನ್ನು ಅನುಸರಿಸಿದರು ಮತ್ತು ತಟಸ್ಥ ರಾಷ್ಟ್ರಗಳ ಒಕ್ಕೂಟವನ್ನು ಸ್ಥಾಪಿಸಲು ಪ್ರಯತ್ನಿಸಿದರು. ಇಂಥ ದೊಡ್ಡ ಹೊಣೆಗಾರಿಕೆ ಭಾರತದ ಮೇಲೆ ಇರುವುದರಿಂದ ಭಾರತೀಯ ಮತದಾರ ೨೦೧೪ರ ಲೋಕಸಭೆಯ ಚುನಾವಣೆಯಲ್ಲಿ ಬಹಳ ಜವಾಬ್ದಾರಿಯಿಂದ ತನ್ನ ರಾಜಕಾರಣದ ಪಾತ್ರವನ್ನು ನಿರ್ವಹಿಸಬೇಕಿದೆ. ಇಂದಿನ ಎಲ್ಲ ರಾಜಕೀಯ ಧುರೀಣರು ಮತ್ತು ಅವರ ಪಕ್ಷಗಳು ಅಭಿವೃದ್ಧಿಯ ಮಾತನ್ನೇ ಆಡುತ್ತವೆ. ಆದರೆ ಅಭಿವೃದ್ಧಿಯ ನಿಜವಾದ ವ್ಯಾಖ್ಯೆ ಏನು ಎಂಬುದು ಇವರೆಗೂ ರೂಪಿತವಾಗಿಲ್ಲ. ರಾಜಕೀಯ ಪಕ್ಷಗಳು ತಮತಮಗೆ ತೋರಿದ ರೀತಿಯಲ್ಲಿ ಅಭಿವದ್ಧಿ ಕಾರ್ಯವನ್ನು ಮಾಡುತ್ತವೆ. ಅಭಿವೃದ್ಧಿ ಎಂಬುದು ಬೆಳಕಿನ ದಾರಿಯಾಗದೆ ಕಗ್ಗತ್ತಲೆಯ ಗವಿಯಾಗಿ ಪರಿಣಮಿಸಿದೆ. ಎಲ್ಲವನ್ನು ಪ್ರಮಾಣಾತ್ಮಕ ಅಥವಾ ಸಂಖ್ಯಾ ದೃಷ್ಟಿಯಿಂದ ಪರಿಗಣಿತವಾಗುತ್ತಿದೆ ಹೊರತು ಗುಣಾತ್ಮಕವಾಗಿ ಮೌಲ್ಯಾಧಾರಿತವಾಗಿ ಅಳೆಯಲಾಗುತ್ತಿಲ್ಲ. ಇಂದಿನ ಎಲ್ಲ ರಾಜಕೀಯ ಪಕ್ಷಗಳ ಜೀವನ ಸರ್ವಾಂಗ ಸುಂದರ ದೇಶವನ್ನು ಕಟ್ಟುವುದರಲ್ಲಿ ಸಂಪೂರ್ಣ ವಿಫಲವಾಗಿದೆ. ನವಜಾತ ಪಕ್ಷ ಆಮ್ ಆದ್ಮಿ ಪಕ್ಷವೂ ಕೂಡ ನಿರೀಕ್ಷಿಸಿದಂಥ ರೀತಿಯಲ್ಲಿ ಬದಲಾವಣೆ ತರುವಂಥ ಪ್ರಬುದ್ಧ ಪಕ್ಷವಾಗಿ ಬೆಳೆಯುತ್ತದೆಂಬ ನಿರೀಕ್ಷೆ ಸುಳ್ಳಾಗಬಹುದು. ಆದ್ದರಿಂದ ಬರಲಿರುವ ಲೋಕಸಭಾ ಚುನಾವಣೆಯಲ್ಲಿ ಭಾರತೀಯ ಮತದಾರರು ದೇಶದ ಹಿತವನ್ನು ಗಮನದಲ್ಲಿರಿಸಿಕೊಂಡು ಚಾಣಾಕ್ಷ್ಯತೆಯಿಂದ ಮತ ಚಲಾಯಿಸಲೆಂದು ಹಾರೈಸೋಣ.

* * *

ಗುಲಾಮ ಹಳ್ಳಿಗಳ ಸ್ವತಂತ್ರ ದೇಶ

– *ವಿನೋಬಾ*

ದೇಶಕ್ಕೆ ಸ್ವರಾಜ್ಯ ಬಂತು. ಆದರೆ ಹಳ್ಳಿಗಳಿಗೆ ಬರಲಿಲ್ಲ. ಆದ್ದರಿಂದ ಇಂದು ನಮ್ಮ ದೇಶ ಗುಲಾಮಹಳ್ಳಿಗಳ ಸ್ವತಂತ್ರ ದೇಶವಾಗಿದೆ!

ನಮ್ಮ ದೇಶಕ್ಕೆ ವಿಭಿನ್ನ ಪ್ರಕಾರದ ಪರಿಸ್ಥಿತಿಗಳಿವೆ. ಮೊದಲು ಸ್ವತಂತ್ರ ಹಳ್ಳಿಗಳ ಸ್ವತಂತ್ರ ದೇಶವಿತ್ತು. ಇಂಗ್ಲೀಷರು ಬರುವ ಮೊದಲು ಮುಸಲ್ಮಾನರ ರಾಜ್ಯವಿತ್ತು. ಆಗ ಮೊಘಲ ರಾಜರ ಕಾಲದಲ್ಲಿ ಸ್ವತಂತ್ರ ಹಳ್ಳಿಗಳ ಗುಲಾಮರಾಜ್ಯವಿತ್ತು. ದೇಶ ಪರಾಧೀನವಾಗಿತ್ತು. ಆದರೆ ಹಳ್ಳಿಗಳು ಸ್ವಾಧೀನವಾಗಿದ್ದವು.ಪ್ರತಿಯೊಂದು ಹಳ್ಳಿಯ ವ್ಯವಹಾರವನ್ನು ಹಳ್ಳಿಗರೇ ಸ್ವಯಂ ನಡೆಸುತ್ತಿದ್ದರು. ಹಳ್ಳಿಹಳ್ಳಿಯಲ್ಲಿ ಗ್ರಾಮಪಂಚಾಯತಿಗಳು ಕೆಲಸ ಮಾಡುತ್ತಿದ್ದವು ಮತ್ತು ಹಳ್ಳಿಯ ಬಗ್ಗೆ ಆಲೋಚನೆ ಮಾಡುತ್ತಿದ್ದವು. ಸರ್ಕಾರಕ್ಕೆ ತೆರಿಗೆ ಕೊಡುವರೆಗೆ ಮಾತ್ರ ಅವರ ಸಂಬಂಧ ಸರ್ಕಾರದೊಂದಿಗಿತ್ತು.

ಇಂಗ್ಲೀಷರ ಕಾಲದಲ್ಲಿ ಗುಲಾಮ ಹಳ್ಳಿಗಳ ಗುಲಾಮದೇಶವಾಯಿತು. ಇಂಗ್ಲೀಷರು ಇಲ್ಲಿಗೆ ಬಂದರು ಮತ್ತು ಅವರು ಇಲ್ಲಿಯ ಗ್ರಾಮಪಂಚಾಯತಿ ಮತ್ತು ಗ್ರಾಮೋದ್ಯೋಗಗಳನ್ನು ಸಮಾಪ್ತ ಮಾಡಿದರು. ಇದರ ಪರಿಣಾಮವಾಗಿ ದೇಶ ಪರಾಧೀನವಾಯಿತಲ್ಲದೆ ಹಳ್ಳಿಗಳು ಕೂಡ ಪರಾಧೀನವಾದವು. ಪರಾಧೀನ ಹಳ್ಳಿಗಳ ಪರಾಧೀನ ದೇಶವಾಯಿತು.

ಈಗ ಇಂದು ಸ್ವರಾಜ್ಯದ ನಂತರವೂ ಗುಲಾಮ ಹಳ್ಳಿಗಳ ಸ್ವತಂತ್ರ ದೇಶವಿದೆ. ಇಂಗ್ಲೀಷರು ಹೊರಟು ಹೋದ ಮೇಲೆ ದೇಶವೇನೋ ಸ್ವಾಧೀನವಾಯಿತು. ಆದರೆ ಹಳ್ಳಿಗಳು ಈಗಲೂ ಕೂಡ ಪರಾಧೀನವಾಗಿಯೇ ಇವೆ. ಇಂದು ನಮ್ಮದು ಪರಾಧೀನ ಹಳ್ಳಿಗಳ ಸ್ವಾಧೀನ ದೇಶ.

ಈಗ ನಮ್ಮ ದೇಶ ಸ್ವತಂತ್ರ ಹಳ್ಳಿಗಳ ಸ್ವತಂತ್ರ ದೇಶವಾಗುವ ಸ್ಥಿತಿಯನ್ನು ಪುನಃ ತರಬೇಕಿದೆ. ದೇಶ ಕೂಡ ಸ್ವಾಧೀನವಾಗ ಬೇಕು ಮತ್ತು ಹಳ್ಳಿಗಳು ಕೂಡ ಸ್ವಾಧೀನವಾಗಬೇಕು.

ನೂರಾರು ವರ್ಷಗಳಿಂದ ಇಂಥ ಸ್ಥಿತಿ ಉಂಟಾಗಿಲ್ಲ. ಮುಸಲ್ಮಾನರು ಬರುವ ಮೊದಲು ಈ ಪರಿಸ್ಥಿತಿ ಇತ್ತು. ಆದರೆ ಆ ಕಾಲದಲ್ಲಿ ಇದು ದೊಡ್ಡ ದೇಶವಾಗಿರಲಿಲ್ಲ. ಚಿಕ್ಕ ಚಿಕ್ಕ ಸಮೂಹಗಳಿದ್ದವು. ಆದರೆ ಅವು ಕೂಡ ಸ್ವಾಧೀನವಾಗಿದ್ದವು ಮತ್ತು ಹಳ್ಳಿಗಳು ಕೂಡ ಸ್ವಾಧೀನವಾಗಿದ್ದವು. ಇದು ಹಳೆಯ ವೈದಿಕ ಕಾಲದ ಮಾತು. ಇಂದು ನಾವು ಪುನಃ ಆ ಪರಿಸ್ಥಿತಿಯನ್ನು ಉಂಟು ಮಾಡಬೇಕಿದೆ. ಪರಾಧೀನ ಹಳ್ಳಿಗಳನ್ನು ಸ್ವಾಧೀನವನ್ನಾಗಿ ಮಾಡಬೇಕಿದೆ ಹಾಗೂ

ದೇಶದ ಸ್ವಾಧೀನತೆಯನ್ನು ಕೂಡ ಶಾಶ್ವತವಾಗಿರುವಂತೆ ಮಾಡಬೇಕಿದೆ.

ಇಂದು ನಾವು ಪರಾಧೀನ ಹಳ್ಳಿಗಳ ದೇಶವನ್ನು ಸ್ವತಂತ್ರ ದೇಶವೆಂದು ಕರೆಯುತ್ತೇವೆ. ಮಣ್ಣಿನಪಾತ್ರೆಯನ್ನು ಚಿನ್ನದಕಳಶವೆಂದು ಕರೆಯುವ ಹಾಗೆ ಇದೆ ಈ ಮಾತು. ಒಂದು ಸಲ ಓರ್ವ ಸಾಹಿತಿಯೊಂದಿಗೆ ಮಾತನಾಡುವಾಗ ನಾನು ಈ ದೇಶ ಮಣ್ಣಿನಿಂದ ರಚಿತವಾದ ಸುವರ್ಣ ಕಳಶವೆಂದು ಹೇಳಿದೆ! ಮಣ್ಣಿನಿಂದಾಗಿದ್ದರೆ ಸುವರ್ಣಕಳಶ ಹೇಗೆ? ಸುವರ್ಣಕಳಶವಾಗಿದ್ದರೆ ಮಣ್ಣಿನದು ಹೇಗೆ? ಮಣ್ಣಿನಿಂದಾದ ಸುವರ್ಣಕಳಶ! ಇನ್ನೂ ನಾವು ಅದನ್ನು ಬಂಗಾರದಿಂದ ಮಾಡಲಾದ ಸುವರ್ಣ ಕಳಶವನ್ನಾಗಿ ಮಾಡಬೇಕಿದೆ. ಸ್ವಾಧೀನ ಹಳ್ಳಿಗಳ ಸ್ವಾಧೀನ ದೇಶ ಮಾಡಬೇಕಿದೆ. ಗ್ರಾಮ-ಗ್ರಾಮಗಳಲ್ಲಿ ಗ್ರಾಮಸ್ವರಾಜ್ಯ ಸ್ಥಾಪಿಸಿ ನಾವು ಈ ದಿಕ್ಕಿನತ್ತ ಮುಂದುವರೆಯಬಹುದು.

ಹಿಂದಿನ ಕಾಲದ ಮಾತು. ೩೦೦ ವರ್ಷಗಳ ಹಿಂದಿನದು. ಈಸ್ಟ್ ಇಂಡಿಯಾ ಕಂಪನಿಯ ಜನ ಬಂಗಾಳಕ್ಕೆ ಬಂದರು. ಅಲ್ಲಿ ಅವರು ಪ್ರತಿಯೊಂದು ಹಳ್ಳಿಯ ಸರ್ವೆ ಮಾಡಿದರು. ಆ ಸರ್ವೆಯನ್ನು ವಿವರವಾಗಿ ಬರೆದಿಟ್ಟಿದ್ದಾರೆ ಮತ್ತು ಪುಸ್ತಕಗಳು ಮುದ್ರಣವಾಗಿವೆ. ಕೆಲವು ಪುಸ್ತಕಗಳು ನನಗೆ ನೋಡಲು ಸಿಕ್ಕಿದ್ದವು. ಅತಿ ಸಣ್ಣ ಹಳ್ಳಿಗೂ ಅವರು ಹೋಗಿದ್ದರು. ಅವರ ದಾಖಲೆಯಲ್ಲಿ ಬಂಗಾಲದ ಪ್ರತಿ ೪೦೦ ಜನರಿಗೆ ಒಂದು ಶಾಲೆಯಿದೆ. ಅಂದರೆ ಪ್ರತಿ ಹಳ್ಳಿಯಲ್ಲಿ ಶಾಲೆ ಇತ್ತು. ಶಿಕ್ಷಣ ಪದ್ಧತಿ ಹಳೆಯದಾಗಿತ್ತು. ಆ ಕಾಲದಲ್ಲಿ ಯಾವ ಪದ್ಧತಿಯಿತ್ತೋ ಆ ಪದ್ಧತಿಯಂತೆ ಶಿಕ್ಷಣ ಸಿಗುತ್ತಿತ್ತು. ಆದರೆ ಆ ಕಾಲದಲ್ಲಿ ಭಾರತದಲ್ಲಿ ನಿರಕ್ಷರತೆ ಇತ್ತೆಂದು ಹೇಳುವುದು ತಪ್ಪು. ಮಹಾರಾಷ್ಟ್ರದಲ್ಲಿ ವಿದ್ಯಾರ್ಥಿಗಳು ಮೂರ್ನಾಲ್ಕು ವಿಷಯಗಳನ್ನು ಕಲಿಯಬೇಕಿತ್ತು. ಕುದುರೆ ಸವಾರಿ, ಈಜು, ಮರಗಳನ್ನು ಹತ್ತುವುದು ಈ ವಿಷಯಗಳನ್ನು ಪ್ರತಿಯೊಬ್ಬರಿಗೂ ಕಲಿಸಲಾಗುತ್ತಿತ್ತು. ಅಂದರೆ ಈ ವಿದ್ಯೆ ಕ್ರಿಯಾಶೀಲವಾಗಿತ್ತು. ಅವುಗಳಲ್ಲದೆ ತಮ್ಮ ಒಕ್ಕಲುತನವಂತೂ ಇದ್ದೇ ಇತ್ತು. ತಾತ್ಪರ್ಯವೇನೆಂದರೆ ಆ ಕಾಲದಲ್ಲಿ ಜನರು ಅಶಿಕ್ಷಿತರಾಗಿರಲಿಲ್ಲ.

ಹಳ್ಳಿಹಳ್ಳಿಯಲ್ಲಿ ಗ್ರಾಮಪಂಚಾಯತಿಗಳಿದ್ದವು. ಅವುಗಳ ಪ್ರವೃತ್ತಿಗಳಲ್ಲಿ ಒಂದು ಪ್ರವೃತ್ತಿ ಶಾಲೆ ನಡೆಸುವುದಾಗಿತ್ತು. ಎರಡನೆಯದು ನ್ಯಾಯ, ಮೂರನೆಯದು ವ್ಯವಸ್ಥೆ ಇತ್ಯಾದಿ ಪ್ರವೃತ್ತಿಗಳಿದ್ದವು. ಹಳ್ಳಿಯಲ್ಲಿ ಯಾವೆಲ್ಲ ಕೆಲಸ ನಡೆಯುತ್ತಿದ್ದವೊ ಅದರಲ್ಲಿ ಸ್ವಲ್ಪ ಭಾಗ ಪ್ರತಿಯೊಬ್ಬ ರೈತನಿಗೆ ಸಿಗುತ್ತಿತ್ತು. ಬಹು ದೊಡ್ಡ ಗ್ರಾಮೀಣ ಯೋಜನೆಯಿತ್ತು. ಭೂಮಿ ವ್ಯಕ್ತಿಗತವಾಗಿರಲಿಲ್ಲ. ಜೈಮಿನಿಯ ಮೀಮಾಂಸಶಾಸ್ತ್ರದಲ್ಲಿ ಭೂಮಿಯ ಒಡೆತನ ದೇವರದ್ದೆಂದು ಸ್ಪಷ್ಟವಾಗಿ ಹೇಳಲಾಗಿದೆ. ಯಾರು ವ್ಯವಸಾಯ ಮಾಡುತ್ತಾರೊ ಅವನದ್ದಾಗಿದೆ, ರಾಜನದಲ್ಲ. ಬೆಳೆ ಬಂದರೆ ಅದರ ಮೇಲೆ ಎಲ್ಲರ ಹಕ್ಕಿದೆ ಎಂಬುದು ಪಂಚಾಯತಿಯ ವ್ಯವಸ್ಥೆಯಲ್ಲಿ ನಿಯಮವಿತ್ತು. ವೈದ್ಯ, ಬಡಗಿ, ಕುಂಬಾರ, ಚಮ್ಮಾರ, ನೇಕಾರ ಮುಂತಾದವರೆಲ್ಲರ ಸೇವೆಗಳು ಹಳ್ಳಿಯದೆಂದು

ತಿಳಿಯಲಾಗಿತ್ತು. ಗ್ರಾಮೋದ್ಯೋಗದಲ್ಲಿ ತೊಡಗಿರುವ ಎಲ್ಲರೂ ಹಳ್ಳಿಯ ಸೇವಕರಾಗಿದ್ದರು. ಯಾವುದೇ ಮನೆಯ ನೌಕರರಲ್ಲ. ಈ ಎಲ್ಲ ವ್ಯವಸ್ಥೆಯನ್ನು ನೋಡಿಕೊಳ್ಳುವ ಹೊಣೆ ಗ್ರಾಮಪಂಚಾಯತಿಯದಾಗಿತ್ತು. ಇದೆಲ್ಲದರ ಸ್ವಲ್ಪ ವರ್ಣನೆ ಅನಿಬೆಸೆಂಟರ ಪುಸ್ತಕದಲ್ಲಿ ಓದಲು ಸಿಗುತ್ತದೆ.

ಹಿಂದೂಸ್ಥಾನದಲ್ಲಿ ಈ ಗ್ರಾಮವ್ಯವಸ್ಥೆಯನ್ನು ಮುರಿಯುವ ಕೆಲಸ ಇಂಗ್ಲೀಷರು ಮಾಡಿದರು ಮತ್ತು ಸಫಲರಾದರು. ಅದಕ್ಕೂ ಮೊದಲು ಭಾರತದ ಮೇಲೆ ಅನೇಕರು ದಾಳಿಮಾಡಿದ್ದರು, ಲೂಟಿ ಮಾಡಿದ್ದರು; ಆದರೆ ಗ್ರಾಮ ವ್ಯವಸ್ಥೆ ಮುರಿಯಲಿಲ್ಲ. ಇಂಗ್ಲೀಷರು ಅದನ್ನು ಮುರಿದು ಹಾಕಿದರು. ಹಳ್ಳಿಗಳಲ್ಲಿ ಯಾವ ಯಾವ ಕಚ್ಚಾ ಪದಾರ್ಥ ದೊರೆಯುತ್ತದೆಂಬುದನ್ನು ನೋಡಿ ತಮ್ಮ ದೇಶಕ್ಕೆ ಕಳುಹಿಸಿ ಅಲ್ಲಿ ಸಿದ್ಧ ವಸ್ತು ತಯಾರಿಸಿ ತೆಗೆದುಕೊಂಡು ಬರಬೇಕು ಎಂಬ ಉದ್ದೇಶ್ಯದಿಂದ ಅವರು ಹಳ್ಳಿಗಳ ಸರ್ವೆ ಮಾಡಿದ್ದರು. ಈ ರೀತಿ ಅವರು ತಮ್ಮ ವ್ಯಾಪಾರ ಹೆಚ್ಚಿಸಲು ಬಯಸುತ್ತಿದ್ದರು. ಅದರಿಂದಾಗಿ ಹಳ್ಳಿಯ ಉದ್ಯೋಗ ನಿಂತಿತು. ಕೇವಲ ಕಚ್ಚಾಪದಾರ್ಥವನ್ನು ಬೆಳೆಯುವ ಹಳ್ಳಿಗಳಾಗಿ ಉಳಿದವು. ಇದೆಲ್ಲವೂ ಇಂಗ್ಲೀಷರು ಬಂದ ನಂತರ ಆಯಿತು. ಹಳ್ಳಿಗಳು ಪರಾಧೀನವಾದವು. ಇಂದು ದೇಶ ಸ್ವತಂತ್ರವಾಗಿದೆ. ಆದರೆ ಹಳ್ಳಿಗಳಂತೂ ಪರಾಧೀನವಾಗಿಯೇ ಉಳಿದಿವೆ!

ಒಂದು ಹಳ್ಳಿಯಿತ್ತು. ಅಲ್ಲಿ ಈಸಾಯಿ ಜನ ಇರುತ್ತಿದ್ದರು. ಅವರು ಕುರಿಗಳನ್ನು 'ಷಫೀಲ್ಡ್'ನಲ್ಲಿ ತಯಾರಾದ ಚೂರಿಯಿಂದ ಕತ್ತರಿಸುತ್ತಿದ್ದರು. ಸ್ವರಾಜ್ಯ ಬಂತು. ಇನ್ನು ಷಫೀಲ್ಡ್ ಕತ್ತಿಯಲ್ಲ ಅಲಿಘರ್ ಕತ್ತಿಯಿಂದ ಕುರಿಗಳನ್ನು ಕತ್ತರಿಸುವುದೆಂದು ತೀರ್ಮಾನವಾಯಿತು. ಆದರೂ ಕೂಡ ಕುರಿಗಳು ಅರಚುತ್ತಿದ್ದವು. ಕಟುಕ ಅಂದ "ಮೂರ್ಖ, ಈಗ ಏಕೆ ಅರಚುವೆ? ಈಗಂತೂ ಶಫೀಲ್ಡ್ ಬಿಟ್ಟು ಅಲಿಘರ್ ಚೂರಿಯಿಂಡ ನಿನ್ನನ್ನು ಕತ್ತರಿಸಲಾಗುತ್ತಿದೆ!". ಇದನ್ನು ಕೇಳಿ ಕುರಿ ಸಂತೋಷಪಡುವುದೆ? ಸಾರಂಶವಿಷ್ಟೆ ಸ್ವರಾಜ್ಯ ದಿಲ್ಲಿಗೆ ಬಂದರಷ್ಟೇ ಏನೂ ಆಗುವುದಿಲ್ಲ. ನಾನು ಬಿಸಿಲಿನಲ್ಲಿ ತಿರುಗಾಡುತ್ತಿದ್ದೇನೆ, ತುಂಬ ಬಾಯಾರಿಕೆಯಾಗಿದೆ, ಬಹು ದುಃಖಿ ಆಗುತ್ತಿದ್ದೇನೆ. ಒಂದು ಮರದ ಕೆಳಗೆ ಬಾಯಾರಿಕೆಯಿಂದ ಕುಳಿತು ಬಿಡುತ್ತೇನೆ. ಆಗ ಒಬ್ಬ ಮಿತ್ರ ಹೇಳುತ್ತಾನೆ, "ಅಣ್ಣ ನದಿ ಐದು ಮೈಲು ದೂರವೂ ಕೂಡ ಇಲ್ಲ". ಸ್ವಲ್ಪ ಮುನ್ನಡೆಯುತ್ತೇನೆ. ಮಿತ್ರ ಪುನಃ ಹೇಳುತ್ತಾನೆ, "ಅಣ್ಣ ನದಿ ಇನ್ನು ಎರಡು ಮೈಲು ದೂರದಲ್ಲಿದೆ. ಏಕೆ ಅಳುತ್ತಿ? ನದಿ ಐದು ಮೈಲು ದೂರದ ಬದಲಾಗಿ ಎರಡು ಮೈಲು ದೂರವಾದರೆ ಅದರಿಂದ ಬಾಯಾರಿಕೆ ನೀಗುವುದೆ? ಬಾಯಾರಿದವನಿಗೆ ನೀರು ಹೊಟ್ಟೆಯಲ್ಲಿ ಹೋದಾಗಲೇ ಸಮಾಧಾನವಾಗುವುದು. ಅವನು ಹತ್ತು ಮಾರು ದೂರದಲ್ಲಿದ್ದರೂ ಕೂಡ ಅವನಿಗೆ ಸಮಾಧಾನವಾಗುವುದಿಲ್ಲ. ಅದೇ ರೀತಿ ಯಾವಾಗ ಎಲ್ಲ ಜನರ ಅನುಭವದಲ್ಲಿ ಸ್ವರಾಜ್ಯ ಬರುವುದೊ ಆಗಲೇ

ಹಳ್ಳಿ-ಹಳ್ಳಿಗಳಲ್ಲಿ ಸ್ವರಾಜ್ಯ ಬರುವುದು.

ಇಂದು ಹಳ್ಳಿಯಲ್ಲಿ ಸ್ವರಾಜ್ಯ ಎಲ್ಲಿದೆ? ಈಗ ಸ್ವರಾಜ್ಯದ ಪಾರ್ಸಲ್ ಲಂಡನ್‌ನಿಂದ ದಿಲ್ಲಿಯವರೆಗೆ ಬಂದಿದೆ ಮತ್ತು ಹೆಚ್ಚೆಂದರೆ ದಿಲ್ಲಿಯಿಂದ ಮದ್ರಾಸ್ ಅಥವಾ ಬಹುಶಃ ಮಧುರೈವರೆಗೆ ಬಂದಿರಬಹುದು. ಇನ್ನೂ ಸ್ವರಾಜ್ಯದ ಪಾರ್ಸಲ್ ಹಳ್ಳಿಯವರೆಗೆ ತಲುಪಿಲ್ಲ. ಎಲ್ಲಿಯತನಕ ಹಳ್ಳಿ-ಹಳ್ಳಿಯವರೆಗೆ ಸ್ವರಾಜ್ಯ ತಲುಪುವುದಿಲ್ಲವೊ ಅಲ್ಲಿಯವರೆಗೆ ಮದ್ರಾಸ್-ಮಧುರೈಗೆ ಸ್ವರಾಜ್ಯ ಬಂದರೂ ಕೂಡ ಅದರಿಂದ ಹಳ್ಳಿಗರಿಗೆ ಏನು ಲಾಭವಾಗುವುದು?

ನೀವು ಜವಾಬ್ದಾರಿಯುತ ಜನರಾಗಿದ್ದೀರಿ. ನಿಮ್ಮ ಆಧಾರದ ಮೇಲೆ ಇಡೀ ದೇಶ ನಿಂತಿದೆ. ಆದರೆ ನಿಮ್ಮ ಆಧಾರದ ಮೇಲೆ ದೇಶ ನಿಂತಿದೆ ಎಂದು ಅನಿಸುವುದಿಲ್ಲ. ಬದಲಿಗೆ ದಿಲ್ಲಿಯ ಆಧಾರದ ಮೇಲೆ ದೇಶ ನಿಂತಿದೆ ಎನಿಸುತ್ತದೆ. ದಿಲ್ಲಿಯ ಆಧಾರದ ಮೇಲೆ ಬೆಂಗಳೂರಿದೆ, ಬೆಂಗಳೂರಿನ ಆಧಾರದ ಮೇಲೆ ಮಂಡ್ಯ ಇದೆ, ಮಂಡ್ಯದ ಆಧಾರದ ಮೇಲೆ ಪಂಚಾಯತ್‌ಗಳಿವೆ ಮತ್ತು ಪಂಚಾಯತ್‌ಗಳ ಆರ್ಧಾರದ ಮೇಲೆ ಜನರಿದ್ದಾರೆ ಎಂದು ತಿಳಿಯಲಾಗುತ್ತಿದೆ. ಇದು ಸಂಪೂರ್ಣವಾಗಿ ತಲೆಕೆಳಕಾದ ಕಲ್ಪನೆ. ವಾಸ್ತವದಲ್ಲಿ ಇರಬೇಕಾದ ಸ್ಥಿತಿ ಏನೆಂದರೆ ಜನರ ಆಧಾರದ ಮೇಲೆ ಪಂಚಾಯತಿ ಪಂಚಾಯತಿಗಳ ಆಧಾರದ ಮೇಲೆ ಮಂಡ್ಯ, ಮಂಡ್ಯ ಆಧಾರದ ಮೇಲೆ ಬೆಂಗಳೂರು, ಬೆಂಗಳೂರಿನ ಆಧಾರದ ಮೇಲೆ ದಿಲ್ಲಿ. ಇದು ತನ್ನದೇ ಆದ ನಾಲ್ಕೈದು ಹಂತಗಳ ಮನೆ. ಇದರ ಅತ್ಯಂತ ಕೆಳಗಿನ ಹಂತ ಜನತೆ ಮತ್ತು ಅತ್ಯಂತ ಮೇಲಿನ ಹಂತ ದಿಲ್ಲಿ. ಒಂದು ವೇಳೆ ಮೇಲಿನ ಹಂತ ಗಟ್ಟಿಯಾಗಿದ್ದು ಕೆಳಗಿನ ಹಂತ ದುರ್ಬಲವಾಗಿದ್ದರೆ ಅದು ಬಿದ್ದೇ ಹೋಗುವುದು. ಜೊತೆಗೆ ಮೇಲಿನ ಎಲ್ಲಾ ಹಂತಗಳು ಕೂಡ ಬಿದ್ದು ಹೋಗುವುವು. ಹಳ್ಳಿಗಳಿಗೆ ದಿಲ್ಲಿ ಎಷ್ಟು ಆಧಾರವಾಗಿದೆಯೋ ಅದಕ್ಕಿಂತಲೂ ಮಿಗಿಲಾಗಿ ಹಳ್ಳಿಯ ಆಧಾರ ದಿಲ್ಲಿಗಿದೆ, ಎಂಬುದನ್ನು ಸರಿಯಾಗಿ ತಿಳಿದುಕೊಳ್ಳುವ ಅಗತ್ಯವಿದೆ. ಹಳ್ಳಿಯ ಆಧಾರ ಸಿಕ್ಕಾಗಲೇ ದಿಲ್ಲಿ ಉಳಿಯುವುದು, ಇಲ್ಲವಾದರೆ ಅದು ಉಳಿಯುವಂಥದ್ದಲ್ಲ. ದಿಲ್ಲಿಗೆ ಕೆಳಭಾಗದಿಂದ ಆಧಾರ ಸಿಗದಿದ್ದರೆ ದಿಲ್ಲಿ ಬಿಲ್ಲಿ(ಬೆಕ್ಕು)ಯಾಗುವುದು. ಅದರಲ್ಲಿ ಯಾವ ಶಕ್ತಿಯೂ ಉಳಿಯುವುದಿಲ್ಲ.

'ಸ್ವರಾಜ್ಯ ನಮ್ಮ ಅಧಿಕಾರ, ನಾವು ಅದನ್ನು ಪಡದೇ ತೀರುವೆವು' ಎಂದು ತಿಲಕರು ಮಂತ್ರ ಕೊಟ್ಟಿದ್ದರು. ತದನಂತರ ಗಾಂಧೀ ಬಂದು ಸ್ವರಾಜ್ಯಕ್ಕಾಗಿ ಕಾರ್ಯಕ್ರಮ ಕೊಟ್ಟರು. ಈ ರೀತಿಯ ತಿಲಕರ ಮಂತ್ರ ಮತ್ತು ಗಾಂಧೀಜಿಯವರ ತಂತ್ರ ಎರಡೂ ಜೊತೆಗೂಡಿ ಸ್ವರಾಜ್ಯ ಸ್ಥಾಪಿತವಾಯಿತು.

ಈಗ ಇಷ್ಟು ವರ್ಷಗಳ ಅನುಭವದ ನಂತರ ಸ್ವರಾಜ್ಯ ದಿಲ್ಲಿಗೆ ಬಂತು. ಮೊದಲು ಎಲ್ಲ ತೀರ್ಮಾನಗಳು ಲಂಡನ್‌ನಲ್ಲಾಗುತ್ತಿದ್ದವು. ಈಗ ಅದರ ಬದಲಿಗೆ ಕೊನೆಯ ತೀರ್ಮಾನ ದಿಲ್ಲಿಯಲ್ಲಿಯೇ ಆಗುತ್ತದೆ. ಸ್ವರಾಜ್ಯ ಲಂಡನ್‌ನಿಂದ ದಿಲ್ಲಿ ತಲುಪಿತು. ಇದರ ಹೆಸರು ಭಾರತೀಯ ಸ್ವರಾಜ್ಯ. ಇಲ್ಲಿ ನೀವು ಒಂದು ಹೊಸ

ಮಂತ್ರದೊಂದಿಗೆ ಒಟ್ಟುಗೂಡಿದ್ದೀರಿ. ಮೊದಲನೆಯದು 'ಸ್ವರಾಜ್ಯ ನನ್ನ ಜನ್ಮ ಸಿದ್ಧಹಕ್ಕು' ಎಂಬುದು. ಈಗ ಹೊಸ ಮಂತ್ರ ಬಂದಿದೆ. 'ಗ್ರಾಮ ಸ್ವರಾಜ್ಯ ನಮ್ಮ ಜನ್ಮ ಸಿದ್ಧ ಹಕ್ಕು ಮತ್ತು ಅದನ್ನು ನಾವು ಪಡದೇ ಪಡೆಯುತ್ತೇವೆ'. ಈ ಹೊಸ ಮಂತ್ರ ದೇಶದ ಮುಂದಿದೆ.

ಹೀಗೊಮ್ಮೆ ಊಹಿಸಿಕೊಳ್ಳಿ, ದಿಲ್ಲಿಯಲ್ಲಿ ಸೂರ್ಯೋದಯವಾಗುತ್ತದೆ ಮತ್ತು ಆಗ ಅಲ್ಲಿಂದ ನಿಮ್ಮ ಹಳ್ಳಿಗೆ ತಂತಿಯ ಮೂಲಕ ಇಲ್ಲಿ ಸೂರ್ಯೋದಯವಾಗಿದೆ ಎಂದು ತಿಳಿಸಲಾಗುತ್ತದೆ. ಆಗ ನೀವು ಹೇಳುವಿರಿ, "ಅಣ್ಣಾ, ಎಲ್ಲಿಯವರೆಗೆ ನಮ್ಮ ಹಳ್ಳಿಯಲ್ಲಿ ಸೂರ್ಯೋದಯವಾಗಿಲ್ಲವೋ ಅಲ್ಲಿಯವರೆಗೆ ದಿಲ್ಲಿಯ ಸೂರ್ಯೋದಯದಿಂದ ಏನು ಪ್ರಯೋಜನ?". ಆದ್ದರಿಂದ ಎಂದು ನಮ್ಮ ಹಳ್ಳಿಯ ಪ್ರತಿಮನೆಯ ಮುಂದೆ ಸೂರ್ಯನಾರಾಯಣ ಬಂದು ನಿಲ್ಲುವನೋ ಮತ್ತು ಅವನ ಕಿರಣಗಳು ಪ್ರತಿಯೊಂದು ಮನೆಯನ್ನು ಪ್ರವೇಶಮಾಡುವವೋ ಅಂಥ ಸೂರ್ಯೋದಯವನ್ನು ನಾವು ಒಪ್ಪಿಕೊಳ್ಳುತ್ತೇವೆ.

ಇದೇ ಪ್ರಕಾರ ಸ್ವರಾಜ್ಯದ ಅನುಭವ ಹಳ್ಳಿ-ಹಳ್ಳಿಗೆ ಬೇಕೆಂಬುದನ್ನು ನಾವು ಅರಿತುಕೊಳ್ಳಬೇಕು. ನಮ್ಮ ಹಳ್ಳಿಯಲ್ಲಿ ಸ್ವರಾಜ್ಯವಿದೆಯೆಂದು ಹಳ್ಳಿಗೆ ಅನ್ನಿಸಬೇಕು. ಆದರೆ ಇದರ ಗುರುತೇನು? ಹಳ್ಳಿಯ ಜಗಳ ಹಳ್ಳಿಯಲ್ಲಿಯೇ ತೀರ್ಮಾನವಾಗಬೇಕು. ಹೊರಗೆ ಹೋಗಕೂಡದು. ಆ ಹಳ್ಳಿಯ ಜನರೇ ಒಟ್ಟುಗೂಡಿ ಬಗೆಹರಿಸಿಕೊಳ್ಳಬೇಕು. ಇದು ಗ್ರಾಮ ಸ್ವರಾಜ್ಯದ ಸಂಕೇತ.

ಮನೆಯ ಮೇಲಿನ ಹಂತ ಒಂದು ವೇಳೆ ದುರ್ಬಲವಾಗಿದ್ದರೂ ಕೆಲಸ ನಡೆಯಬಲ್ಲದು. ಆದರೆ ಕೆಳಗಿನ ಹಂತ ದುರ್ಬಲವಾಗಿದ್ದರೆ ಇಡೀ ಮನೆಯೇ ಕುಸಿಯುವುದು.

ಹಳ್ಳಿಯ ಮಕ್ಕಳು, ಹಳ್ಳಿಯ ಎತ್ತುಗಳು, ಹಳ್ಳಿಯ ಕಾರ್ಮಿಕರು, ಇತ್ಯಾದಿ ಎಲ್ಲರೂ ದುರ್ಬಲವಾಗಿದ್ದರೆ ಬೆಳೆ ಹೇಗೆ ತಾನೆ ಬೆಳೆದೀತು? ನಗರದಲ್ಲಿ ಕೂಡ ಹಾಲು, ತುಪ್ಪ, ಕಾಳು, ತರಕಾರಿ, ಹಣ್ಣು ಮುಂತಾದವು ಹಳ್ಳಿಗಳಿಂದಲೇ ಹೋಗುತ್ತವೆ. ಇದೆಲ್ಲವನ್ನು ಇಳುವರಿ ಮಾಡುವ ಗ್ರಾಮೀಣರು ದುರ್ಬಲವಾಗಿದ್ದರೆ ನಗರ ಕೂಡ ದುರ್ಬಲವಾಗುವುದು. ಒಳ್ಳೆಯ ರೈತ ತಾನು ಹಸಿದೂ ಎತ್ತಿಗೆ ಮಾತ್ರ ತಿನುಸುತ್ತಾನೆ. ಎತ್ತು ದುರ್ಬಲವಾದರೆ ನನ್ನ ವ್ಯವಸಾಯ ನಡೆಯುವುದಿಲ್ಲವೆಂದು ಆತನಿಗೆ ತಿಳಿದಿದೆ. ಹಳ್ಳಿಗಳ ಬಗ್ಗೆ ನಗರವಾಸಿಗಳ ಕಾಳಜಿ ರೈತನ ಎತ್ತಿನ ಕಾಳಜಿಯಂತೆ ಇರಬೇಕು. ಹಳ್ಳಿಗಳು ಗಟ್ಟಿಯಾದಗಲೇ ನಗರಗಳು ಉಳಿಯುವವು ಮತ್ತು ದೇಶ ಕೂಡ ಉಳಿಯುವುದು. ಗ್ರಾಮ ಸ್ವರಾಜ್ಯದ ಮೇಲೆಯೇ ದೇಶದ ಸ್ವರಾಜ್ಯ ನಿಂತಿದೆ.

* * *

ತುಂಬು ಬದುಕು... ತುಂಬಿ ಹರಿದ ಬೆಳಕು

– ಎಸ್.ಜೆ.ಸೀತಾರಾಮ್

ಮೈಸೂರಿನ ಎಸ್. ಆರ್. ಸುಬ್ಬರಾವ್ ಜೀವನಸ್ಮೃತಿ

ಪ್ರಚಲಿತ ಕಾಲಮಾನದಲ್ಲಿ ಯಾರಾದರೂ ೬೦ ವಸಂತಗಳನ್ನು ಸದೃಢವಾಗಿ, ಸ್ವತಂತ್ರರಾಗಿ, ಸಂತೋಷವಾಗಿ ದಾಟಿದರೆಂಬುದೇ ಒಂದು ವಿಶೇಷ. ಅಷ್ಟೇ ಸಾಲದೆಂಬಂತೆ, ಅಂಥವರು ತಮ್ಮ ಜೀವನೋತ್ಸಾಹ–ಜೀವಪರ ಸೇವೆಯ ಮೂಲಕ "ಮುಪ್ಪು ಎಂಬುದೊಂದು ಮನೋಸ್ಥಿತಿಯಷ್ಟೆ" ಎಂಬುದನ್ನು ಅದ್ಭುತವಾಗಿ ಮನಗಾಣಿಸುತ್ತಲೂ, ನವ–ದಶಮಾನಗಳಾದ ಮೇಲೂ ನವಯುವಕರಂತಿದ್ದು, ನವಜೀವಸತ್ವವನ್ನು ಎಲ್ಲೆಡೆಯೂ ಹರಡುತ್ತಲೂ, ಬಾಳಿದರೆ ಆಗೇನೆನ್ನೋಣ? ಅಂಥ ವಿರಳ ವರ್ಗದಲ್ಲಿದ್ದು, ಇಪ್ಪತ್ತನೇ ಶತಮಾನದ ಪ್ರಥಮ ಪಾದದಿಂದ, ಇಪ್ಪತ್ತೊಂದನೇ ಶತಮಾನದ ಪ್ರಥಮ ಪಾದದವರೆಗೆ, ತಮ್ಮ ತ್ರಿವಿಕ್ರಮಸದೃಶ ಜೀವಮಾನದಿಂದ ಕಂಗೊಳಿಸಿದ ಮಹನೀಯರು, ಮೈಸೂರಿನ ಎಸ್. ಆರ್. ಸುಬ್ಬರಾವ್.

ವ್ಯಾಸಂಗ ಮತ್ತು ವೃತ್ತಿಜೀವನ

ಅಗ್ರವರ್ತಿ ಎಂಜನಿಯರ್ ಹಾಗೂ ಮೈಸೂರಿನ ವಿಖ್ಯಾತ ನ್ಯಾಶನಲ್ ಇನ್‌ಸ್ಟಿಟ್ಯೂಟ್ ಆಫ್ ಎಂಜನಿಯರಿಂಗ್‌ನ (ಎನ್.ಐ.ಇ.) ಸ್ಥಾಪಕರಲ್ಲೊಬ್ಬರಾದ ಎಸ್. ರಾಮಸ್ವಾಮಿ ಮತ್ತು ಅವರ ಪತ್ನಿ ಲಕ್ಷ್ಮೀ ಅವರ ಮೂರನೆಯ ಶಿಶುವಾಗಿ, ಸುಬ್ಬರಾವ್‌ರವರು ೧೯೨೩ರ ಆಗಸ್ಟ್ ೨೯ರಂದು ತುಮಕೂರಿನಲ್ಲಿ ಜನಿಸಿದರು. ಅವರು ತೊಟ್ಟಿಲಶಿಶುವಾಗಿದ್ದಾಗ ಒಂದು ದಿನ, ನಾಗರಹಾವೊಂದು, ಅವರಿಗೆ ಹಾನಿಯನ್ನುಂಟುಮಾಡದೆ, ಅವರನ್ನು ಕೇವಲ ಹರಸುತ್ತಿತ್ತೇನೋ ಎಂಬಂತೆ ಅವರ ತಲೆಯ ಮೇಲೆ ಹೆಡೆಯಾಡಿಸುತ್ತಿದ್ದುದನ್ನು ಕಂಡು ಬೆಚ್ಚಿ ಬೆರಗಾದ ಅವರ ಹಿರಿಯರು, ಅದೊಂದು ಶುಭಶಕುನವೆಂದೇ ಬಗೆದು, ಅವರಿಗೆ ಸುಬ್ರಹ್ಮಣ್ಯ ದೇವರ ಹೆಸರಿನಲ್ಲಿ "ಸುಬ್ಬರಾವ್" ಎಂದು ನಾಮಕರಣ ಮಾಡಿದರು.

ಸುಬ್ಬರಾವ್‌ರವರು ಮೈಸೂರಿನ ಇಂಟರ್‌ಮೀಡಿಯೇಟ್ ಕಾಲೇಜ್‌ನಲ್ಲಿ (ಇಂದಿನ ಯುವರಾಜ ಕಾಲೇಜ್) ತಮ್ಮ ಪದವಿಪೂರ್ವ ಅಧ್ಯಯನವನ್ನು ಪೂರೈಸಿದರು. ತರುವಾಯ, ಅಂದು ಮೈಸೂರಿನಲ್ಲಿ ಎಂಜನಿಯರಿಂಗ್ ಕಾಲೇಜ್ ಎಂಬುದೇ ಇಲ್ಲದ್ದರಿಂದಾಗಿ, ಬೆಂಗಳೂರಿನ ಪಸಿದ್ಧ "ಯೂನಿವರ್ಸಿಟಿ ಕಾಲೇಜ್ ಆಫ್ ಎಂಜನಿಯರಿಂಗ್" (ಇಂದಿನ ಯು.ವಿ.ಸಿ.ಇ.) ಸೇರಿ, ೧೯೪೯ರಲ್ಲಿ ಸಿವಿಲ್ ಎಂಜನಿಯರಿಂಗ್‌ನಲ್ಲಿ ಬಿ.ಇ. ಪದವಿಯನ್ನು ಗಳಿಸಿದರು.

ಕಾಲೇಜಿನಲ್ಲಿರುವಾಗಲೇ ಅವರಿಗೆ ಮಾನ್ಯವರ ಎಂಜನಿಯರ್ ಕರಾಚಿ ಕೃಷ್ಣರಾಯರ ಮೊಮ್ಮಗಳು ದಮಯಂತಿಯವರೊಡನೆ ವಿವಾಹವಾಯಿತು. ಸ್ತ್ರೀಯರ

ಏಳಿಗೆಯ ಬಗ್ಗೆ ಉನ್ನತಿಶೀಲ ವಾತಾವರಣವಿದ್ದ ಕುಟುಂಬದಿಂದ ಬಂದಿದ್ದ ದಮಯಂತಿಯವರು, ಸುಬ್ಬರಾವ್‌ರವರಂತೆಯೇ ಜನಹಿತಾಕಾಂಕ್ಷಿಗಳಾಗಿದ್ದು, ಅವರಿಗೆ ಹೆಗಲೆಣೆಯಾಗಿ ನಿಂತು, ತಾವು ದುರ್ಬಲ ಸ್ತ್ರೀಯರ ಸಬಲೀಕರಣಕ್ಕಾಗಿ ದುಡಿದರು. ಸುಬ್ಬರಾವ್‌ರವರ ಅಭಿರುಚಿಗಳನ್ನೂ ಸಮಾನವಾಗಿ ಹಂಚಿಕೊಂಡರು. ಹೀಗಾಗಿ, ಅವರಿಬ್ಬರ ದಾಂಪತ್ಯವು ಮುಂದೆ ಅನ್ಯೂನ-ಅನನ್ಯ ಅನ್ಯೋನ್ಯಕ್ಕೆ ಸೂಚಕವಾಯಿತು.

ಸಿವಿಲ್ ಎಂಜನಿಯರುಗಳಿಗೆ ಆಗ ಭಾರಿ ಬೇಡಿಕೆಯಿದ್ದುದರಿಂದಾಗಿ, ಸುಬ್ಬರಾವ್‌ರವರಿಗೆ ಪದವಿ ಮುಗಿಸಿದ ಕೂಡಲೇ ಮುಂಬಯಿ ಸಂಸ್ಥಾನದ ಲೋಕೋಪಯೋಗಿ ಇಲಾಖೆಯಲ್ಲಿ ಸೇವಾವಕಾಶವು ದೊರಕಿತು. ಮುಂದೆ ವಿಶಾಲ ಮೈಸೂರಿನ ರಚನೆಯಾದ ಮೇಲೆ ಅವರು ಮೈಸೂರು ಸರ್ಕಾರದ ಲೋಕೋಪಯೋಗಿ ಇಲಾಖೆಗೆ ವರ್ಗಾವಣೆಗೊಂಡರು. ಅಲ್ಲಿ ತಮ್ಮ ಪರಿಶ್ರಮ, ಪರಿಣತಿ, ಪ್ರತಿಭೆಗಳಿಂದ ಮೇಲೇರುತ್ತ, ೧೯೮೦ರಲ್ಲಿ "ಸೂಪರಿಂಟೆಂಡಿಂಗ್ ಎಂಜನಿಯರ್" ಆಗಿ ನಿವೃತ್ತರಾದರು.

ತಮ್ಮ ಕರ್ತವ್ಯ ಪರಾಯಣತೆ, ದಕ್ಷತೆ, ನಾಯಕೀಯತೆ ಮೊದಲಾದ ಮೇಲ್ಮೆಗಳ ಬಲದಿಂದಾಗಿ, ಸುಬ್ಬರಾವ್‌ರವರು, ಆಗ ಪಿ.ಡಬ್ಲ್ಯೂ.ಡಿ. ಮಂತ್ರಿಗಳಾಗಿದ್ದ ಎಚ್. ಎಮ್. ಚನ್ನಬಸಪ್ಪ ಮತ್ತು ಮಲ್ಲಿಕಾರ್ಜುನಸ್ವಾಮಿಯವರಿಗೆ ಅಚ್ಚುಮೆಚ್ಚಿನ ಅಧಿಕಾರಿಗಳಾದರು. ಮುಖ್ಯಮಂತ್ರಿ ಡಿ. ದೇವರಾಜ ಅರಸುರವರಿಗಂತೂ ಸುಬ್ಬರಾವ್‌ರವರು ಕಣ್ಮಣಿಯೇ ಆದರು. ಮಂತ್ರಿಗಳು ಇವರ ಸೇವೆಯನ್ನು ಪ್ರವಾಸಗಳಲ್ಲಿ ಬಳಸಿಕೊಳ್ಳಲು ತಾವಾಗಿಯೇ ಮುಂದೆ ಬರುತ್ತಿದ್ದರೆಂಬುದು ಇವರ ಸೇವೆಯ ಮೌಲ್ಯ-ಪ್ರಭಾವಗಳನ್ನು ಎತ್ತಿತೋರಿಸುತ್ತದೆ.

ನಿವೃತ್ತಿಯಿಂದ ಸೇವಾವೃತ್ತಿಯೆಡೆಗೆ:-

ಲೋಕೋಪಯೋಗಿ ಇಲಾಖೆಯಿಂದ ಪಡೆದ ನಿವೃತ್ತಿಯು ಸುಬ್ಬರಾವ್‌ರವರ ಲೋಕೋಪಕಾರಿ ಪ್ರವೃತ್ತಿಗೆ ಒಂದು ಹೊಸ ಲೋಕವನ್ನೇ ತೆರೆದಿಟ್ಟಿತು. ಈವರೆಗೆ ಕಾದುಕುಳಿತಿತ್ತೇನೋ ಎಂಬಂತಿದ್ದ ಅವರ "ನಿವೃತ್ತಿಚೇತನ"ವು ಈಗ ವಿವಿಧ ಜನಹಿತ ಕಾರ್ಯಗಳಲ್ಲಿ ಒಮ್ಮೆಲೇ ಹರಿಯಲಾರಂಭಿಸಿತು. ಅದು ಪ್ರಜ್ವಲವಾಗಿ ಪ್ರಕಟವಾದುದೆಂದರೆ, ಅವರ ತೀರ್ಥರೂಪರ ಪ್ರಚಂಡ ಮಾನಸಶಿಶು ಎನ್.ಐ.ಇ.ಯನ್ನು ಅವರು ಮುಂದಿನ ಮೂರು ದಶಕಗಳಲ್ಲಿ ತಮ್ಮ ಕಾಣ್ಕೆ-ಕ್ರಿಯಾಶೀಲತೆಗಳಿಂದ ಎತ್ತರಿಸಿದ ಪರಿಯಲ್ಲಿ. ಅವರು "ಎನ್-ಐ-ಇ" ತ್ರಯಾಕ್ಷರಿಯ ಮಧ್ಯದಲ್ಲಿರುವ "ಐ" ನಲ್ಲಿ ತಮ್ಮ "ಐ" (ಇಂಗ್ಲಿಷ್‌ನಲ್ಲಿ "ನಾನು" ಎಂಬ ಅರಿವು) ಎಂಬುದನ್ನು ಲೀನವಾಗಿಸಿಕೊಂಡು, ಆ ತ್ರಯಾಕ್ಷರಿಯನ್ನೇ ತಮ್ಮ ಜೀವನ್ಮಂತ್ರವನ್ನಾಗಿಸಿಕೊಂಡು, ಆ ಸಂಸ್ಥೆಯನ್ನೇ ಒಂದು ದೇವಸನ್ನಿಧಿಯೆಂದು ದಿನನಿತ್ಯ ಪೂಜಿಸಿ, ಅದನ್ನು "ಇಂಟರ್‌ನ್ಯಾಶನಲ್" ಇನ್‌ಸ್ಟಿಟ್ಯೂಟ್ ಆಫ್ ಎಂಜನಿಯರಿಂಗ್ ಅಂತಸ್ತಿಗೆ ಏರಿಸಿದರು. ಎನ್.ಐ.ಇ. ಸ್ಥಾಪಕ-ರತ್ನತ್ರಯರ ಸಮರ್ಥ ಉತ್ತರಾಧಿಕಾರಿಯಾದ ಸುಬ್ಬರಾವ್‌ರವರು, ತಾವೂ ವಸ್ತುತ: "ಎನ್.ಐ.ಇ. ಚೂಡಾಮಣಿ" ಆಗಿ ಶೋಭಿಸಿದರು.

ಸುಬ್ಬರಾವ್‌ರವರು ರೋಟರಿ-ಇಂಟರ್‌ನ್ಯಾಶನಲ್‌ಗೂ ಸುದೀರ್ಘ-ಸತ್ವಯುತ ಸೇವೆ ಸಲ್ಲಿಸಿ, ೨೦೧೨ರಲ್ಲಿ "ರೋಟರಿ ರತ್ನ" ಪುರಸ್ಕಾರಕ್ಕೆ ಪಾತ್ರರಾದರು.

ಮೈಸೂರಿನ ನಾಗರಿಕರು ಅಲ್ಲಿನ "ನಿವೇದಿತಾ ನಗರ"ದ ವಾಸ್ತುಶಿಲ್ಪಿಯೆಂದೂ ಸುಬ್ಬರಾವ್‌ರವರ ಉಪಕಾರವನ್ನು ಸ್ಮರಿಸುತ್ತಾರೆ. ಆ ಬಡಾವಣೆಯ ನಿರ್ಮಾಣಸಂಘದ ಅಧ್ಯಕ್ಷರಾಗಿದ್ದಾಗ ಅವರು ಅಲ್ಲಿ ಸುಲಭದರದ ನಿವೇಶನಗಳನ್ನು ಮಾಡಿ, ನಿಜ ಅಗತ್ಯವಿದ್ದವರಿಗೆ ಕರೆದು ಹಂಚಿದರು.

ಮೈಸೂರು ಅನಾಥಾಲಯದ ಟ್ರಸ್ಟಿಯಾಗಿ, ಮತ್ತು ಬೆಟ್ಟದಪುರ ಸಂಕೇತಿ ಸಂಘದ ಕಾರ್ಯಕರ್ತರಾಗಿ, ಬಡ ವಿದ್ಯಾರ್ಥಿಗಳಿಗೆ ನೀಡುತ್ತಿದ್ದ ಸೌಕರ್ಯಗಳ ಸುಧಾರಣೆಗಾಗಿಯೂ ಸುಬ್ಬರಾವ್‌ರವರು ಬಿಡುವಿಲ್ಲದೆ ದುಡಿದರು.

ಹೀಗೆ, ಅವರ ಮೊದಲ ಇನಿಂಗ್ಸ್ ಆದ ವೃತ್ತಿಜೀವನದ ಅವಧಿಯು ೩೧ ವರ್ಷಗಳಾಗಿದ್ದರೆ, ಅವರ ಎರಡನೇ ಇನಿಂಗ್ಸ್ ಆದ ಪ್ರವೃತ್ತಿಜೀವನವು, ಇನ್ನೂ ೩ ವರ್ಷ ಹೆಚ್ಚಾಗಿ, ಒಟ್ಟು ೩೪ ಕಾರ್ಯನಿಬಿಡ ವರ್ಷಗಳನ್ನು ವ್ಯಾಪಿಸಿತು.

ಆಪತ್ಕಾಲಕ್ಕಾಗುತ್ತಿದ್ದ ಆಪ್ತಸಹಾಯಕ

ಸಂಘಸಂಸ್ಥೆಗಳಂತೆಯೇ ಸುಬ್ಬರಾವ್‌ರವರ ಸಹಾಯಹಸ್ತ ವ್ಯಕ್ತಿಗಳೆಡೆಗೂ ಯಾವಾಗಲೂ ತೆರೆದಿರುತ್ತಿತ್ತು. ಬಲಗೈಯಲ್ಲಿ ಕೊಟ್ಟಿದ್ದು ಎಡಗೈಗೆ ತಿಳಿಯಬಾರದು ಎಂಬಂತೆ, ಅಜ್ಞಾತವಾಗಿ ಮತ್ತು ನಿಷ್ಕಾಮದಿಂದ, ಅವರು ಅನೇಕ ಆರ್ತರಿಗೆ ಆರ್ಥಿಕವಾಗಿ ನೆರವಾದರು. ಮನೆಗೆಲಸದವರು, ವಸ್ತುಗಳನ್ನು ಮಾರಲು ಬರುವವರು, ಚಿಕ್ಕಪುಟ್ಟ ವೃತ್ತಿಗಳಿಂದ ಹೊಟ್ಟೆಹೊರೆಯುತ್ತಿದ್ದವರು ಇತ್ಯಾದಿ ಅನೇಕರಿಗೆ ಉದ್ಯೋಗಕ್ಕೋ-ಉದ್ಯಮಕ್ಕೋ-ಉನ್ನತಶಿಕ್ಷಣಕ್ಕೋ, ಅವರು ಬಿಚ್ಚುಮನದಿಂದ ಬೆಂಬಲ ನೀಡಿದರು. ಸಂಕಷ್ಟದಲ್ಲಿರುವ ಅನೇಕರಿಗೆ ಜಾತಿ-ಮತ ಎಣಿಸದೆ, ಜೀವನಾರ್ಥಮಾರ್ಗಗಳನ್ನು ತೋರಿದರು.

ವ್ಯಕ್ತಿತ್ವದೊಳಗೊಂದು ಕ್ಷಿಪ್ರನೋಟ:-

ಚಿತ್ರಗ್ರಹಣದಿಂದ ಚಿತ್ತರಂಜನೆ

ಸಾರ್ವತ್ರಿಕ ಜೀವನದಲ್ಲಿದ್ದಂತೆಯೇ, ಸ್ವಂತ ಜೀವನದಲ್ಲೂ ಸುಬ್ಬರಾವ್‌ರವರ ಕ್ರಿಯಾವಲಯವು ಬಹುರೂಪಿಯಾಗಿತ್ತು, ಛಾಯಾಚಿತ್ರಾಂಕನವು ವಿದ್ಯಾರ್ಥಿದೆಸೆಯಿಂದಲೂ ಅವರ ಪ್ರೀತಿಪಾತ್ರ ಹವ್ಯಾಸವಾಗಿದ್ದು, ಸುಂದರ, ಪ್ರಶಸ್ತಿಯೋಗ್ಯ ಬಿಂಬಗಳನ್ನು ಅವರು ಶ್ರೇಷ್ಠ ರಾಲಿಫ್ಲೆಕ್ಸ್ ಕ್ಯಾಮೆರಾದಿಂದ ಸೆರೆಹಿಡಿಯುತ್ತಿದ್ದರು. ಈಚೆಗೆ ವಿಡಿಯೋದತ್ತಲೂ ಒಲವು ಮೂಡಿದ್ದು, ಉತ್ಕೃಷ್ಟ ಚಲನಚಿತ್ರಗಳನ್ನೂ ಅವರು ತೆಗೆದಿದ್ದರು.

ರಂಗಭೂಮಿಯ ಗುರುತ್ವಾಕರ್ಷಣೆ

ಕಾಲೇಜು ದಿನಗಳಲ್ಲಿ ನಾಟಕಗಳ ಆಯೋಜನೆ ಮತ್ತು ಅಭಿನಯದಲ್ಲಿ ಸುಬ್ಬರಾವ್‌ರವರಿಗೆ ಆಳವಾದ ಅಭಿರುಚಿಯಿತ್ತು, ಮತ್ತು ಅವರ ಮೇಲೆ ಕೈಲಾಸಂ ಪ್ರಭಾವ ಬಹಳವಾಗಿತ್ತು. ಎಂಜನಿಯರಿಂಗ್ ವಿದ್ಯಾರ್ಥಿಯಾಗಿದ್ದಾಗ ಒಂದು ದೀಪಾವಳಿಯಲ್ಲಿ ಅವರು ಬೆಂಗಳೂರಿನಲ್ಲಿ ಅದ್ದೂರಿಯಾಗಿ ಆಯೋಜಿಸಿದ್ದ "ಅಳಿಯನ ಅರೈವಲ್" ಎಂಬ ಜನಪ್ರಿಯ ನಾಟಕ, ಮತ್ತು ತಮ್ಮ ಸಹಪಾಠಿ ನವದಂಪತಿಗಳ ಪ್ರದರ್ಶನವು ವೀಕ್ಷಕರನ್ನು ನಿಬ್ಬೆರಗಾಗಿಸಿತು.

ವಿಲಕ್ಷಣ ಲಿಪಿ–ನುಡಿ

ಸುಬ್ಬರಾವ್‌ರವರ ಕೈಬರಹ ಅಚ್ಚಿಟ್ಟಂತಿದ್ದು ಅಚ್ಚರಿಗೊಳಿಸುತ್ತಿತ್ತು; ಕಡೆಯವರೆಗೂ ಅದು ಹಾಗೆಯೇ ಉಳಿದಿತ್ತು. ಅವರ ಸಹಿಯು ವಿಚಿತ್ರವಾಗಿದ್ದು, ಅದರಲ್ಲಿ 'ಆರ್" ಎಂಬ ಮಧ್ಯಾಕ್ಷರವು ಎದ್ದು ಕಾಣುತ್ತಿದ್ದುದು ಅವರು ತಮ್ಮ ತಂದೆಗೆ ಕೊಡುತ್ತಿದ್ದ ಪ್ರಾಮುಖ್ಯವನ್ನೂ, ಮತ್ತು ಅದರ ಮುಂದಿನ, ಅವರ ಹೆಸರಿನದಾದ, ಅಕ್ಷರಗಳು ಸಣ್ಣದಾಗಿದ್ದುದು ಅವರು ತಮ್ಮನ್ನು ತಂದೆಯ ಮುಂದೆ ಒಂದು ಗೌಣ ಬಿಂದುವಾಗಿಯಷ್ಟೇ ಗುರುತಿಸಿಕೊಂಡಿದ್ದನ್ನೂ ಸಂಕೇತಿಸುತ್ತಿದ್ದವು.

"ಶುಭ್ರರಾವ್"

ಕೈಬರಹದಂತೆಯೇ, ಅವರ ಲಕ್ಷಣಗಳಲ್ಲಿ ಒಂದಾದಂತಿದ್ದ ಅವರ ಅರೆತೋಳಿನ ಬಿಳಿಯ ಷರಟು ಕೂಡ ಶುಭ್ರವಾಗಿ, ಅವರ ನಿರ್ಮಲ ಅಂತಃಕರಣದ ಪ್ರತಿಫಲನವಾಗಿತ್ತು. ಶುಕ್ಲಾಂಬರಧರರಾಗಿ, ಪ್ರಸನ್ನವದನರಾಗಿ, ಶಾಂತಾಕಾರರಾಗಿ ಇರುತ್ತಿದ್ದ ಅವರನ್ನು ಕಂಡೊಡನೆಯೇ, ಕಾಣಬಂದವರಿಗೆ ಚತುರ್ಭುಜಬಲ ಬಂದಂತಾಗಿ, ತಮ್ಮ ವಿಘ್ನಗಳು ಉಪಶಾಂತವಾದಂತೆನಿಸುತ್ತಿತ್ತು. "ಶುಭ್ರರಾವ್" ಅಷ್ಟೇ ಅಲ್ಲ; ಅವರು ಸದಾ ಶುಭಕೋರುವ "ಶುಭರಾವ್" ಆಗಿದ್ದರು, ಮತ್ತು ತಮ್ಮ ಅತಿಶಯ ಸಜ್ಜನಿಕೆಯಿಂದಾಗಿ "ಸೂಪರ್‌ರಾವ್" ಕೂಡ ಆಗಿದ್ದರು.

"ದೇಶದ ಅತ್ಯಂತ ದೃಢಕಾಯ ವ್ಯಕ್ತಿ"

೯೦ರ ಪ್ರಾಯದಲ್ಲಿ ಸುಬ್ಬರಾವ್‌ರವರ ಸ್ವಾಸ್ಥ್ಯವನ್ನು ನೋಡಿ, ಅವರು "ದೇಶದ ಅತ್ಯಂತ ದೃಢಕಾಯ ವ್ಯಕ್ತಿ" ಎಂಬ ಲಿಖಿತ "ಪ್ರಶಸ್ತಿ"ಯನ್ನು ಕೊಟ್ಟವರು ಬೆಂಗಳೂರಿನ ಖ್ಯಾತ ವೈದ್ಯ ತಜ್ಞ ಡಾ. ಶ್ರೀಕಂಠ. ಸುಬ್ಬರಾವ್‌ರವರು ವಾಸ್ತವವಾಗಿ ಕಡೆಯ ತನಕವೂ ಅವರ ವಯೋಮಾನಕ್ಕೆ ದುರ್ಲಭವಾದ ಆರೋಗ್ಯಭಾಗ್ಯವನ್ನು ಆನಂದಿಸಿದರು. ಕಾಲೇಜಿನ ಮಹಡಿ ಮೆಟ್ಟಿಲುಗಳನ್ನು ಅನಾಯಾಸವಾಗಿ ಏರುತ್ತಿದ್ದ, ಮತ್ತು ಹಾಸ್ಟೆಲ್‌ನ ಸ್ಥಿತಿಗತಿಯನ್ನು ಪರೀಕ್ಷಿಸಲು ಅರೆರಾತ್ರಿಯಲ್ಲಿ ಅಲ್ಲಿಗೆ ಧಾವಿಸುತ್ತಿದ್ದ ಅವರಿಗೆ, "ತೊಂಬತ್ತು ತುಂಬಿತ್ತು" ಎಂದು ಯಾರೂ ನಂಬುತ್ತಿರಲಿಲ್ಲ. ಅವರನ್ನು ನೋಡಿದವರಿಗೆ ಅವರಲ್ಲಿ ವಯೋ ("ಬಯೋ") ವೃದ್ಧರಿಗಿಂತ, ಜೀವನಾನುಭವದಿಂದ ವೃದ್ಧಿಯಾದ ಮಹೋದಯರೊಬ್ಬರ ದರ್ಶನವೇ ಸಿಗುತ್ತಿತ್ತು. ಅವರ ನಿಲವು–ನಡಪುಗಳು "ತೊಂಬತ್ತೋ–ಹತ್ತೊಂಬತ್ತೋ?!" ಎಂದು ಜನರನ್ನು ಚಕಿತಗೊಳಿಸುವಂತಿದ್ದವು.

ರುಚಿಯಲ್ಲೂ ಅಭಿರುಚಿ

ಜೀವನದ ಇಳಿತಗಳಲ್ಲೂ ಒಳಿತನ್ನೇ ಕಾಣುತ್ತ, ಉಬ್ಬರಗಳಲ್ಲೆಂದೂ ಅಬ್ಬರಿಸದ ಸುಬ್ಬರಾವ್‌ರವರು, ತಮ್ಮ ನಿಡುಗಾಲದ ಬಾಳಸಂಗಾತಿ ನಡುಪ್ರಾಯದಲ್ಲೇ ಕಣ್ಮರೆಯಾದಾಗ, ಕಣ್ಣೀರು ಹಾಕುತ್ತ ಕೂರಲಿಲ್ಲ; ಒಬ್ಬಂಟಿಯಾದೆನೆಂದು ಸ್ವಾನುಕಂಪಕ್ಕೆ ಜಾರಲಿಲ್ಲ. ಯಾರ ನೆರವೂ ಇಲ್ಲದೆ, ತಾನು ಇಳಿವಯಸ್ಸಿನಲ್ಲೂ ಏರುತ್ತಲೇ ಸಾಗಬಲ್ಲೆ ಎಂಬುದನ್ನು ನಿದರ್ಶಿಸಿ, ಅವರು ನೋಡುಗರನ್ನು ಪುಳಕಿತಗೊಳಿಸಿದರು. ದಮಯಂತಿಯವರ ಕಾಲಾನಂತರ ಸುಬ್ಬರಾವ್‌ರವರು ತಮ್ಮದೇ ಆದ ನಳಪಾಕಕ್ಕೆ

ಹೆಸರಾದರು. ಅಡುಗೆಯನ್ನು ದಿನಕ್ಕೆರಡು ಬಾರಿ ಖುಷಿಯಿಂದ ಮಾಡಿಕೊಳ್ಳುತ್ತಿದ್ದರು. ಬಗೆಬಗೆಯ ತಿಂಡಿಗಳನ್ನು ತಯಾರಿಸಿ, ಅತಿಥಿಗಳಿಗೂ ಪ್ರೇಮಾದರಗಳಿಂದ ತಿನ್ನಿಸುತ್ತಿದ್ದರು. ಹೊಸ ರುಚಿಗಳ ಪ್ರಯೋಗದಲ್ಲೂ ಆಸಕ್ತರಾಗಿದ್ದರು.

"ಗಾಡ್"ನಲ್ಲಿ ಗಾಢಭಕ್ತಿ

ಸುಬ್ಬರಾವ್ ಪ್ರತಿದಿನ ಒಂದು ಗಂಟೆಯ ಸಮಯವನ್ನಾದರೂ ದೇವರ ಪೂಜೆಗೆ ವಿನಿಯೋಗಿಸುತ್ತಿದ್ದರು. ಅನೇಕ ದಿನಚರಿಯ ಮಂತ್ರಗಳು ಅವರಿಗೆ ಬಾಯಿಪಾಠವಾಗಿದ್ದವು, ಮತ್ತು ಅವರ ಪ್ರಿಯವಾದ ಗಣೇಶ-ಸಹಸ್ರನಾಮವನ್ನು ಅವರು ಆಸ್ಪತ್ರೆಯಲ್ಲೂ, ಪ್ರಾಣ ತ್ಯಜಿಸುವವರೆಗೂ ಜಪಿಸುತ್ತಿದ್ದರು. ಅವರು ಕುಲದೇವ ಈಶ್ವರನ ಪ್ರೀತ್ಯರ್ಥವಾಗಿ ಮೈಸೂರಿನ ಗೀತಾರಸ್ತೆಯಲ್ಲಿರುವ ಈಶ್ವರ ದೇವಸ್ಥಾನದ ಟ್ರಸ್ಟ್‌ನ ಅಧ್ಯಕ್ಷತೆಯನ್ನು ಒಪ್ಪಿಕೊಂಡು, ಒಂದು ಪುಟ್ಟ ಗುಡಿಯಂತಿದ್ದ ಆ ಮಂದಿರವನ್ನು ಒಂದು ದೇಗುಲಸಂಕೀರ್ಣವನ್ನಾಗಿಸಿದರು. ಅಲ್ಲೊಂದು ಪ್ರವಚನಮಂದಿರ ಮತ್ತು ಸಮಾರಂಭ ಭವನದ ಅವಳಿ-ಅನುಕೂಲಗಳ ನಿರ್ಮಾಣಕ್ಕೂ ಅವರೇ ನೇತೃತ್ವ ವಹಿಸಿದರು.

ಹತ್ತು ಹಲವು ಅಭಿರುಚಿಗಳು-ಅಭಿಲಕ್ಷಣಗಳು

ನಡೆವಳಿ-ನುಡಿವಳಿಗಳ ಏಕತೆ, ವಿನಮ್ರತೆ, ಪ್ರತೀಕಾರ-ಪ್ರತಿಸ್ಪರ್ಧೆ-ಪ್ರತಿಫಲಾಪೇಕ್ಷೆ ಇಲ್ಲದಿರುವಿಕೆ, ಅಧಿಕಾರದ ಸದುಪಯೋಗ, ಆಬಾಲವೃದ್ಧರಾದಿಯಾಗಿ ಎಲ್ಲರಲ್ಲೂ, ಎಲ್ಲ ಭೇದಗಳನ್ನೂ ಮೀರಿದ ಸ್ನೇಹ ಮತ್ತು ಗೌರವ, ಅನಗತ್ಯ ಸಹಾಯವನ್ನು ನಿರಾಕರಿಸುವ ವ್ಯಕ್ತಿಸ್ವಾತಂತ್ರ್ಯದ ಕೆಚ್ಚು, ಹೊಸ ವಿಷಯಗಳ ಕಲಿಕೆಯಲ್ಲಿ ಮಕ್ಕಳಂಥ ಕುತೂಹಲ, ಎಂಥ ಹಳೆಯ ಪರಿಚಯದವರನ್ನಾಗಲೀ-ಘಟನೆಗಳನ್ನಾಗಲೀ 'ಥಟ್!' ಎಂದು ಗುರುತಿಸುವಂಥ, ಮತ್ತು ಇಡೀ ಪ್ರವರಗಳನ್ನು ಅಲ್ಲೇ ಪಟಪಟನೆ ಉದುರಿಸುವಂಥ ಜ್ಞಾಪಕ ಶಕ್ತಿ; ಅತಿಥಿಗಳನ್ನು ಬರಮಾಡಿಕೊಳ್ಳುವ ಮತ್ತು ಸತ್ಕರಿಸುವ ಕಾತರ ... ಇಂಥ ಗುಣವೈಶಿಷ್ಟ್ಯಗಳು, ಮುಪ್ಪರಿಯದ ಅವರ ವ್ಯಕ್ತಿತ್ವದಲ್ಲಿ ಮುಪ್ಪುರಿಗೊಂಡಿದ್ದವು.

ನಿಜಕ್ಕೂ, ಸಿವಿಲ್ ಎಂಜನಿಯರ್ ಆಗಿ ಸುಬ್ಬರಾವ್ ಅವರು ತಮ್ಮ ವ್ಯಕ್ತಿತ್ವವನ್ನೇ ತಮ್ಮ ಅತ್ಯುನ್ನತ ಕಟ್ಟಡವನ್ನಾಗಿ ಮುಂದಿಟ್ಟರು. ಮೈತ್ರಿ-ಸಹಕಾರಗಳ ಅನೇಕ "ಸಿವಿಲಾಂಜನೇಯ" ಸೇತುವೆಗಳನ್ನು ಜೋಡಿಸಿದರು. "ಸಿವಿಲ್ ಎಂಜನಿಯರ್" ಎಂದಾಗುವ ಮೂಲ ಅರ್ಥದಲ್ಲಿ "ಸಭ್ಯತೆಯ ಶಿಲ್ಪಿ"ಯೇ ಆಗಿ ಅವರು ಜನಮನ್ನಣೆ ಗಳಿಸಿದರು.

ಅವರ ವ್ಯಕ್ತಿವಿಶೇಷಣಗಳನ್ನು ಜಗತ್ತು ಹೇಗೆ ಗುರುತಿಸಿತ್ತು ಎಂಬುದಕ್ಕೆ, ಅವರು ಗತಿಸಿದ ಮೇಲೆ ಅವರಿಗೆ ಹರಿದು ಬಂದ ನುಡಿನಮನಗಳಲ್ಲಿ, ಗುಣವಚನಗಳಲ್ಲಿ ವ್ಯಾಪಕ ಪ್ರತಿಧ್ವನಿ ಸಿಗುತ್ತದೆ. ಸಮಾಜದ ವಿವಿಧ ವರ್ಗಗಳ-ಸ್ತರಗಳ ಆದ್ಯಂತವೂ ಜನರು ಅವರ ಹೆಸರನ್ನು ಕೇಳಿದೊಡನೆಯೇ ಮಾಡುವ ಪ್ರಣಾಮದಲ್ಲಿ, ಅವರ ಹಿರಿಮೆಗೆ ಒಂದು ಪ್ರಮಾಣ ಸಿಗುತ್ತದೆ.

ಸುಬ್ಬರಾವ್‌ರವರ ವ್ಯಕ್ತಿವೃತ್ತಾಂತದಲ್ಲಿ, ಅವರಿಗೂ ಅವರ ತಂದೆಗೂ ಇದ್ದ ಹೋಲಿಕೆಯನ್ನು ಪ್ರಸ್ತಾಪಿಸದಿರಲಾಗದು. ಎಲ್ಲ ದೃಷ್ಟಿಯಿಂದಲೂ ಸುಬ್ಬರಾವ್‌ರವರು ರಾಮಸ್ವಾಮಿಯವರ "ಎರಡನೇ ಮುದ್ರಣ"ವೇ ಆಗಿದ್ದರೆಂದರೆ ಆಶ್ಚರ್ಯವಾಗಬಹುದು,

ಅತಿನುಡಿಯೆನಿಸಬಹುದು. ಆದರೂ, ಅವರಿಬ್ಬರ ನಡುವೆ ಖಂಡಿತವಾಗಿ ಒಂದು ಗಮನಾರ್ಹ ವ್ಯತ್ಯಾಸವಿತ್ತು: ರಾಮಸ್ವಾಮಿಯವರು ಸರಿಯಾಗಿ ಎಪ್ಪತ್ತು ವರ್ಷಗಳು ಜೀವಿಸಿದರು; ಆದರೆ ಸುಬ್ಬರಾವ್‌ರವರಾದರೋ ತೊಂಭತ್ತನ್ನೂ ದಾಟಿ ನಡೆದರು. ಹೀಗಾಗಿ, ಒಂದು ವೇಳೆ ರಾಮಸ್ವಾಮಿಯವರು ಎಪ್ಪತ್ತರಿಂದಾಚೆ ಇಪ್ಪತ್ತು ವರ್ಷಗಳು ಬದುಕಿದ್ದಲ್ಲಿ ಹೇಗಿರುತ್ತಿದ್ದರು? ಎಂಬ ಕೌತುಕಕ್ಕೆ ಸುಬ್ಬರಾವ್‌ರವರು ಒಂದು ಅಂದವಾದ ಅಂದಾಜನ್ನು ಒದಗಿಸಿಕೊಟ್ಟು, "ಯಶೋನಿಧಿ ಪಿತನ ಯೋಗ್ಯ ಸುತ"ನಾಗಿ ಧನ್ಯಾತ್ಮರಾದರು.

ಕರ್ಮಯೋಗಿ-ಸದ್ಭೋಗಿ-ಸಿದ್ಧತ್ಯಾಗಿ-ನಿಜನಿರೋಗಿ

ಭಗವದ್ಗೀತೆಯ ಭಕ್ತಿಯೋಗದಲ್ಲಿ ಬರುವ "ಉತ್ತಮ ಪುರುಷ"ನ ಚಿತ್ರಣವನ್ನು ಹೋಲುವಂಥ ಧೀರೋದಾತ್ತ ಬಾಳನ್ನು ಬಾಳಿ, ಎಲೆಮರೆಯ ಅಲರಾಗಿ ಇಂಪುಕಂಪಿನ ಅಲೆಗಳನ್ನುಕ್ಕಿಸಿ, ಸುಬ್ಬರಾವ್‌ರವರು ತಮ್ಮ ದೀರ್ಘಾಯುಷ್ಯಕ್ಕೆ ಒಂದು ಅಪ್ರತಿಮ ತೇಜಸ್ಸನ್ನು ತಂದುಕೊಂಡರು. "ಇಂಥವರು ಈ ಬದಲಾದ ಕಾಲಘಟ್ಟದಲ್ಲೂ ನಮ್ಮ ನಡುವೆಯೇ ನಡೆದಾಡಿದರಲ್ಲ! ... ಇದ್ದರೆ ಹೀಗಿರಬೇಕಲ್ಲವೇ?!" ಎಂದು ಜಗಮೆಚ್ಚುವಂತೆ ಝಗಮಗಿಸಿ ಜಗವನ್ನಗಲಿದರು.

೩೩,೦೦೦ ಘನದಿನಮಾನಗಳಷ್ಟು ಅವಿರತವಾಗಿ, ಅತಿಶಯವಾಗಿ, ದುಡಿದು-ಮಿಡಿದ ಸುಬ್ಬರಾವ್‌ರವರ ಜೀವನಾಡಿಯು, ೧೭ನೇ ಡಿಸೆಂಬರ್ ೨೦೧೩ಕ್ಕೆ ಸಂದ ಮಂಗಳವಾರದ ಹೇಮಂತರಾತ್ರಿ ೧೦:೪೦ಕ್ಕೆ, ಮಂಗಳವನ್ನು ಮಿಡಿದು, ಮೌನಿಯಾಗಿ ಮಾಯವಾಯಿತು. ಆದರೆ ಸಾತ್ವಿಕಸತ್ವಪೂರ್ಣ ಜೀವನಪಥದಲ್ಲಿ ಅವರನ್ನು ಮುನ್ನಡೆಸಿದ್ದ ಅವರ ಒಳಚೇತನವು, ನಿರಂತರ ಬೆಳಕನ್ನು ನೀಡುವ ನಿಶ್ಚಲನಂದಾದೀಪವು. ಅದಕ್ಕೆ ಮರಣವಿಲ್ಲ, ಮುಪ್ಪಿಲ್ಲ, ವಿರಾಮವೂ ಇಲ್ಲ. ಆ ನಿತ್ಯನೀರಾಂಜನವು, ಅವರ ಜೀವನವು ಸ್ಪರ್ಶಿಸಿದ ಎಲ್ಲರ ಬದುಕೂ ಬೆಳಗುವಂತೆ, ಆ ಎಲ್ಲರೂ ಮುಂದೆ ಬೇರೆಲ್ಲರ ಬದುಕನ್ನೂ ಬೆಳಗಿಸುವಂತೆ, ಶಕ್ತಿಯನ್ನು ಕೊಡುತ್ತಲಿರಲಿ! ತೊಂಭತ್ತು ವರ್ಷ ಪರ್ಯಂತ ಅವರಲ್ಲಿ ತುಂಬಿ ತುಳುಕಿದ್ದ ಅನುಪಮ ಹರ್ಷವು ಅನುಗಾಲವೂ ಸ್ಫೂರ್ತಿಸ್ಪರ್ಶವನ್ನು ನೀಡುತ್ತಲಿರಲಿ!

* * *

ಕೈಮಗ್ಗ ಉದ್ಯೋಗವನ್ನು ಸರ್ಕಾರ ನಾಶಮಾಡದಿರಲಿ

- ಸುರೇಂದ್ರ ಕೌಲಗಿ

ಸ್ವಾತಂತ್ರ್ಯ ಬಂದಾದ ಮೇಲೆ ಕೈಗಾರೀಕರಣ ಮತ್ತು ಜಾಗತೀಕರಣದಿಂದಾಗಿ ದೇಶದಲ್ಲಿದ್ದ ಅನೇಕ ಪ್ರಕಾರದ ಗ್ರಾಮೋದ್ಯೋಗಗಳು ನಾಮಾವಶೇಷವಾದವು. ಇಂದಿನ ಮಕ್ಕಳಿಗೆ ಕುಂಬಾರಿಕೆ, ಗಾಣ, ಕೊಟ್ಟಣ, ನೇಕಾರಿಕೆ, ಬಿದಿರಿನ ಕೆಲಸ ಮುಂತಾದ ಗ್ರಾಮೋದ್ಯೋಗಗಳ ಪರಿಚಯವೇ ಇಲ್ಲವಾಗಿದೆ. ನಮ್ಮ ದೇಶದಲ್ಲಿ ಅವು ನಡೆಯುತ್ತಿದ್ದವೆಂಬುದು ಕೂಡ ಅವರಿಗೆ ಗೊತ್ತಿಲ್ಲವಾಗಿದೆ. ನೇಕಾರಿಕೆ ಗ್ರಾಮೋದ್ಯೋಗಗಳ ಪ್ರಧಾನ ಸಂಕೇತವಾಗಿದೆ. ನೇಕಾರಿಕೆ, ದೇಶದಾದ್ಯಂತ ಲಕ್ಷಾಂತರ ಜನರಿಗೆ ಉದ್ಯೋಗ ಕೊಟ್ಟಿದೆ. ಎಲ್ಲಾ ರಾಜ್ಯಗಳಲ್ಲಿಯೂ ಈ ಕೈಗಾರಿಕೆ ಚಿಕ್ಕ ಅಥವಾ ದೊಡ್ಡ ಪ್ರಮಾಣದಲ್ಲಿ ನಡೆಯುತ್ತಿದೆ. ಭಾರತದಲ್ಲಿ ಬ್ರಿಟಿಷರ ವಸಾಹತುಶಾಹಿ ಕಾಲದಲ್ಲಿ ಕೂಡ ನೇಕಾರಿಕೆ ಉಚ್ಛ್ರಾಯ ಸ್ಥಿತಿಯಲ್ಲಿತ್ತು. ಮ್ಯಾಂಚೆಸ್ಟರ್‌ನಲ್ಲಿದ್ದ ಜವಳಿ ಕೈಗಾರಿಕೆಯ ಪ್ರಬಲವಾದ ಪೈಪೋಟಿಯನ್ನು ದೇಶದ ನೇಕಾರಿಕೆ ಎದುರಿಸಿತ್ತು. ಬ್ರಿಟಿಷರು ಪ್ರಾಚೀನತಮವಾದ ಮತ್ತು ನಾಗರೀಕತೆಯ ಸಂಕೇತವಾಗಿದ್ದ ನೇಕಾರಿಕೆಯನ್ನು ವ್ಯವಸ್ಥಿತವಾಗಿ ಹಾಗೂ ಅಮಾನುಷವಾಗಿ ಹಾಳುಮಾಡಿದರು. ಅದರಿಂದಾಗಿ ದೇಶದ ನೇಕಾರರು ಕಂಗಾಲಾದರು. ಗಾಂಧೀಜಿ ಭಾರತದ ರಾಜಕಾರಣದ ವೇದಿಕೆಯ ಮೇಲೆ ಕಾಣಿಸಿಕೊಂಡ ನಂತರ ಖಾದಿ ಆಂದೋಲನದ ಮೂಲಕ ನೇಕಾರರಿಗೆ ಹೊಸ ಚೈತನ್ಯ ಬಂದಿತು. ಎಲ್ಲೆಡೆ ಕೈಮಗ್ಗಗಳು ಪ್ರಾರಂಭವಾದವು. ಖಾದಿ ಮತ್ತು ಕೈಮಗ್ಗದ ಬಟ್ಟೆ ಸ್ವದೇಶಾಭಿಮಾನದ ಸಂಕೇತಗಳಾದವು. ಖಾದಿ ದೇಶದ ಸ್ವಾತಂತ್ರ್ಯಕ್ಕಾಗಿ ಜನತೆ ಮಾಡಿದ ತ್ಯಾಗ ಮತ್ತು ಬಲಿದಾನಗಳ ಸಂಕೇತವಾಯಿತು. ಮುಂದೆ ಸ್ವತಂತ್ರ ಭಾರತದ ಬಾವುಟದಲ್ಲಿ ಚರಖ ಕಾಣಿಸಿಕೊಂಡಿತಲ್ಲದೆ ಬಾವುಟಕ್ಕೆ ಬೇಕಾದ ಬಟ್ಟೆ ಕೈದಾರದಿಂದಲೇ ತಯಾರಾಗಿರಬೇಕೆಂಬ ನಿಯಮ ಬಂದಿತು ಮತ್ತು ಕಡ್ಡಾಯವಾಯಿತು. ದೇಶದ ತುಂಬೆಲ್ಲಾ ನೇಕಾರರ ಸಹಕಾರ ಸಂಘಗಳು ಹುಟ್ಟಿಕೊಂಡವು. ಮಗ್ಗಗಳ ಸಂಖ್ಯೆಯೂ ಹೆಚ್ಚಾಯಿತು; ಕೈಮಗ್ಗ ಬಟ್ಟೆಯ ಉತ್ಪಾದನೆಯು ಹೆಚ್ಚಾಯಿತು. ಈಗ ಭಾರತದಲ್ಲಿ ಮೂವತ್ತು ಲಕ್ಷ ಕೈಮಗ್ಗಗಳಿವೆ ಮತ್ತು ನಲವತ್ತನಾಲ್ಕು ಲಕ್ಷ ನೇಕಾರರಿದ್ದಾರೆ. ಕೃಷಿಯ ನಂತರ ಗ್ರಾಮಾಂತರ ಪ್ರದೇಶದಲ್ಲಿ ಉದ್ಯೋಗ ಕೊಡುವ ಕ್ಷೇತ್ರ ನೇಕಾರಿಕೆಯಾಗಿದೆ. ಕೈಮಗ್ಗ

ಕ್ಷೇತ್ರದ ಈ ಬೃಹತ್ ಪ್ರಮಾಣವನ್ನು ನೋಡಿ ಮತ್ತು ಅದು ಒದಗಿಸುತ್ತಿರುವ ಉದ್ಯೋಗವಕಾಶ ನೋಡಿ ಭಾರತ ಸರ್ಕಾರ ಅಖಿಲ ಭಾರತ ಕೈಮಗ್ಗ ಮಂಡಳಿಯನ್ನು ಸ್ಥಾಪಿಸಿ ಅನೇಕ ರೀತಿಯಲ್ಲಿ ಆ ಕೈಗಾರಿಕೆ ಬೆಳೆಯುವಂತೆ ಮಾಡಿತು. ನೇಕಾರರಿಗೂ ಅನೇಕ ಸವಲತ್ತುಗಳನ್ನು ಒದಗಿಸಿತು. ಆನೇಕ ಕಡೆಗೆ ಕೈಮಗ್ಗ ಸಂಘಗಳ ಒಕ್ಕೂಟಗಳು ಸ್ಥಾಪಿತವಾದವು. ಮುಂದೆ ಕ್ರಮೇಣ ಕೈಮಗ್ಗ ಸಂಸ್ಥೆಗಳ ಅಖಿಲ ಭಾರತದ ಒಕ್ಕೂಟದ ರಚನೆಯೂ ಆಯಿತು. ಕೈಮಗ್ಗ ಉದ್ಯಮದ ಅಭಿವೃದ್ಧಿಗಾಗಿ ನೇಕಾರಿಕೆಯಲ್ಲಿ ವೈವಿಧ್ಯತೆಯನ್ನು ತರುವುದಕ್ಕಾಗಿ ಕೇಂದ್ರ ಸರ್ಕಾರವು ಪ್ರತಿರಾಜ್ಯಗಳಲ್ಲಿ ಕೈಮಗ್ಗ ಸಂಶೋಧನಾ ಮತ್ತು ಅಭಿವೃದ್ಧಿ ಕೇಂದ್ರವನ್ನು ಸ್ಥಾಪಿಸಿತು. ಈ ಮಧ್ಯ ಅನೇಕ ರಾಜ್ಯಗಳಲ್ಲಿ ಹಲವಾರು ಪರಿಸರ ಪ್ರೇಮಿ ಮತ್ತು ಕುಶಲಕರ್ಮ ಪ್ರೇಮಿಗಳು ಸಂಸ್ಥೆಗಳನ್ನು ಸ್ಥಾಪಿಸಿಕೊಂಡು ನಶಿಸುತ್ತಿರುವ ಕೈಮಗ್ಗ ಕೈಗಾರಿಕೆಯನ್ನು ಪುನಃಶ್ಚೇತನಗೊಳಿಸಲು ಪ್ರಯತ್ನಿಸುತ್ತಿದ್ದಾರೆ. ಉದಾಹರಣೆಗೆ ಕರ್ನಾಟಕದಲ್ಲಿ 'ದೇಸಿ' ಸಂಸ್ಥೆ ಜನಪದ ಸೇವಾ ಟ್ರಸ್ಟ್ ಮತ್ತು ಆಂಧ್ರದಲ್ಲಿ 'ದಸ್ತಕಾರ್' ಸಂಸ್ಥೆಯನ್ನು ಇಲ್ಲಿ ಸ್ಮರಿಸಬಹುದು. ಇವಲ್ಲದೆ ಭಾರತಾದ್ಯಂತ ಇರುವ ಖಾದಿ ಸಂಸ್ಥೆಗಳು ಕೈಯಿಂದ ದಾರ ತೆಗೆಸಿ, ಕೈಯಿಂದಲೇ ನೇಯಿಸಿ ಮತ್ತು ಕೈಯಿಂದಲೇ ಬಣ್ಣಹಾಕಿ ಮತ್ತು ಕೈಯಿಂದಲೇ ಕಲಾತ್ಮಕವಾಗಿ ಪ್ರಿಂಟ್ ಮಾಡಿ ತಯಾರಿಸುವಂಥ ಸಂಸ್ಥೆಗಳಲ್ಲಿ ಲಕ್ಷಾಂತರ ಜನ ನೇಕಾರರು ಕೈಮಗ್ಗದ ಮೇಲೆ ನೇಯ್ಗೆ ಮಾಡುತ್ತಿದ್ದಾರೆ. ಇತ್ತೀಚಿಗಿನ ಸರ್ಕಾರದ ನೀತಿಯ ಪ್ರಕಾರ ಕೈಮಗ್ಗ ಕೈಗಾರಿಕೆಯಲ್ಲಿಯ ಪ್ರಕ್ರಿಯೆಗಳಲ್ಲಿ ಯಾವುದೇ ಒಂದು ಪ್ರಕ್ರಿಯೆ ಮಾನವ ಶಕ್ತಿಯಾಧಾರಿತವಾಗಿದ್ದರೆ ಅದನ್ನು ಕೈಮಗ್ಗವೆಂದು ಪರಿಭಾವಿಸಬಹುದೆಂದು ಕೈಮಗ್ಗದ ಬಗ್ಗೆ ವ್ಯಾಖ್ಯೆ ಮಾಡಿದೆ. ಈ ವ್ಯಾಖ್ಯೆಯ ಪ್ರಕಾರ ವಿದ್ಯುತ್‌ಚಾಲಿತ ಮಗ್ಗಗಳಲ್ಲಿ ಯಾವುದೇ ಒಂದು ಪ್ರಕ್ರಿಯೆಯನ್ನು, ಮಾನವಶಕ್ತಿಯಾಧರಿತವನ್ನಾಗಿ ಮಾಡಿದರೆ ಅದು ಕೂಡ ಕೈಮಗ್ಗವೆಂದೇ ಪರಿಗಣಿತವಾಗುವುದು. ಆಗ ವಿದ್ಯುತ್‌ಚಾಲಿತ ಮಗ್ಗಗಳ ನೇಕಾರರು ಕೈಮಗ್ಗ ನೇಕಾರಿಕೆಗೆ ಕೇಂದ್ರ ಸರ್ಕಾರ ಕೊಡಮಾಡುವ ವಿವಿಧ ಸೌಲಭ್ಯಗಳ ಸಿಂಹಪಾಲನ್ನು ಪಡೆಯಬಹುದಾಗಿದೆ. ಆಗ ಮಾನವ ಶಕ್ತಿಚಾಲಿತ ಕೈಮಗ್ಗದ ನೇಕಾರರು ಆರ್ಥಿಕವಾಗಿ ಹಿಂದುಳಿಯುವರು ಮತ್ತು ಹೊಸ ತಲೆಮಾರಿನ ಯುವಕರು ನೇಯ್ಗೆ ಉದ್ಯಮಕ್ಕೆ ಬರುವುದಿಲ್ಲ. ಕ್ರಮೇಣ ಅನಾದಿ ಕಾಲದ ಈ ಉದ್ಯೋಗ ನಶಿಸಿ ಹೋಗುವುದು. ಮತ್ತೆ ಸ್ವಾತಂತ್ರ್ಯ ಪೂರ್ವದಲ್ಲಿಯ ಕಾಲದಂತೆ ಭಾರತದ ಗ್ರಾಮೀಣ ಪ್ರದೇಶ ಬಹು ಕೇಂದ್ರಿತ ಅರ್ಥವ್ಯವಸ್ಥೆಗೆ ಸಿಕ್ಕಿಹಾಕಿಕೊಳ್ಳುವುದು. ಮಹತ್ಮಾ ಗಾಂಧೀಜಿ ಭಾರತವನ್ನು ಆರ್ಥಿಕವಾಗಿ ಸ್ವಾವಲಂಬಿ ಮಾಡಲು ಚರಖ ಮತ್ತು ನೇಕಾರಿಕೆಯನ್ನು ಸ್ವಾತಂತ್ರ್ಯ ಆಂದೋಲನಕ್ಕಾಗಿ ಉಪಯೋಗಿಸಿಕೊಂಡರು. ಗಾಂಧೀಯವರ ಆ

ಪ್ರಯತ್ನದಿಂದಾಗಿ ಇಂದು ಖಾದಿ ಉದ್ಯಮ ಒಂದು ದೊಡ್ಡ ಕೈಗಾರಿಕೆಯಾಗಿ ಬೆಳೆಯುತ್ತಲಿದೆ. ಗಣನೀಯ ಸಂಖ್ಯೆಯ ಜನರಿಗೆ ಉದ್ಯೋಗ ಒದಗಿಸುತ್ತಲಿದೆ. ಕೈಮಗ್ಗದ ಮೇಲೆ ತಯಾರಾದ ಖಾದಿ ಬಟ್ಟೆಯನ್ನು ಮಾರಾಟ ಮಾಡಲು ಅಂದಿನ ಕಾಂಗ್ರೆಸ್ ಮುಖಂಡರಾಗಿದ್ದ ಅವಂತಿಭಾಯಿ ಗೋಖಲೆ, ರಾಜಗೋಪಾಲಾಚಾರಿ, ಶಂಕರಲಾಲ್ ಬ್ಯಾಂಕರ್, ಗಂಗಾಧರರಾವ್ ದೇಶಪಾಂಡೆ ಕರ್ನಾಟಕದಲ್ಲಿ ಎತ್ತಿನಗಾಡಿಯಲ್ಲಿ ಪ್ರವಾಸಮಾಡಿ ಮಾರಾಟ ಮಾಡಿದ ದೃಷ್ಟಾಂತ ನಮ್ಮ ಮುಂದಿದೆ. ಒಂದು ಕಾಲದಲ್ಲಿ ಕೈದಾರ ಮತ್ತು ಕೈಮಗ್ಗದಲ್ಲಿ ತಯಾರಾದ ಖಾದಿ ಬಟ್ಟೆಯನ್ನು ಧರಿಸುವವರಿಗೆ ಮಾತ್ರ ಕಾಂಗ್ರೆಸ್ ಪಕ್ಷದ ವಿವಿಧ ಸಂಘಟನೆಗಳಲ್ಲಿ ಪದಾಧಿಕಾರಿಯಾಗಬಹುದಿತ್ತು. ಕಾಂಗ್ರೆಸ್ ಪಕ್ಷದ ಸದಸ್ಯತ್ವಕ್ಕೆ ಸ್ವತಃ ಕೈಯಿಂದ ನೂತ 5000 ಮೀಟರ್‌ನಷ್ಟು ದಾರವನ್ನು ಕೊಡಬೇಕಾಗಿತ್ತು. 1934ರಲ್ಲಿ ಗಾಂಧೀಜಿಯವರು ಚರಖ ಸಂಘ ಸ್ಥಾಪಿಸಿ ತಾವೇ ಅದರ ಅಧ್ಯಕ್ಷರಾಗಿ ಕೈನೂಲುಗಾರಿಕೆ ಮತ್ತು ಕೈಮಗ್ಗಕ್ಕೆ ಪ್ರೋತ್ಸಾಹಕೊಟ್ಟರು. ಇಂಥ ಇತಿಹಾಸವಿರುವ ಕಾಂಗ್ರೆಸ್ ಪಕ್ಷ ಇಂದು ಕೈಮಗ್ಗ ಕೈಗಾರಿಕೆಯನ್ನು ಹಾಳುಗೆಡವಲು ತೊಡಗಿರುವುದು ಅತ್ಯಂತ ವಿಷಾದನೀಯ ಸಂಗತಿ. ಕೈಮಗ್ಗ ಕೈಗಾರಿಕೆಗೆ ಸರ್ಕಾರದಿಂದ ಸಂಭವಿಸಲಿರುವ ಈ ದುರಂತದ ವಿರುದ್ಧ ಅಖಿಲ ಭಾರತ ಕೈಮಗ್ಗ ಸಂಸ್ಥೆಗಳ ಒಕ್ಕೂಟವು ಜನವರಿ 2014 ರಿಂದ ಕೈಮಗ್ಗ ಸತ್ಯಾಗ್ರಹವನ್ನು ಆರಂಭಿಸಿದೆ. ಗದಗ್ ಜಿಲ್ಲೆಯ ಗಜೇಂದ್ರಗಢದಿಂದ ಆರಂಭಿಸಿ ಬಾಗಲಕೋಟೆ ಜಿಲ್ಲೆಯ ಬಾದಾಮಿವರೆಗೆ 200 ಕಿಲೋಮೀಟರ್ ಉದ್ದದ ಪಾದಯಾತ್ರೆ ಹಮ್ಮಿಕೊಂಡಿದೆ. ಈ ಯಾತ್ರೆಯನ್ನು 'ಬನಶಂಕರಿ ಯಾತ್ರೆ' ಎಂದು ಕರೆಯಲಾಗಿದೆ. ಸಮಸ್ಯೆಯನ್ನು ಅರ್ಥಮಾಡಿಕೊಂಡು ಮತ್ತು ನೇಕಾರಿಕೆಯನ್ನು ವಿನಾಶದ ಅಂಚಿಗೆ ತಳ್ಳುತ್ತಿರುವ ಯಾಂತ್ರೀಕರಣ ಪ್ರಕ್ರಿಯೆಯನ್ನು ನಿಲ್ಲಿಸದೆ ಇದ್ದರೆ ಲೇಖಕ ಹಾಗೂ ದೇಸೀ ಸಂಸ್ಥೆಯ ಸಂಸ್ಥಾಪಕರು ಆದ ಪ್ರಸನ್ನರವರು ಅನಿರ್ದಿಷ್ಟ ಕಾಲದ ಉಪವಾಸ ಪ್ರಾರಂಭಿಸುವರು. ಪರಿಸ್ಥಿತಿ ವಿಕೋಪಕ್ಕೆ ಹೋಗುವ ಮೊದಲೇ ರಾಜ್ಯ ಸರ್ಕಾರ ಕೂಡಲೇ ನೇಕಾರರ ಬೇಡಿಕೆಯನ್ನು ಈಡೇರಿಸಬೇಕು. ನೇಕಾರರ ಈ ಕೈಮಗ್ಗ ಸತ್ಯಾಗ್ರಹಕ್ಕೆ ರಾಜ್ಯದ ಎಲ್ಲ ಚಿಂತಕರು, ಪರಿಸರವಾದಿಗಳು ಮತ್ತು ಲೇಖಕರು ತಮ್ಮ ನೈತಿಕ ಬೆಂಬಲ ಕೊಡುವುದಷ್ಟೇಯಲ್ಲ ಚಳುವಳಿಯಲ್ಲಿ ಸಕ್ರಿಯವಾಗಿ ಪಾತ್ರವಹಿಸಬೇಕು. ಇದೊಂದು ಕೇಂದ್ರೀಕೃತ ಅರ್ಥವ್ಯವಸ್ಥೆ ವಿರುದ್ಧ ವಿಕೇಂದ್ರೀಕೃತ ಅರ್ಥವ್ಯವಸ್ಥೆಯ ಪ್ರತಿಪಾದಕರು ನಡೆಸಿರುವ ಹೋರಾಟವಾಗಿದೆ.

* * *

ಕನಕದಾಸರ ಪ್ರಸ್ತುತತೆಯ ಹುಡುಕಾಟ

– *ಡಾ.ಎಸ್.ನರೇಂದ್ರ ಕುಮಾರ್*

ಕನ್ನಡ ನೆಲದಲ್ಲಿ ಆಗಿಹೋದ ೧೫ನೇ ಶತಮಾನದ ಹರಿದಾಸ ಪರಂಪರೆಯಲ್ಲಿ ಆಧ್ಯಾತ್ಮದೊಂದಿಗೆ ಸಾಮಾಜಿಕ ಪರಿವರ್ತನೆಗೆ ಹಾತೊರೆದ ಅಪರೂಪದ ಸಂತ ಕನಕದಾಸರು. ಶೂದ್ರ ಹಿನ್ನೆಲೆಯಿಂದ ಬಂದ ಕನಕರು ತಾವು ಅರ್ಜಿಸಿಕೊಂಡ ವೈಷ್ಣವ ಪಂಥದ ಯಾಂತ್ರಿಕ ಸಂಪ್ರದಾಯದ ವಿರುದ್ಧ ತಣ್ಣಗೆ ಬಂಡಾಯವೇಳುವುದರೊಂದಿಗೆ ಮಾನವತೆ ಮತ್ತು ಸಮಾನತೆಗಾಗಿ ಹಂಬಲಿಸಿದವರು. ಶೂದ್ರ-ದಲಿತ ಸಮುದಾಯದ ಮೆದುಳನ್ನು ಪುರೋಹಿತಶಾಹಿ, ಜ್ಯೋತಿಷ್ಯಶಾಸ್ತ್ರ, ಕೋಮುವಾದ, ಜಾತಿಯತೆ, ಅಸ್ಪೃಶ್ಯತೆ ಮೊದಲಾದವು ಇನ್ನಷ್ಟು ಪ್ರಭಾವ ಬೀರುತ್ತಿರುವ ಹೊತ್ತಲ್ಲಿ ಕನಕದಾಸರ ಜಯಂತಿ ಆಗಮಿಸಿದೆ. ಇಂಥ ಗಳಿಗೆಯಲ್ಲಿ ಕನಕರನ್ನು ಕೇವಲ ಆಡಿಹೊಗಳಿ ಕಳೆಯುವ ಬದಲು ಈ ನೆಪದಲ್ಲಿ ಸಮಕಾಲೀನ ಸಂದರ್ಭಕ್ಕೆ ಕನಕರ ಪ್ರಸ್ತುತತೆ ಎಷ್ಟು ಎಂಬುದರ ಚಿಂತನೆ ಆಗಬೇಕಿದೆ.

ಕನಕದಾಸರ ಪದ್ಯ ಬರಹಗಳನ್ನು ಒಟ್ಟಿಗೆ ಪರಿಗಣಿಸಿ ಕೀರ್ತನೆಗಳು ಎಂದು ಕರೆಯುವುದೇ ಕ್ಲೀಷೆ ಎನಿಸುತ್ತದೆ. ಕೀರ್ತನೆಗಳು ಎಂದರೆ ಸ್ತುತಿಸುವುದು ಎನ್ನುವ ಅರ್ಥವಿದೆ. ಇಲ್ಲಿ ಸಂವಾದಿಸಲು ಬಳಸಿಕೊಂಡಿರುವ ಕನಕರ ಸಾಲುಗಳು ತಾನು ನಂಬಿದ ದೈವವನ್ನು ಅಥವಾ ಪರಂಪರೆಯನ್ನು ಸ್ತುತಿಸುವ ಕೀರ್ತನೆಗಳಾಗದೆ ಭಾರತೀಯ ಧಾರ್ಮಿಕ-ಸಮಾಜಿಕವಾದ ಸಾಂಪ್ರದಾಯಿಕ ನಂಬಿಕೆಗಳ ಅಸಮಾನತೆ, ಅಮಾನವೀಯತೆಗಳನ್ನು ಪ್ರತಿರೋಧಿಸುವ ನೆಲೆಯದಾಗಿವೆ. ಇವುಗಳನ್ನು ಕೀರ್ತನೆಗಳೆಂದು ಹೇಗೆ ಕರೆಯುವುದು? ಇಂಥ ಪರಿಕಲ್ಪನೆಯನ್ನು ಮುರಿಯಬೇಕಾಗಿದೆ. ಕನಕದಾಸರ ಜೀವನದೊಂದಿಗೆ ಹೆಣೆದುಕೊಂಡಿರುವ ಹಾಗೂ ಸಾಮಾನ್ಯವಾಗಿ ಎಲ್ಲರಿಗೂ ಗೊತ್ತಿರುವ ದೃಷ್ಟಾಂತಗಳ ಪ್ರವೇಶಿಕೆ ಮೂಲಕ ಕನಕದಾಸರ ಕೀರ್ತನೆಗಳನ್ನು ಅವುಗಳ ಸಮಕಾಲೀನ ಪ್ರಸ್ತುತತೆಯ ಹಿನ್ನೆಲೆಯಲ್ಲಿ ಸಂವಾದಿಸಲು ಸಾಧ್ಯ.

ಒಮ್ಮೆ ಗುರುಗಳು ಕನಕದಾಸರು ಹಾಗೂ ಇನ್ನಿತರ ಶಿಷ್ಯರಿಗೆ ಬಾಳೆಹಣ್ಣು ಕೊಟ್ಟು 'ಯಾರು ಇಲ್ಲದ ಸ್ಥಳ'ದಲ್ಲಿ ತಿಂದು ಬರಲು ಹೇಳುತ್ತಾರೆ. ಎಲ್ಲರೂ ಎಲ್ಲೆಲ್ಲೋ ಅವಿತು ತಿಂದು ಬರುತ್ತಾರೆ. ಆದರೆ ಕನಕದಾಸರು ಮಾತ್ರ ತಿನ್ನದೆ ಹಾಗೆಯೆ ಇಟ್ಟುಕೊಂಡಿರುತ್ತಾರೆ. ಗುರುಗಳು 'ಯಾಕೆ ತಿಂದಿಲ್ಲ' ಎಂದು ಕನಕರನ್ನು ಪ್ರಶ್ನಿಸಿದರೆ, 'ಯಾರೂ ಇಲ್ಲದ ಸ್ಥಳ ಯಾವುದೂ ಇಲ್ಲದ ಕಾರಣ ತಾನು ಹಣ್ಣನ್ನು ತಿನ್ನದೆ ಇಟ್ಟುಕೊಂಡೆ' ಎನ್ನುತ್ತಾರೆ. ಹೀಗೆ ಎಲ್ಲೆಡೆ ಕಾಣುವ, ಸರ್ವಾಂತರ್ಯಾಮಿ ತತ್ವವನ್ನು ನಂಬುವ ಕನಕದಾಸರ ದೃಷ್ಟಿಕೋನ ಎಂಥ ಮಹತ್ವದ್ದು, ಇದು ನಾಸ್ತಿಕವಾಗಿಯು ವಿಶಾಲವಾಗಿ ಆಲೋಚಿಸುವ ಸಂತನಿಗೆ ಮಾತ್ರ ಸಾಧ್ಯವಾಗುವಂತದ್ದು. ಸ್ಥಾಪಿತ ನಂಬಿಕೆಗೆ ಕನಕರ ಈ ದೃಷ್ಟಾಂತ ಪೆಟ್ಟನ್ನು ಕೊಡುತ್ತದೆ. ಮಾತ್ರವಲ್ಲ ಪುರೋಹಿತಶಾಹಿಗೆ ಒಳೇಟು ನೀಡುತ್ತದೆ.

ಇನ್ನೊಮ್ಮೆ; ಗುರುಗಳು ತಮ್ಮ ಶಿಷ್ಯರನ್ನು ಉದ್ದೇಶಿಸಿ "ನಿಮ್ಮಲ್ಲಿ ಯಾರು

ಮೋಕ್ಷಕ್ಕೆ ಹೋಗುತ್ತೀರಿ?" ಎಂದು ಪ್ರಶ್ನಿಸುತ್ತಾರೆ. ಶಿಷ್ಯರಿಗೆ ಇದು ಅಸಾಧ್ಯವಾದ ವಿಚಿತ್ರ ಪ್ರಶ್ನೆಯಾಗಿ ಕಾಣುತ್ತದೆ. ಆದರೆ ಕನಕರು ಮಾತ್ರ "ನಾನು ಹೋದರೆ ಹೋದೇನು" ಎನ್ನುವ ಉತ್ತರ ನೀಡುವ ಮೂಲಕ ಎಲ್ಲರನ್ನು ಚಕಿತರನ್ನಾಗಿ ಮಾಡುತ್ತಾರೆ. 'ನಾನು' ಎನ್ನುವ ಅಹಮಿಕೆಯನ್ನ, ಮೇಲರಿಮೆಯನ್ನು ನಿರಾಕರಿಸಿಕೊಂಡವರನಿಗೆ ಮಾತ್ರವೇ ಮೋಕ್ಷಕ್ಕೆ ಹೋಗಲು ಸಾಧ್ಯವೆನ್ನುವ ಕನಕದಾಸರು ಮೋಕ್ಷದ ಪರಿಕಲ್ಪನೆಯನ್ನು ಸಹ ಸಾಂಪ್ರದಾಯಿಕ ದೃಷ್ಟಿಕೋನಕ್ಕಿಂತ ವಿಭಿನ್ನವಾಗಿ ಕಂಡು ವಿಸ್ತರಿಸಿದ್ದಾರೆ.

ಈ ಎರಡು ದೃಷ್ಟಾಂತಗಳು ಯಾಕೆ ಮುಖ್ಯವೆನಿಸುತ್ತದೆ ಎಂದರೆ, ಕನಕದಾಸರ ಹಲವಾರು ಕೀರ್ತನೆಗಳ ಒಳಸುಳಿಯಲ್ಲಿ ಇಂತಹ ಗಡಿಗೆರೆ ಮೀರುವ ತತ್ವಗಳು ಅಂತರ್ಗತವಾಗಿ ಹರಿಯುವುದರಿಂದ.

ಕನಕದಾಸರು ಅವರ ಸಮಕಾಲೀನ ಸಂದರ್ಭದ ಇನ್ನಿತರ ದಾಸರಿಗಿಂತ ಭಿನ್ನವಾಗಿ ಕಾಣುವುದು; ಇಡೀ ದಾಸ ಸಾಹಿತ್ಯದಲ್ಲೆ ಶೂದ್ರ ಹಿನ್ನೆಲೆಯ ಏಕೈಕ ವ್ಯಕ್ತಿಯಾಗಿ ಅಭಿವ್ಯಕ್ತಿಸಿದ ಕಾರಣವಾಗಿ. 'ಸಂಪ್ರದಾಯ ನಿಷ್ಠ' ವೈಷ್ಣವ ಹಿನ್ನೆಲೆಯ ದಾಸ ಪರಂಪರೆಯಲ್ಲಿ ತನಗೆ ಆಗುತ್ತಿದ್ದ ಅಪಮಾನಗಳಿಗೆ ಪ್ರತಿಕ್ರಿಯಿಸಿದ ಕಾರಣವಾಗಿ ಇಲ್ಲಿ ಹನ್ನೆರಡನೆಯ ಶತಮಾನದ ಶರಣ ಚಳುವಳಿಯನ್ನು ನೆನಪಿಸಿಕೊಳ್ಳಲೇಬೇಕು. ಈ ಚಳುವಳಿಯ ಕಾಲಘಟ್ಟದಲ್ಲಿ ಬೇರೆ ಬೇರೆ ಜಾತಿ ಹಿನ್ನೆಲೆಯ ಪುರುಷ ಮತ್ತು ಮಹಿಳೆಯರು ವಚನಗಳ ಮೂಲಕ ಅಭಿವ್ಯಕ್ತಿಸಿದ್ದು ವಿಶೇಷ. ಅಲ್ಲದೆ ಇಡೀ ವಚನ ಸಾಹಿತ್ಯವು ಭಾರತದೊಳಗಿನ ಕಡು ವಾಸ್ತವವಾಗಿರುವ ಜಾತಿ, ಅಸ್ಪೃಶ್ಯತೆ, ಲಿಂಗತಾರತಮ್ಯ, ವರ್ಗಸಮಾನತೆ ಹಲಬಗೆಯ ಮೌಢ್ಯ ಕಂದಾಚಾರಗಳಿಗೆ ಮುಖಾಮುಖಿಯಾಯಿತು. ಸಾಮಾನ್ಯ ಜನತೆಯ ಆಡುನುಡಿಯನ್ನೇ ಬಳಸಿಕೊಂಡು ವಚನದ ಮೂಲಕ ತಾವು ನಂಬಿದ ಪರಂಪರೆಯನ್ನು ಒಪ್ಪಿಕೊಂಡು ಸಹ ಧಾರ್ಮಿಕ ಪರಿವರ್ತನೆಗೆ ಮತ್ತು ಮಾನವೀಯ ಸಮಾಜ ನಿರ್ಮಾಣಕ್ಕೆ ತವಕಿಸಿದ್ದು ಇತಿಹಾಸ.

ವಚನಕಾರರಂತೆ ದಾಸರು ತಾವು ನಂಬಿದ ಭಕ್ತಿಭಾವಗಳನ್ನು ಜನಸಾಮಾನ್ಯರ ಭಾಷೆಯಲ್ಲಿ ಮಂಡಿಸಿದ್ದರೂ ಬಹುಪಾಲು ದಾಸರು ಮಡಿವಂತಿಕೆಯನ್ನು ಮೀರಲು ಸಾಧ್ಯವೇ ಆಗಲಿಲ್ಲ. ದಾಸ ಸಾಹಿತ್ಯವು ವಚನ ಸಾಹಿತ್ಯದ ಅನಂತರದ ಕಾಲಘಟ್ಟದಲ್ಲಿ ಬಂದರೂ ಸಾಂಪ್ರದಾಯಿಕ ಅಸಮಾನತೆಗಳ ವಿರುದ್ಧದ ಸಂಘರ್ಷ ಇಲ್ಲಿ ಬಹುಪಾಲು ಗೌಣ. ಆದರೆ ಕನಕದಾಸರು ಮಾತ್ರ ಇದಕ್ಕೆ ಹೊರತಾಗಿ ಕಂಡು ಬರುತ್ತಾರೆ. ಈ ಹಿನ್ನೆಲೆಯಲ್ಲಿ ಹೇಳುವುದಾದರೆ ಕನಕದಾಸರು ಒಂದು ವೇಳೆ ಈ ಕಾಲ ಸಂದರ್ಭದಲ್ಲಿ ಗೈರು ಹಾಜರಾಗಿದ್ದರೆ ಇಡೀ ಹರಿದಾಸ ಸಾಹಿತ್ಯವು ವೈಶಾಲ್ಯತೆ ಪಡೆದುಕೊಳ್ಳುವುದರಿಂದ ತಪ್ಪಿಸಿಕೊಳ್ಳುತ್ತಿತ್ತು. ಇದು ಚಾರಿತ್ರಿಕವಾಗಿ ಗುರುತಿಸಬೇಕಾದ ಸಂಗತಿ.

ಕನಕದಾಸರ ಆಧ್ಯಾತ್ಮಿಕ ಪರಿಕಲ್ಪನೆ ವಿಶಾಲವಾದುದು. ವೈಷ್ಣವ ಪರಂಪರೆಗೆ ತಮ್ಮನ್ನು ಅರ್ಪಿಸಿಕೊಂಡ ಕನಕದಾಸರು ತಾವು ನಂಬಿದ ದೈವವನ್ನು ಕಾಣುವ ಬಗೆಯಲ್ಲೆ ಇದು ಸ್ಪಷ್ಟವಾಗುತ್ತದೆ.

"ಎಲ್ಲಿರುವನೋ ರಂಗ ಎಂಬ ಸಂಶಯ ಬೇಡ
ಎಲ್ಲಿ ಭಕ್ತರು ಕರೆಯೇ ಅಲ್ಲಿ ಬಂದೊದಗುವನು"

ಎನ್ನುತ್ತಾರೆ. ಅದೇ ಕೀರ್ತನೆಯಲ್ಲಿ ಮುಂದುವರೆದು "ಅಣು ಮಾಹಿತ್ತಿನೊಳಗೆಲ್ಲ ಪರಿಪೂರ್ಣ ವಿಶ್ವಮಯ" ಎಂದರೆ ಇನ್ನೊಂದು ಕೀರ್ತನೆಯಲ್ಲಿ

"ಎಲ್ಲಿ ನೋಡಿದರಲ್ಲಿ ಅಲ್ಲಿ ರಾಮ
ಇದ ಬಲ್ಲ ಜಾಣರ ದೇಹದಲ್ಲಿ ನೋಡಣ್ಣ"

ಎಂದೆನ್ನುವಂಥ ದೈವ ನಂಬಿಕೆಯನ್ನ ವಿಸ್ತಾರಗೊಳಿಸಿದ್ದಾರೆ. 'ರಾಮಜನ್ಮ ಭೂಮಿ' ಬಗೆಗೆ

ಮೂಲಭೂತ ಸಂಪ್ರದಾಯವಾದಿಗಳು ಬಿತ್ತುತ್ತಿರುವ ಭಾವನಾತ್ಮಕ ಪ್ರಚೋದನೆಗೆ ಇದು ವಿರುದ್ಧವಾದದ್ದು. ಇಂಥದಕ್ಕೆ ಶೂದ್ರ ದಲಿತ ಸಮುದಾಯಗಳು ಬಳಕೆಯಾಗುತ್ತಿರುವ ಸಂದರ್ಭದಲ್ಲಿ ಕನಕರು ಕಂಡ ವಿಶ್ವಮಯ ರಾಮನ ಅರಿವು ಜನರ ಪ್ರಜ್ಞೆಯಾಗಿ ರೂಪುಗೊಳ್ಳಬೇಕಾಗಿದೆ. ಹಿಂದೆ ಹೇಳಿದ ಬಾಳೆಹಣ್ಣಿನ ಪ್ರಸಂಗವನ್ನು ಇದರೊಂದಿಗೆ ಹೋಲಿಸಬಹುದು. ಎಲ್ಲದರಲ್ಲೂ ದೈವವನ್ನು ಕಾಣುವ ದರ್ಶನ ಇಲ್ಲಿ ಮಹತ್ವದ್ದು. ಇಂತಹ ಕೀರ್ತನೆ ಪ್ರಸ್ತುತ ಸಂದರ್ಭದಲ್ಲಿ ಹೆಚ್ಚು ಸಮಕಾಲೀನ ಎನಿಸುತ್ತದೆ. ಏಕೆಂದರೆ ದೇವಾಲಯಗಳಲ್ಲಷ್ಟೇ ದೇವರಿದ್ದಾನೆ ಎಂಬುವ ನಂಬಿಕೆ ಒಂದೆಡೆಯಾದರೆ ದೇವಾಲಯಗಳ ನಿರ್ಮಾಣವು ಕೂಡ ಹೆಚ್ಚು ಹೆಚ್ಚು ಅಗತ್ಯ ಆಗುತ್ತ ದೈವವನ್ನು ಸಂಕುಚಿತ ಚೌಕಟ್ಟಿನೊಳಗೆ ಪಾವಿತ್ರ್ಯತೆಯ ಹೆಸರಲ್ಲಿ ಸೀಮಿತಗೊಳಿಸಲಾಗುತ್ತಿದೆ. ಜೊತೆಗೆ ದೇವಾಲಯಗಳು ಅಸಮಾನತೆಯ ತಾಣಗಳೂ ಸಹ ಆಗಿವೆ. ಇದಕ್ಕೆ ಅಸಂಖ್ಯಾತ ಚಾರಿತ್ರಿಕ ಹಾಗೂ ಸಮಕಾಲೀನ ಉದಾಹರಣೆಗಳು ಸಿಗುತ್ತವೆ. ಅಪ್ರತಿಮ ಹರಿ ಭಕ್ತರಾಗಿದ್ದ ಕನಕದಾಸರನ್ನೇ ಜಾತಿ ಕಾರಣಕ್ಕಾಗಿ ದೇವಾಲಯದಿಂದ ಹೊರಗಿಟ್ಟ ಚರಿತ್ರೆಯು ದೇವರು-ದೇವಾಲಯ-ನಂಬಿಕೆ-ಸಂಪ್ರದಾಯಗಳ ನಡುವಿನ ಸಂಕೀರ್ಣತೆ ಹಾಗೂ ಅಮಾನವೀಯತೆಯನ್ನು ಸಂಕೇತಿಸುತ್ತದೆ. ಇಂತಹ ಸಂಕೀರ್ಣತೆಯನ್ನು ನಿರಾಕರಿಸಿ ಕನಕದಾಸರು ತಾನು ನಂಬಿದ ದೈವವನ್ನು ಭಕ್ತಿಯನ್ನ ವಿಭಿನ್ನ ಬಗೆಯಲ್ಲಿ ಕಾಣುತ್ತಾರೆ. "ನಾನು ನಿನ್ನೊಳಗೊ ನೀನು ನನ್ನೊಳಗೊ" ಎನ್ನುವ ಕೀರ್ತನೆಯ ಸಾಲು ಕೂಡ ಇದಕ್ಕೆ ಅತ್ಯುತ್ತಮ ನಿದರ್ಶನ.

ಕನಕದಾಸರು ತಮ್ಮ ಕೀರ್ತನೆಗಳಲ್ಲಿ ಭಕ್ತಿಯ ಹೆಸರಿನಲ್ಲಿ ನಡೆಯುವ ಬೂಟಾಟಿಕೆ ಹಾಗೂ ತೋರಿಕೆಯನ್ನು ಸಹ ಕಟುವಾಗಿ ವಿಡಂಬಿಸಿದ್ದಾರೆ. ತೀರ್ಥವನು ಪಿಡಿದವರೆಲ್ಲ ತರುನಾಮಧಾರಿಗಳೆ ಎನ್ನುವ ಕೀರ್ತನೆಯಲ್ಲಿ

'ತೀರ್ಥವನು ಪಿಡಿದವರೆಲ್ಲ ತರುನಾಮಧಾರಿಗಳೆ' ಎನ್ನುವ ಕೀರ್ತನೆಯಲ್ಲಿ ಮೂಗ್ಹಿಡಿದು ನೀರೊಳಗೆ ಮುಳುಗಿ ಜಪತಪ ಮಾಡಿ!

ವೇದಶಾಸ್ತ್ರ ಪುರಾಣಗಳನ್ನೋದಿ ತಿಳಿದು!!

ನೀತಿ ತಪ್ಪಿದವರೆಲ್ಲ ದೇವ ಬ್ರಾಹ್ಮಣರೆ ಕೃಷ್ಣ ಎಂದು ಪ್ರಶ್ನಿಸುವ ಕನಕದಾಸರು ಇಡೀ ಕೀರ್ತನೆಯಲ್ಲಿ ಕೇವಲ ಬಾಹ್ಯ ಲಾಂಛನ ಆಚರಣೆಗಳಿಗಷ್ಟೇ ಪ್ರಾಮುಖ್ಯತೆ ಕೊಟ್ಟು ನಡುವಳಿಕೆಗಳಲ್ಲಿ ಅನೈತಿಕವಾಗಿರುವ ವೈಷ್ಣವ, ಶೈವ ಹಾಗೂ ಇಸ್ಲಾಂ ಮತಾವಲಂಬಿಗಳನ್ನು ಸಹ ಕಟು ಟೀಕೆಗೆ ಒಳಪಡಿಸಿದ್ದಾರೆ. ಮುಂದುವರೆದು

'ಜಪವ ಮಾಡಿದರೇನು! ತಪವ ಮಾಡಿದರೇನು!

ಕಪಟಗುಣ ವಿಪರೀತ ಕಲುಷವಿದ್ದವರು:

ತೀರ್ಥ ಪಿಡಿದವರೆಲ್ಲ ತಿರುನಾಮಧಾರಿಗಳೇ

ನೇಮವಿಲ್ಲದ ಹೋಮವ್ಯಾತಕೆ' ಮುಂತಾದ ಸಾಲುಗಳು ಭಕ್ತಿಯ ಪ್ರದರ್ಶನವನ್ನು ವಿಡಂಬಿಸುತ್ತವೆ. ನೈತಿಕವಾಗಿ ಬದುಕಿಗೆ ಮುಖ್ಯವೆಂದು ಮೌಲ್ಯವಾಗಿಸಲು ತುಡಿಯುತ್ತವೆ.

ಭಕ್ತಿಯ ಪ್ರದರ್ಶನವೇ ಹೆಚ್ಚಾಗುತ್ತಿರುವ ಕಾಲಘಟ್ಟವಿದು. ನಾಮ, ವಿಭೂತಿ, ಕುಂಕುಮ, ಕೈಗಳಿಗೆ ಚಿತ್ರವಿಚಿತ್ರವಾದ ಅಸಂಖ್ಯಾತ ದಾರ, ದೇವಾಲಯ ನಿರ್ಮಾಣದಲ್ಲಿ ಪೈಪೋಟಿ, ಪುರೋಹಿತಶಾಹಿಯ ಯಾಗಯಜ್ಞಗಳ ಆರ್ಭಟ...ಇವೆಲ್ಲವೂ ಬಾಹ್ಯ ಆಚರಣೆಗಳೆ, ದುರಂತವೆಂದರೆ ಇಂಥವು ಸಾರ್ವಜನಿಕ ಭಯಭೀತಿಯನ್ನು ಹುಟ್ಟುಹಾಕುವ ಹಿಂಸೆಯೂ ಆಗಿರುತ್ತದೆ. ಕನಕದಾಸರು ಪ್ರಸ್ತುತರಾಗುವುದು ಇಂಥವುಗಳ ವಿರುದ್ಧ ತಮ್ಮ ಸಮಕಾಲೀನ ಸಂದರ್ಭದಲ್ಲಿ ಪ್ರತಿಕ್ರಿಯಿಸಿರುವ ಕಾರಣವಾಗಿ.

ಕನಕದಾಸರು ಒಬ್ಬ ಆಧ್ಯಾತ್ಮಿಕ ವ್ಯಕ್ತಿ. ಆಧ್ಯಾತ್ಮಿಕತೆ ಎನ್ನುವುದು ಅದರ

ನಿಜವಾದ ಅರ್ಥದಲ್ಲಿ ಅಂಥ ಸಂಪ್ರದಾಯ, ಅಮಾನವೀಯತೆಗಳಿಗೆ ವಿರುದ್ಧವಾದುದು. ಅದು ಜೀವಪರ ವೈಚಾರಿಕತೆಯಿಂದ ಕೂಡಿರುತ್ತದೆ. ವಿಶಾಲವಾಗಿರುತ್ತದೆ ಹಾಗೂ ವಿಕಾಸ ಹೊಂದುತ್ತಿರುತ್ತದೆ. ಭಾರತೀಯ ಸಂದರ್ಭದಲ್ಲಿ ಬುದ್ಧ, ಬಸವ, ಅಲ್ಲಮ, ಮಂಟೇಸ್ವಾಮಿ, ಅನೇಕ ಸಂತರು, ತತ್ವಪದಕಾರರು, ಸೂಫಿಗಳು ಹಾಗೆಯೆ ಆಧುನಿಕ ಕಾಲಘಟ್ಟದಲ್ಲಿ ಗಾಂಧೀ, ಅಂಬೇಡ್ಕರ್, ಲೋಹಿಯಾ, ನಾರಾಯಣಗುರು, ವಿವೇಕಾನಂದ, ಕುವೆಂಪು ಅವರು ಇಂತಹ ಆಧ್ಯಾತ್ಮಿಕತೆಯನ್ನು ನಂಬಿದವರಾಗಿದ್ದರು. ಕನಕದಾಸರದು ಈ ಪ್ರಜ್ಞೆ, ಇಂಥ ಪ್ರಜ್ಞೆಯ ಆಧ್ಯಾತ್ಮಿಕತೆ ಮನುಷ್ಯರನ್ನು ಘನತೆ, ಸಮಾನತೆ, ಸ್ವಾತಂತ್ರ್ಯ, ಸಂತೋಷದಿಂದ ಬದುಕುವುದನ್ನು ಪ್ರೇರೇಪಿಸುತ್ತದೆ. "ಎಲ್ಲಾರು ಮಾಡುವುದು ಹೊಟ್ಟೆಗಾಗಿ ಗೇಣು ಬಟ್ಟೆಗಾಗಿ" ಕೀರ್ತನೆಯು ಕನಕದಾಸರ ಆಧ್ಯಾತ್ಮಿಕ ಪರಿಕಲ್ಪನೆಯನ್ನು ಸ್ಪಷ್ಟಪಡಿಸುವುದಾಗಿದೆ. ಈ ಕೀರ್ತನೆಯ ಕೊನೆಯ ಸಾಲುಗಳಲ್ಲಿ ಕನಕರು

'ಉನ್ನತ ನೆಲೆಯಾದಿ ಕೇಶವನ ಧ್ಯಾನವನ್ನು
ಮನಮುಟ್ಟಿ ಮಾಡುವುದು ಮುಕ್ತಿಗಾಗಿ ಆನಂದಕ್ಕಾಗಿ"

ಎಂದು ಹೇಳುವ ಮೂಲಕ ಭಕ್ತಿ ಕೇವಲ ವ್ಯವಹಾರಿಕವಲ್ಲ. ಹಾಗೆಯೇ ಹೊಟ್ಟೆ-ಬಟ್ಟೆಗಾಗಿ ಮಾತ್ರವೆ ಅಲ್ಲ ಅದೊಂದು ಬಿಡುಗಡೆಯ ಹಾದಿಯಾಗಿರುವುದರ ಜೊತೆಗೆ ಆನಂದವನ್ನು ಪಡೆಯುವುದಾಗಿದೆ ಎಂದಿದ್ದಾರೆ. ಇಂಥ ವೈಶಾಲ್ಯತೆ ಕನಕರಿಗೆ ಇದ್ದ ಕಾರಣವಾಗಿಯೆ ವೈಷ್ಣವ ಪರಂಪರೆ ಒಪ್ಪಿಯೂ ಶಿವ ಶಿವ ಶಿವ ಎನ್ನಿರೊ – ಮೂಜಗದವರೆಲ್ಲ ಶಿವ ಶಿವ ಎನ್ನಿರೊ ಎಂದು ಕೀರ್ತಿಸುವ ಮೂಲಕ ಶೈವ ಪರಂಪರೆಗೂ ಗೌರವ ನೀಡಲು ಸಾಧ್ಯವಾಗಿರುವುದು. ಶೈವ ವೈಷ್ಣವರ ನಡುವೆ ಹಿಂಸಾತ್ಮಕ ಸಂಘರ್ಷ ನಡೆಯುತ್ತಿದ್ದ ಕಾಲದಲ್ಲಿ ಹೀಗೆ ಹೇಳುವುದು ಅಸಮಾನ್ಯ ಧೋರಣೆ. ಇದು ಸೌಹಾರ್ದತೆಯ ಸಂಕೇತ. ಕನಕರ ಮತ್ತೊಂದು ವಿಶೇಷವೆಂದರೆ ತಾನು ನಂಬಿದ ದೈವವನ್ನು ಕೂಡ ಪ್ರಶ್ನಿಸಿ ವಿಮರ್ಶಿಸುವ ಸ್ವಾತಂತ್ರ್ಯ ತೋರುವುದು.

'ಎಷ್ಟು ಕಾಲದಿಂದ ಪವಡಿಸಿದೆಯೋ ಶ್ರೀರಂಗ
ನಿನ್ನನೆಬ್ಬಿಸುವರೊಬ್ಬರನೂ ಕಾಣೆ'

ಎಂದು ಕೀರ್ತನೆಯೊಂದರಲ್ಲಿ ಕೇಳಿದರೆ,

'ಆರು ಬದುಕಿದರಯ್ಯ ಹರಿ ನಿನ್ನ ನಂಬಿ
ತೋರು ಈ ಧರೆಯೊಳಗೆ ಒಬ್ಬರನು ಕಾಣೆ ಕೃಷ್ಣ'

ಎಂದು ಇನ್ನೊಂದು ಕೀರ್ತನೆಯಲ್ಲಿ ಪ್ರಶ್ನಿಸುತ್ತಾರೆ. ಇಂಥ ಕಡೆಗಳಲ್ಲಿ ಕನಕದಾಸರ ಕೀರ್ತನೆ ಕೇವಲ ಕೀರ್ತನೆಯಾಗದೆ ತಾನು ನಂಬಿದ ದೈವದೊಂದಿಗೆ ನಡೆಸುವ ವಾಸ್ತವ ಸಂವಾದದ ವೈಚಾರಿಕ ಮುಖಾಮುಖಿಯು ಆಗಿದೆ. ಇದು ಕನಕದಾಸರ ವ್ಯಕ್ತಿತ್ವ, ನಂಬಿಕೆ ಹಾಗೂ ವಿಶಿಷ್ಟತೆಯನ್ನು ಬಹಿರಂಗ ಪಡಿಸುತ್ತದೆ. ತಾನು ನಂಬಿದ ಧರ್ಮ, ದೇವರು, ಮತವನ್ನು ಹೀಗೆ ಮುಕ್ತವಾಗಿ ವಿಮರ್ಶಿಸುವ ಕನಕರ ವೈಚಾರಿಕತೆ ಸಮಕಾಲೀನ ಸಂದರ್ಭದಲ್ಲಿ ಅತ್ಯಗತ್ಯ. ಅರೋಗ್ಯಕರ.

ಕನಕದಾಸರು ಇನ್ನು ಹೆಚ್ಚು ಸಮಕಾಲೀನರಾಗುವುದು; ಭಾರತದಲ್ಲಿ ಹಾಸು ಹೊಕ್ಕಾಗಿರುವ ಜಾತಿ ಪದ್ಧತಿಯ ಬಗೆಗೆ ಕಡು ವಿರೋಧ ವ್ಯಕ್ತಪಡಿಸುವ ಕಾರಣದಿಂದ. ಭಾರತೀಯ ಸಮಾಜದಲ್ಲಿ ಜಾತಿ ಪದ್ಧತಿಯು ದೈವ ಸೃಷ್ಟಿಯ ನಂಬಿಕೆಯಲ್ಲಿ ಧಾರ್ಮಿಕ ಪಾವಿತ್ರ್ಯತೆಯನ್ನು ಪಡೆದು ಜನಜೀವನದ ಆಚರಣೆಯಾಗಿರುವುದು ಈ ದೇಶದ ಬಹುದೊಡ್ಡ ದುರಂತ. ಇಂಥ ದುರಂತಕ್ಕೆ ಕಾರಣವಾಗಿರುವ ವಿಕೃತರನ್ನು ಕನಕರು ಮತ್ತೆ ಮತ್ತೆ ಪ್ರಶ್ನಿಸಿದ್ದಾರೆ. 'ಕುಲ ಕುಲ ಕುಲವೆಂದು ಹೊಡೆದಾಡದಿರಿ ನಿಮ್ಮ ಕುಲದ ನೆಲೆಯನೇನಾದರು ಬಲ್ಲಿರ'

ಎಂಬ ಕೀರ್ತನೆ ಜಾತಿಪದ್ಧತಿಯ ಕೂಪದೊಳಗೆ ಬಿದ್ದು ತೊಳಲಾಡುವ, ಹಿಂಸಿಸುವ, ಸ್ವತಃ ಹಿಂಸೆಗೆ ಒಳಪಡುವ ಜನರನ್ನು ಪ್ರಶ್ನಿಸುತ್ತದೆ. ಇದೇ ಕೀರ್ತನೆಯಲ್ಲಿ ಬರುವ

ಜಲವೆ ಸಕಲ ಕುಲಕ್ಕೆ ತಾಯಲ್ಲವೆ
ಜಲದ ಕುಲವೇನಾದರೂ ಬಲ್ಲಿರ

ಎನ್ನುವ ಪ್ರಶ್ನೆ ಮನುಕುಲಕ್ಕೆ ಜೀವ ನೀಡಿದ ನಿಸರ್ಗದಲ್ಲಿ ತರತಮಗಳಿಲ್ಲ. ಆದರೆ ಮನುಷ್ಯ ಅದನ್ನು ಸೃಷ್ಟಿಸಿಕೊಂಡು, ಮನುಷ್ಯರ ನಡುವೆಯೆ ಭೇದಭಾವ ಬಿತ್ತಿ ಹಿಂಸಿಸುತ್ತಿರುವುದಕ್ಕೆ ವಿಷಾದವಿದೆ.

ಹರಿಯೆ ಸರ್ವೋತ್ತಮ ಹರಿಯೆ ಸರ್ವೇಶ್ವರ
ಹರಿಮಯವೆಲ್ಲವೆನುತ ತಿಳಿದು

ಎನ್ನುವ ಸಾಲುಗಳು ದೈವದ ಬಗೆಗೆ ಮನುಷ್ಯರಿಗೆ ಇರುವ ನಂಬಿಕೆಗಳಿಗೂ ಅವರ ಆಚರಣೆಗೂ ಇರುವ ದ್ವಂದ್ವವನ್ನು, ಅಗಾಧ ವ್ಯತ್ಯಾಸದ ಅವಿವೇಕವನ್ನು ವಿರೋಧಿಸುತ್ತದೆ.

'ಕುಲ ಕುಲ ಕುಲವೆನ್ನುತಿಹರು
ಕುಲವ್ಯಾವುದು ಸತ್ಯಸುಖವುಳ್ಳ ಜನರಿಗೆ'

ಎನ್ನುವ ಕೀರ್ತನೆಯಲ್ಲಿ ಕೂಡ ಜಾತಿಪದ್ಧತಿ ಆಚರಿಸುವವರ ಮನಸಾಕ್ಷಿಯನ್ನು ಪ್ರಶ್ನಿಸುವಿಕೆ ಇದೆ. ಸತ್ಯದ ಸುಖವನ್ನು ಅನುಭವಿಸುವವರುಜ ಜಾತಿಯನ್ನು ಮೀರಿದವರಾಗಿರುತ್ತಾರೆ ಎಂಬ ನಿಖರತೆ ಕನಕದಾಸರದು. ಹೀಗಿದ್ದರೂ ಸ್ವತಃ ಕನಕದಾಸರೆ ತಮ್ಮ ಸಮಕಾಲೀನ ಸಂದರ್ಭದಲ್ಲಿ ತಮ್ಮ ಸಮಕಾಲಿನ ಸಂರ್ಭದಲ್ಲಿ ಜಾತಿ ಕಾರಣಕ್ಕೆ ಅಪಮಾನಗಳಿಗೆ ಒಳಗಾಗಿರುವುದನ್ನು ಕಾಣಬಹುದು. ಅಂಥ ಅಪಮಾನಗಳನ್ನು ಮೀರಿಸಿಕೊಳ್ಳಲು ಹಾಗೂ ಅಪಮಾನ ಮಾಡುವ ಮನಸ್ಸುಗಳ ಪರಿವರ್ತನೆಗಾಗಿ ಹಪಹಪಿಸುವಿಕೆ ಕೂಡ ಅನೇಕ ಕೀರ್ತನೆಗಳಲ್ಲಿ ಕಂಡುಬರುತ್ತದೆ.

'ಆತ ಮಹಾತ್ಮನು ನೆಲೆಯಾದಿ ಕೇಶವ
ಆತನೊಲಿದ ಮೇಲೆ ಯಾತರ ಕುಲವಯ್ಯ'
'ನಿಚ್ಚ ಕಾಗಿನೆಲೆಯಾದಿ ಕೇಶವನ
ಹುಚ್ಚದಾಸನಿಗೆ ಇನ್ಯಾತರ ಕುಲವಯ್ಯ'

ಕನಕದಾಸರ ಈ ಬಗೆಯ ಪ್ರಶ್ನೆ ಶೋಷಿತ ಸಮುದಾಯಗಳ ಪ್ರಶ್ನೆಯೂ ಆಗಿದೆ. ಕೇವಲ ಜಾತಿಯ ಕಾರಣದಿಂದ ಹೊರಗಿಡಲ್ಪಟ್ಟ ಸ್ಥಿತಿಗಾಗಿ ತೊಳಲಾಡುವಿಕೆಯ ಆರ್ತನಾದವಿದು.

ದಾಸ ಪರಂಪರೆಯೊಂದಿಗೆ ಕನಕರು ತಮ್ಮನ್ನು ಹೆಮ್ಮೆಯಿಂದ ಗುರುತಿಸಿಕೊಳ್ಳುವುದು ಹೀಗೆ:

'ಬದುಕಿದೆನು ಬದುಕಿದೆನು ಭವ ಎನೆಗೆ ಹಿಂಗಿತು
ಪದಮನಾಭನ ಪಾದದೊಲುಮೆ ಎನಗಾಯಿತು
ಹರಿ ತೀರ್ಥ ಪ್ರಸಾದ ಎನ್ನ ಜಿಹ್ವೆಗೊದಗಿತು
ಹರಿಯ ನಾಮಾಮೃತ ಕಿವಿಗೊದಗಿತು
ಹರಿಯದಾಸರು ಎನ್ನ ಬಂಧುಬಳಗಾದರು
ಹರಿಯ ಶ್ರೀಮುದ್ರೆ ಆಭರಣವಾಯಿತು'
'ದಾಸ ದಾಸರ ಮನೆಯ ದಾಸಾನುದಾಸ ನಾನು'

ಎಂಬುದಾಗಿ ತನ್ನನ್ನು ಹರಿದಾಸರ ಪರಂಪರೆಗೆ ಸಮರ್ಪಿಸಿಕೊಂಡು ಅದರ ಅನುಯಾಯಿಗಳೊಂದಿಗೆ ಅದಮ್ಯ ಸಂಬಂಧವನ್ನು ಉತ್ಸಾಹದಿಂದ ಕಟ್ಟಿಕೊಂಡರು. ಕನಕದಾಸರು ಪಟ್ಟ ಪರಿಪಾಟಲನ್ನು, ನಿರಂತರವಾಗಿ ಅವರನ್ನು ಕಾಡಿದ ಅನ್ಯತೆಯ

ಭೀಕರತೆಯನ್ನು ಹಿಂದೆ ಉಲ್ಲೇಖಿಸಿದ ಸಾಲುಗಳು ಕಟ್ಟಿಕೊಡುತ್ತವೆ.

ತಮ್ಮ ಕಣ್ಮುಂದಿನ ಸಾಂಪ್ರದಾಯಿಕ, ಧಾರ್ಮಿಕ, ಸಾಮಾಜಿಕ ಅಸಮಾನತೆಗಳನ್ನು ಮೀರಿಕೊಳ್ಳಲು ಕನಕದಾಸರು ಕಂಡುಕೊಂಡು ಪ್ರಚುರ ಪಡಿಸಿದ್ದೆಂದರೆ ಜ್ಞಾನ ಮಾರ್ಗ. ಹಾಗೆ ನೋಡಿದರೆ ಜ್ಞಾನದ ಆರಾಧಕ ಕನಕದಾಸರು.

‘ನಾನು ನೀನು ಎನ್ನದಿರೊ ಹೀನ ಮಾನವ
ಜ್ಞಾನದಿಂದ ನಿನ್ನ ನೀನು ತಿಳಿದು ನೋಡಲೊ’
‘ಜ್ಞಾನವಿಲ್ಲದೆ ನೂರು ಕಾಲ ಬದುಕಲ್ಯಾತಕೆ’
‘ಸ್ನಾನವ ಮಾಡಿರೋ ಜ್ಞಾನ ತೀರ್ಥದಲಿ’
‘ಅಡುಗೆಯನು ಮಾಡಬೇಕಣ್ಣ–ನಾನೀಗ
ಜ್ಞಾನದಡುಗೆಯನು ಮಾಡಬೇಕಣ್ಣ’
‘ನಿತ್ಯಜ್ಞಾನಿಯಾದ ಮೇಲೆ ಚಿಂತೆಯಾತಕೆ’

ಇಂತಹ ಸಾಲುಗಳು ಮನುಷ್ಯನ ವಿಮೋಚನೆಗೆ ಅಗತ್ಯವಾದ ಜ್ಞಾನದ ಅನಿವಾರ್ಯತೆಯನ್ನು, ಹಾಗೆಯೇ ಮಾನವನಿಗೆ ಜ್ಞಾನದಿಂದುಂಟಾಗುವ ಮಾನಸಿಕ ಪರಿವರ್ತನೆಯನ್ನು ಸ್ಪಷ್ಟಪಡಿಸುತ್ತವೆ. ಜ್ಞಾನ ಎನ್ನುವುದು ಇಲ್ಲಿ ಒಣ ಪಾಂಡಿತ್ಯಕ್ಕೆ ಸಂಬಂಧಿಸಿದ್ದಲ್ಲ. ಅದು ಮನುಷ್ಯನ ಪ್ರಗತಿಯ ಸಾಧನವು ಕೂಡ. ಜ್ಞಾನವೆಂದರೆ ಇಲ್ಲಿ ಬಸವಣ್ಣ ಹೇಳಿರುವಂತೆ ಅಜ್ಞಾನದ ಕೇಡುಗಳನ್ನು ನಿರ್ಮೂಲನೆಗೊಳಿಸುವ ದೀವಿಗೆ. ಬುದ್ಧನ ‘ಪ್ರಜ್ಞಾ’ ಹಾಗೂ ಅಂಬೇಡ್ಕರರ ‘ಶಿಕ್ಷಣ’ದ ಪರಿಕಲ್ಪನೆ ಈ ಬಗೆಯ ವೈಶಾಲ್ಯತೆಯದಾಗಿತ್ತು.

ಹೀಗೆ; ದಾಸ ಪರಂಪರೆಯ ವಿಶಿಷ್ಟ ಸಂತರಾಗಿರುವ ಕನಕದಾಸರು ಕೆಲವೊಮ್ಮೆ ತಮ್ಮ ಕೀರ್ತನೆಗಳಲ್ಲಿ ವೈದಿಕ ಪರಂಪರೆಯ ವಿಧಿ. ಹಣೆಬರಹ, ಕರ್ಮಸಿದ್ಧಾಂತಗಳ ಬಗೆಗೆ ಒತ್ತು ಕೊಡುವುದು ದ್ವಂದ್ವಕ್ಕೂ ಎಡೆಮಾಡಿಕೊಡುತ್ತದೆ.

‘ಒಲ್ಲೆನೆಂದರಾಗುವುದೇ ಅಲ್ಲಿ ಪಡೆದು ಬಂದುದ
ನೆಲ್ಲವನುಂಡು ತೀರಿಸಬೇಕು ಹರಿಯೆ’
‘ಅರಿಗಾದರು ಪೂರ್ವ ಕರ್ಮ ಬಿಡದು
ಅಜಭವಾದಿಗಳ ಕಾಡುತಿಹುದು’

ಈ ಬಗೆಯ ಸಾಲುಗಳು ಕನಕದಾಸರ ವೈಚಾರಿಕ ಪ್ರಜ್ಞೆಗೆ ಸಣ್ಣ ಮಿತಿಯಾಗುತ್ತವೆ. ಯಾ–ಕೆಂದರೆ ಇಂತಹ ನಂಬಿಕೆಗಳಲ್ಲೆ ಅಸಂಖ್ಯಾತ ಜನಸಮುದಾಯಗಳು ನಿರಂತರವಾದ ಶೋಷಣೆಗೆ ಒಳಗಾಗುತ್ತ ಬಂದಿರುವುದನ್ನು ಕಾಣಬಹುದು.

ಒಟ್ಟಾರೆ; ಕನಕದಾಸರ ಸಾಮರ್ಥ್ಯ ಇರುವುದೇ ಅವರ ಕೀರ್ತನೆಗಳಲ್ಲಿ ಹೊರಹೊಮ್ಮುವ ಆಧ್ಯಾತ್ಮಿಕ ವೈಶಾಲ್ಯತೆ, ಮುಗಿಯದ ಕುಲದ ಪ್ರಶ್ನೆಯನ್ನು ಮುಖಾಮುಖಿಯಾಗಿಸಿಕೊಂಡು ಜಾತಿ ಮೀರುವ ತುಡಿತ ಹಾಗೂ ಬಿಡುಗಡೆಯ ಸಾಧನವಾಗಿ ಜ್ಞಾನವನ್ನು ಪ್ರತಿಪಾದಿಸುವ ಬಗೆಯಲ್ಲಿ. ಇಂತಹವುಗಳ ಪ್ರಾಮುಖ್ಯತೆಯನ್ನು ನಮ್ಮ ನಡುವಿನ ಸವಾಲುಗಳೊಂದಿಗೆ ಸಂವಾದಿಸುವ ಮೂಲಕ ಮಾತ್ರ ಕನಕದಾಸರನ್ನು ಪ್ರಸ್ತುತಗೊಳಿಸಲು ಸಾಧ್ಯ.

(ಸಾಭಾರ : ಸಂವಾದ)

* * *

ಅಲೆಮಾರಿ ವೈದ್ಯನ ಆತ್ಮಕಥೆ

– ಡಾ॥ ಹೆಚ್. ಪಾಂಡುರಂಗ ವಿಠಲ

(ಪುಟ ೧೮೮, ಬೆಲೆ ರೂ.೯೫, ಪ್ರ: ಶ್ರೀನಿವಾಸ ಪುಸ್ತಕ ಪ್ರಕಾಶನ,೧೬೪/ಎ, ಎಂಆರ್ ಎನ್ ಬಿಲ್ಡಿಂಗ್, ಕನಕಪುರ ಮುಖ್ಯ ರಸ್ತೆ, ಬಸವನಗುಡಿ, ಬೆಂಗಳೂರು-೪)

ಗ್ರಾಮೀಣ ವೈದ್ಯರಾಗಿ ಡಾ॥ ಎಂ.ಬಿ. ಮರಕಿಣಿಯವರು ಇಲ್ಲಿ ತಮ್ಮ ಅನುಭವವನ್ನು ಸೊಗಸಾಗಿ ಮೂಡಿಸಿದ್ದಾರೆ. ಅತಿ ಬಡತನದ ಬಾಲ್ಯ, ಅದರಲ್ಲೂ ಅನ್ಯಾಯದ ವಿರುದ್ಧ ಹೋರಾಡುವ ಮನೋಭಾವದಿಂದ ಪೇಚಿಗೆ ಸಿಕ್ಕಿಹಾಕಿಕೊಂಡು ಎಸ್‌ಎಸ್‌ಎಲ್‌ಸಿ ಪಾಸಾಗದಿರುವ ಹಂತದವರೆಗೆ ಕರುಣಾಜನಕ ಕತೆ.ಹಂಬಲವಿಲ್ಲದಿದ್ದರೂ ಅವಕಾಶ ಸಿಕ್ಕಿದಾಗ ವೈದ್ಯಕೀಯ ಕಲಿಯಲು ಬಳ್ಳಾರಿಗೆಂದು ಹೊರಟು ಕೊನೆಗೆ ಮೈಸೂರು ಆಯುರ್ವೇದಿಕ್ ಕಾಲೇಜಿಗೆ ಇಂಟಿಗ್ರೇಟೆಡ್ ಐಂಒಖಗೆ ಸೇರುತ್ತಾರೆ. ಪ್ರಾಂಶುಪಾಲ ದ್ವಾರಕಾನಾಥರು ದೇಶದೆಲ್ಲೆಡೆ ಏಕರೂಪಗೊಳಿಸಲ್ಪಟ್ಟಿದ್ದ ಆಯುರ್ವೇದ ಶಿಕ್ಷಣವನ್ನು ವಿಂಗಡಿಸಿ, ಹೊಸ ಸಿಲೆಬಸ್‌ಅನ್ನು ನಿಗದಿಗೊಳಿಸಿ, ಟೆಕ್ಸ್ಟ್‌ಬುಕ್ ರಚಿಸುತ್ತಾರೆ. ಅಲೋಪತಿ ಸ್ವಲ್ಪಮಟ್ಟಿಗೆ ಕಲಿಯುವ ಅವಕಾಶವೂ ಇರುತ್ತದೆ. ವಿದ್ಯಾರ್ಥಿಸಂಘದ ಚುನಾವಣೆಯಲ್ಲಿ ಸ್ಪರ್ಧಿಸಿರದಿದ್ದರೂ ಅಚಾನಕವಾಗಿ ಸಾಹಿತ್ಯ ವಿಭಾಗಕ್ಕೆ ನೇಮಕಗೊಳ್ಳುತ್ತಾರೆ. ವಿವಿಧ ಕಾರ್ಯಕ್ರಮಗಳನ್ನು ಸಂಘಟಿಸಿದುದಲ್ಲದೆ, ಎರಡು ವಾರ್ಷಿಕ ಸಂಚಿಕೆಗಳನ್ನೂ ಸಿದ್ಧಗೊಳಿಸಿ, ಹೆಸರಾಗುತ್ತಾರೆ.

ಅನಂತರ ಲೇಖಕರು ಮನೆ ಸಮೀಪದ ಅಡ್ಯನಡ್ಕದಲ್ಲಿ ಕ್ಲಿನಿಕ್ ತೆಗೆದು ಸಾಕಷ್ಟು ಪ್ರಸಿದ್ಧರಾಗುತ್ತಾರೆ. ಜನರ ಕುತೂಹಲ, ಹೊಸಬರ ಬಗೆಗಿನ ಅಪನಂಬಿಕೆ, ಮೊದಲ ಗಿರಾಕಿಯಿಂದ ಸಿಕ್ಕು, ಇವರಿಗೆ ಅಂಟಿಕೊಂಡ ಪಾದೆ ಆಸುಪತ್ರೆ, ಹತ್ತಾಣೆ ಡಾಕುಟ್ರು ಎಂಬ ಬಿರುದು ಇವುಗಳನ್ನೆಲ್ಲ ತಮಾಷೆಯಾಗಿ ವರ್ಣಿಸುತ್ತಾರೆ. ವಿಚಾರವಾಣಿ ಪತ್ರಿಕೆ ಪ್ರಾರಂಭಿಸಿ, ಅನುಭವ ಪಡೆಯುತ್ತಾರೆ. ಹೆಚ್ಚು ಓದಬೇಕೆನ್ನುವ ಹಂಬಲದಿಂದ ಜರ್ಮನಿಗೆ ಹೋಗಿ, ಡಿಟಿಎಮ್ ಪದವಿ, ಕುಟುಂಬ ಸಂಕ್ಷೇಮದ ತರಬೇತಿಗಳನ್ನು ಮುಗಿಸುತ್ತಾರೆ. ಆದರೆ ಹಿಂದಿರುಗಿದ ಮೇಲೆ ಪ್ರಾಕ್ಟೀಸು ಕೈಬಿಟ್ಟು ಹೋಗಿದ್ದು, ವಿದೇಶ ವಿದ್ಯಾಭ್ಯಾಸಕ್ಕಾಗಿ ಮಾಡಿದ ಸಾಲ ತೀರಿಸುವ ವಾಯಿದೆ ಹತ್ತಿರ ಬಂದಿತ್ತು. ಆದುದರಿಂದ ಪಂಡಿತ ತಾರಾನಾಥರ ಮಗ, ಸರಕಾರೀ ಆಸ್ಪತ್ರೆಯಲ್ಲಿ ವೈದ್ಯರಾಗಿದ್ದ ಗೆಳೆಯ ಡಾ॥ ರಣಜೀರ್ ತಾರಾನಾಥ್ ಅವರ ಸಲಹೆಯ ಮೇರೆ ಮಂತ್ರಾಲಯದ ಬಳಿ ನಿಷ್ಕ್ರಿಯವಾಗಿದ್ದ ತಾರಾನಾಥರ ಪ್ರೇಮ ಚಿಕಿತ್ಸಾಲಯವನ್ನು ಪುನಃ ಪ್ರಾರಂಭಿಸಲು ಹೊರಡುತ್ತಾರೆ.

ಅನಿರೀಕ್ಷಿತವಾಗಿ, ವಿಟ್ಲದ ತಮ್ಮ ಕ್ಲಿನಿಕ್ ಮುಚ್ಚಲು ನಿರ್ಧರಿಸಿದ್ದ ಡಾ॥ ಸಬಿತಾ ಇವರನ್ನು ಮದುವೆಯಾಗಿ, ಜತೆಗೆ ಹೊರಡುತ್ತಾರೆ. ಆದರೆ ಡಾ॥ ರಣಬೀರ್ ತಾರಾನಾಥ್ ವರ್ಷವಾಗುವುದರೊಳಗೇ ಅಲ್ಲಿಗೆ ಬಂದು, ತಾವು ಸದ್ಯದಲ್ಲೇ ಅಲ್ಲಿ ಬಂದು ನೆಲಸುವುದಾಗಿ ಹೇಳುತ್ತಾರೆ. ಬೇರೆ ಎಲ್ಲಿ ಹೋಗಬಹುದೆಂದು ಯೋಚಿಸುವಾಗ, ಗುಲಬರ್ಗಾ ಜಿಲ್ಲೆಯ ಚಿತ್ತಾಪುರ ಸರಿಹೋಗಬಹುದೆಂದು ಇನ್ನೊಬ್ಬ ಡಾಕ್ಟರರು ಸಲಹೆ ನೀಡುತ್ತಾರೆ.

ಹೀಗೆ ಚಿತ್ತಾಪುರದಲ್ಲಿ ನೆಲೆ ನಿಂತು ೧೫ ವರ್ಷ ಮೈಸೂರು ದವಾಖಾನೆ ನಡೆಸುತ್ತಾರೆ. ಇದಲ್ಲದೆ, ಶಿಶುವಿಹಾರ, ಪ್ರೆಸ್, ಯುವಕ ಸಂಘ, ವಾಚನಾಲಯ, ಬರಗಾಲದಲ್ಲಿ ೨೫ ಕಡೆ ಗಂಜಿ ಕೇಂದ್ರ ಸಂಚಾರೀ ಚಿಕಿತ್ಸಾ ಘಟಕ ಮೊದಲಾದ ಸಾಮಾಜಿಕ ಚಟುವಟಿಕೆಗಳನ್ನು ನಡೆಸುತ್ತಾರೆ. ವಿಷವೈದ್ಯ ಶಾಸ್ತ್ರ, ಪತ್ರಿಕೆಗಳಲ್ಲಿ ಧನ್ವಂತರಿ ಛಾಪಿನ ಲೇಖನಗಳಿಂದ ಹೆಸರಾಗುತ್ತಾರೆ. ಇನ್ನೂ ಹೆಚ್ಚಿನ ಸಮಾಜ ಸೇವೆ ಮಾಡಬೇಕೆಂಬ ಹಂಬಲ ಅವರದು. ೧೯೭೭ರಲ್ಲಿ ಆಂಧ್ರದ ಕೃಷ್ಣಾ ಜಿಲ್ಲೆಯಲ್ಲಿ ಚಂಡಮಾರುತ ಪೀಡಿತರ ಸೇವೆಗಾಗಿ ಹೈದ್ರಾಬಾದ್‌ನ ಅವೇರ್ ಸ್ವಯಂಸೇವಾ ಸಂಸ್ಥೆಯನ್ನು ಸೇರುತ್ತಾರೆ. ಇಂತಹ ಗ್ರಾಮಾಭಿವೃದ್ಧಿಯ ಚಟುವಟಿಕೆಗಳಲ್ಲಿ ಆಂಧ್ರದ ಪಡಕ್ಕಲ್‌ನಲ್ಲಿ ದವಾಖಾನೆ ತೆರೆದುದಲ್ಲದೆ, ರಾಜಕೀಯವಾಗಿ ಪ್ರಬಲರಾಗಿದ್ದ ರೆಡ್ಡಿಗಳ ಎದುರು ಹರಿಜನ ಗಿರಿಜನರು ಸಂಘಟಿತರಾಗುವಂತೆ ಮಾಡುತ್ತಾರೆ.

ಅವೇರ್‌ನ ಆಸ್ಪತ್ರೆ ಉದ್ಘಾಟನೆಗೆ ಹಣ ಸಹಾಯ ಮಾಡಿದ ನೋವಿಬ್ ಸಂಸ್ಥೆಯ ಕಾರ್ಯದರ್ಶಿ ಸ್ವತಃ ಆಗಮಿಸಿದ್ದರು. ಇಂತಹ ಸಂಸ್ಥೆಗಳು ಹಾಗೂ ಸ್ವಯಂಸೇವಾಸಂಸ್ಥೆಗಳ ನಡುವೆ ದಿ ಹೇಗ್‌ನಲ್ಲಿ ನಡೆದ ಸಮಾವೇಶಕ್ಕೆ ಲೇಖಕರು ಆಹ್ವಾನಿತರಾಗಿ ಹೋಗಿದ್ದರು. ತಜ್ಞರ ಜತೆ, ಸಂಸ್ಥೆಗಳ ಜತೆ ಪ್ರತ್ಯಕ್ಷ ಸಂದರ್ಶಿಸಿ ಚರ್ಚಿಸಿ, ನೆರವು ನಿಂತ ಮೇಲೆ ಆಸ್ಪತ್ರೆ ಸ್ವಾವಲಂಬಿಯಾಗಲು ಕಾರ್ಯಕ್ರಮಗಳನ್ನು ರೂಪಿಸಿ ಅದು ತನ್ನ ಕಾಲಮೇಲೆ ನಿಂತಮೇಲೆ, ಕರ್ನಾಟಕಕ್ಕೆ ಹಿಂದಿರುಗುತ್ತಾರೆ. ಈ ನಡುವೆ ಗೋದಾವರಿ ಅಂಚಿನ ಗ್ರಾಮಗಳಿಗೆ ವೈದ್ಯಕೀಯ ಸೌಲಭ್ಯ ಕಲ್ಪಿಸಲು ಕೂನಾವರಂನ ಆರೋಗ್ಯ ಕೇಂದ್ರವನ್ನು ಕೇಂದ್ರ ಮಾಡಿಕೊಂಡು ನದೀಮಾರ್ಗದಲ್ಲಿ ವಾರಕ್ಕೆ ಎರಡುದಿನ ೧೦೦ ಕಿ.ಮೀ. ಸಂಚರಿಸುವ ಚಿಕಿತ್ಸೆಯ ವ್ಯವಸ್ಥೆಯುಳ್ಳ ಜೀವನ ಸ್ರವಂತಿ ಹೆಸರಿನ ಸಂಚಾರೀ ದೋಣಿ ಆಸ್ಪತ್ರೆಯನ್ನು ಪ್ರಾರಂಭಿಸುತ್ತಾರೆ.

ಅನಂತರ ಮೈರಾಡ ಸಂಸ್ಥೆಯ ಕ್ಷೇತ್ರಕಾರ್ಯಾಲಯವನ್ನು ಗುಲಬರ್ಗಾದ ಕಮಲಾಪುರದಲ್ಲಿ ಸ್ಥಾಪಿಸುವ ಲೇಖಕರು ವಾಟರ್‌ಶೆಡ್ ಡೆವೆಲಪ್‌ಮೆಂಟ್ ಪ್ರಾಜೆಕ್ಟ್‌ನ ಅಧಿಕಾರಿಯಾಗಿದ್ದರೂ, ಆ ಪ್ರಾಜೆಕ್ಟ್ ವಿಳಂಬವಾದುದನ್ನು ವಿವರಿಸಿ, ತಾವು ನೋಡಿಕೊಂಡ ಆರೋಗ್ಯ ಕಾರ್ಯಕ್ರಮಗಳು, ತರಬೇತಿ, ಕೊಳವೆಬಾವಿಗಳನ್ನು ಕೊರೆಸಿ ಕುಡಿಯುವ ನೀರಿಗೆ ಅನುಕೂಲ ಮಾಡಿಕೊಟ್ಟುದು ಇವನ್ನು ವಿವರಿಸುತ್ತಾರೆ. ಈ ಪ್ರಾಜೆಕ್ಟ್ ಸಮಾಜಮುಖಿಯಾಗಿ, ಎಲ್ಲರೂ ಭಾಗವಹಿಸುವ ಪಿಡೋ ಪ್ರಾಜೆಕ್ಟ್ ಆಗುವಾಗ, ಮೈಸೂರಿನ ಹೆಗ್ಗಡದೇವನಕೋಟೆಯ ಪ್ರಾಜೆಕ್ಟ್‌ಗೆ

ಇವರನ್ನು ವರ್ಗಾಯಿಸುತ್ತಾರೆ. ಇಲ್ಲಿ ನಿರ್ಲಕ್ಷಿತ ಜನರ ಮಕ್ಕಳೆಡೆಗೆ ಆರೋಗ್ಯ ರಕ್ಷಣೆಯ ನೆರವನ್ನು ಇತ್ತ ರೀತಿಯನ್ನು ವಿವರಿಸುತ್ತಾರೆ. ಇಲ್ಲಿ ಪ್ರಾರಂಭಿಸಿ, ನಡೆಸಿದ ವಿವಿಧ ಕಾರ್ಯಕ್ರಮಗಳಿಗಾಗಿ ಅವಾರ್ಡ್ ಆಫ್ ಎಕ್ಸಲೆನ್ಸ್ ಪ್ರಶಸ್ತಿ ಪಡೆದು ತಮ್ಮ ೬೦ನೇ ವರ್ಷದಲ್ಲಿ ನಿವೃತ್ತರಾಗುತ್ತಾರೆ.

ಇದಲ್ಲದೆ, ಗುಲ್ಬರ್ಗದಲ್ಲಿ ನಡೆಸಿದ ಸ್ವಾತಂತ್ರ್ಯವೀರರ ಸಂಸ್ಮರಣೆ, ಬೆಂಗಳೂರಿನ ರಾಮಸುಧಾ ಟ್ರಸ್ಟ್‌ನ ಮಹಿಳಾ ಸಮೃದ್ಧಿ ಯೋಜನೆಯಲ್ಲಿ ೧೯೯೬ರಿಂದ ಮೂರು ವರ್ಷ ದುಡಿದುದು, ವಿಶ್ವ ಆರೋಗ್ಯ ಸಂಸ್ಥೆಯ ವತಿಯಿಂದ ಬಿಹಾರ-ಜಾರ್ಖಂಡ್‌ನ ಆದಿವಾಸಿಗಳಿಗೆ ಕುಷ್ಠರೋಗ ಚಿಕಿತ್ಸೆ ಕಾರ್ಯದಲ್ಲಿ ತೊಡಗಿದುದು, ಅರಣ್ಯ ಇಲಾಖೆಗಾಗಿ ಪಾರಂಪರಿಕ ಗೃಹವೈದ್ಯ ಗ್ರಂಥ ಬರೆದುದು, ಬೆಂಗಳೂರಿನ ಫ್ರೀಡಂ ಫೌಂಡೇಶನ್ ಉಡುಪಿ ಹತ್ತಿರದ ಕಾಪು ಬಳಿ ನಿರ್ಮಿಸಿದ ಏಡ್ಸ್ ಶುಶ್ರೂಷಾ ಕೇಂದ್ರದಲ್ಲಿ ಸಂಯೋಜಕರಾಗಿದ್ದುದು ಇವನ್ನು ಸಂಕ್ಷಿಪ್ತವಾಗಿ ವಿವರಿಸಿದ್ದಾರೆ.

ಬಾಳ ಸಂಜೆಯಲ್ಲಿ ನೆಲಮಂಗಲ ಬಳಿಯ ಅರಿಸಿನಕುಂಟೆಯಲ್ಲಿ ಮನೆ ಮಾಡಿದುದು, ಮಕ್ಕಳು-ಮೊಮ್ಮಕ್ಕಳ ಜೀವನದ ವಿವರಗಳನ್ನು ನೀಡಿ, ದಿನನಿತ್ಯದ ಕೆಲಸಗಳನ್ನು ವರ್ಣಿಸಿದ್ದಾರೆ. ಸಾರ್ಥಕ ಜೀವನ ನಡೆಸಿದ ಶಾಂತ ಮನಸ್ಥಿತಿ ಡಾ॥ ಎಂ. ಬಿ. ಮರಕಿಣಿಯವರದು.

ಪುಸ್ತಕದ ಸ್ವಾರಸ್ಯ ಇರುವುದು ಮೂರು ಅಂಶಗಳಲ್ಲಿ. ಮೊದಲನೆಯದು, ಆಯುರ್ವೇದ ಹಾಗೂ ಅದರ ಶಿಕ್ಷಣದ ಬಗ್ಗೆ ಸರಕಾರ ಹೇಗೆ ನಿರುತ್ಸಾಹ ತಾಳಿದೆ ಎಂದು ವಿವರಿಸುತ್ತಾರೆ. ಆಯುರ್ವೇದದೊಡನೆ ಅಲೋಪತಿಯನ್ನೂ ಸ್ವಲ್ಪ ಕಲಿಸುವ ಪ್ರಗತಿ ಸ್ವಾತಂತ್ರ್ಯ ಪೂರ್ವದಲ್ಲೆ ಇದ್ದರೂ, ಆಯುರ್ವೇದ ಕಾಲೇಜು ವೈದ್ಯಕೀಯ ಇಲಾಖೆ ಅಥವಾ ಶಿಕ್ಷಣ ಇಲಾಖೆಯ ಅಧೀನದಲ್ಲಿರದೆ, ಸ್ಥಳೀಯ ಸಂಸ್ಥೆಗಳ ಸ್ವಯಮಾಡಳಿತ ಇಲಾಖೆಯ ಬಾಲಂಗೋಚಿಯಾಗಿಯೆ ಇತ್ತು. ಕೆಲಕಾಲ ಮುಜರಾಯಿ ಇಲಾಖೆಗೆ ಅಂಟಿಕೊಂಡಿತ್ತು. ಸರ್ಜರಿ ಪೇಪರಿನಲ್ಲಿ ಅಲೋಪತಿ ಉಪನ್ಯಾಸಕರು ಯಾರೂ ಪಾಸಾಗದಂತೆ ಅತ್ಯಂತ ಕಠಿನ ಪ್ರಶ್ನಪತ್ರಿಕೆ ನೀಡುತ್ತಿದ್ದರು. ಆಗಲೇ ಅಲೋಪತಿ – ಆಯುರ್ವೇದ ಜಟಾಪಟಿ ನಡೆದಿತ್ತು.

ಎರಡನೆಯದು, ಸೂಪರ್ ಸ್ಪೆಷಾಲಿಟಿಗೆ ಒತ್ತು ನೀಡುವ ಈಗಿನ ವೈದ್ಯಕೀಯ ಶಿಕ್ಷಣ ಗ್ರಾಮೀಣ ಅಗತ್ಯಗಳನ್ನು ಹೇಗೆ ಕಡೆಗಣಿಸಿದೆ ಎಂಬುದು. ಈಗ ಗ್ರಾಮೀಣ ಬಡವರಿಗೆ ಬೇಕಾದುದು ಹಳ್ಳಿಯಲ್ಲೆ ನೆಲೆಸುವ ತರಬೇತಿ ಪಡೆದ ಪಾರಂಪರಿಕ ಸೂಲಗಿತ್ತಿಯರು, ಆರೋಗ್ಯ ಕಾರ್ಯಕರ್ತರು, ಜನರಿಗೆ ಆರೋಗ್ಯಕರ ಜೀವನದ ಬಗ್ಗೆ ತಿಳುವಳಿಕೆ ನೀಡಬಲ್ಲ ತರಬೇತಿ ಹೊಂದಿದ ಇತರ ಉದ್ಯೋಗಿಗಳು. ಆದರೆ ಹಳ್ಳಿಯಲ್ಲೆ ನೆಲೆಸಬಲ್ಲ ಆಯುರ್ವೇದ ವೈದ್ಯರಿಗೆ ಹಿಂದೆ ನೀಡುತ್ತಿದ್ದ ಸ್ವಲ್ಪ ಮಟ್ಟಿನ ಅಲೋಪತಿ ಶಿಕ್ಷಣ ಹಾಗೂ ಪರವಾನಗಿ ಇಂದು ರದ್ದಾಗಿದೆ. ಜನರಿಗೆ ಬೇಕಾದುದು ಕೈಗೆಟುಕಬಲ್ಲ ವೈದ್ಯಕೀಯ ನೆರವು. ಅವರಿಗೆ

ತಮ್ಮ ರೋಗ ಚಿಕಿತ್ಸೆಗೆ ಒಂದು ನಿಗದಿಯಾದ ಹಣ ನೀಡುವಂತಿರಬೇಕು, ಔಷಧಿಗಾಗಿ ಬೇರೆಡೆ ಹೋಗುವಂತಿರಬಾರದು. ಆದರೆ ಈಗ ಸಿಗುತ್ತಿರುವ ಅಲೋಪತಿ ಚಿಕಿತ್ಸೆ ಎಂತಹುದು? ಡಾಕ್ಟರರು ಸಲಹೆ ನೀಡಬಹುದಷ್ಟೇ, ಔಷಧಿ ಮಾರುವಂತಿಲ್ಲ. ಆಸ್ಪತ್ರೆ ಸೇರಿದರೆ ಇಷ್ಟೇ ಬಿಲ್ ಆಗುತ್ತದೆಂದು ಹೇಳುವಂತಿಲ್ಲ. ಕೆಲವು ಆಸ್ಪತ್ರೆಗಳಂತೂ ಹಣಕ್ಕಾಗಿ ರೋಗಿಗಳನ್ನು ಒತ್ತೆಸೆರೆ ಇಟ್ಟುಕೊಂಡಂತೆ ಮಾಡುತ್ತವೆ. ರೋಗನಿದಾನದ ಮೊದಲಿನ ಟೆಸ್ಟ್‌ಗಳಿಗೇ ನೂರಾರು ರೂಪಾಯಿ ಆಗಬಹುದು. ಸಾಮಾನ್ಯ ಶೀತ-ಕೆಮ್ಮಿನ ಚಿಕಿತ್ಸೆಗೇ ಮುನ್ನೂರು ರೂಗಳಷ್ಟು ವೆಚ್ಚವಾಗುತ್ತದೆ. ಬಡವರು ವೈದ್ಯರೆಂದರೆ ಬೆಚ್ಚುವಂತಾಗಿದೆ. ಸಕಾಲದಲ್ಲಿ ಚಿಕಿತ್ಸೆ ಪಡೆಯದೆ ತಡೆಯಲಾಗದಷ್ಟು ರೋಗ ಬಲಿತ ಮೇಲೆ ಅನಿವಾರ್ಯವಾಗಿ ಆಸ್ಪತ್ರೆ ಸೇರುತ್ತಾರೆ, ಸಾಲಕ್ಕೆ ಬಲಿಯಾಗುತ್ತಾರೆ. ನಕಲಿ ವೈದ್ಯರಿಗೆ ಶರಣಾಗುವವರೂ ಇದ್ದಾರೆ. ಇಂತಹ ಪರಿಸ್ಥಿತಿಯಲ್ಲಿ ಡಾ॥ ಮರಕಿಣಿಯಂತಹವರೂ ಇದ್ದಾರೆ ಎಂಬುದೇ ಧೈರ್ಯ ಹುಟ್ಟಿಸುವ ಅಂಶ.

ಮೂರನೆಯದು, ಸ್ವಯಂಸೇವಾಸಂಸ್ಥೆಗಳಲ್ಲಿ ಕೆಲಸಮಾಡುವ ಬಹುತೇಕ ಬೇಜವಾಬ್ದಾರಿ ಕಾರ್ಯಕರ್ತರ ರೀತಿನೀತಿಗಳ ವರ್ಣನೆ. ಬರೀ ವಿದೇಶೀ ನೆರವಿಗಾಗಿಯೆ ವರದಿ ನೀಡುವ ಕೆಲಸ ಮಾಡುವ ಇಂಥ ಸ್ವಯಂಪ್ರೇರಿತ ಸೇವಾಕಾಂಕ್ಷಿತ ಪದವೀಧರರು ಸೇವಾಮನೋಭಾವವಿಲ್ಲದೆ, ಸಾಮಾನ್ಯರಿರಲಿ, ಪ್ರಾಮಾಣಿಕವಾಗಿ ಸೇವೆ ಮಾಡಲು ಬಂದವರಿಗೇ ಅಸಹ್ಯ ಹುಟ್ಟಿಸುವಂತೆ ಹೇಗೆ ನಡೆದುಕೊಳ್ಳುತ್ತಾರೆ ಎಂಬುದನ್ನು ವಿವರಿಸಿರುವುದು. ಸಾಮಾಜಿಕ ಸೇವಾಕ್ಷೇತ್ರ ಮಾಲಿನ್ಯಗೊಂಡಿರುವುದು ಸೂಚ್ಯವಾಗಿ ಇಲ್ಲಿ ವಿವರಿಸಲ್ಪಟ್ಟಿದೆ.

ಈ ಗ್ರಂಥದಲ್ಲಿ ಕೊರತೆಗಳು ಇಲ್ಲವೆಂದಿಲ್ಲ. ತುಂಬ ವಯಸ್ಸಾದ ಮೇಲೆ ನೆನಪುಗಳನ್ನು ಬರೆದಿದ್ದರಿಂದ, ಎಷ್ಟೋ ಸಂಗತಿಗಳು ಕಲಸಿಹೋಗಿವೆ, ಹಿಂದುಮುಂದಾಗಿವೆ. ಯಾವುದಕ್ಕೂ ಖಚಿತ ಕಾಲವನ್ನು ನಮೂದಿಸಿಲ್ಲ. ಜೀವನದ ಮುಖ್ಯ ಘಟನೆಗಳ ಕಾಲಸೂಚಿಯನ್ನು ನೀಡಬಹುದಿತ್ತು. ಮುದ್ರಣದೋಷಗಳನ್ನು ತಿದ್ದಿಲ್ಲ. ಆದರೆ ಇವೆಲ್ಲ ಕೊರತೆಗಳನ್ನು ಮರೆಸುವಂತಹ ಲವಲವಿಕೆಯ, ಹಾಸ್ಯಲೇಪಿತ ಶೈಲಿಯಿಂದಾಗಿ ಇದರ ಓದು, ಒಂದು ವಿಶೇಷ ಅನುಭವ ನೀಡುತ್ತದೆ.

* * *

ಜನಪದ ಸೇವಾ ಟ್ರಸ್ಟ್ ಸಮಾಚಾರ

೨೦೧೩ರ ಕೊನೆ ಮತ್ತು ೨೦೧೪ರ ಪ್ರಾರಂಭ ಎರಡೂ ಸ್ಮರಣೀಯವಾದ ದಿನಗಳು. ಒಂದು ಸಂದರ್ಭ ಗತಿಸಿದ ಮಧುರ ನೆನಪುಗಳ ಮೆಲಕು ಮತ್ತು ಎರಡನೆಯದು ನಾಡಿನ ಪುಣ್ಯ ದಿಗಂತದಲ್ಲಿ ನವ ಅರುಣೋದಯ ನೋಡುವ ದಿನ. ಕನ್ನಡ ಚಿತ್ರರಂಗದ ಜನಪ್ರಿಯ ನಟರಾಗಿದ್ದ ಶಂಕರ್‌ನಾಗ್ ಟ್ರಸ್ಟಿನ ಅಭಿಮಾನಿಗಳಲ್ಲಿ ಒಬ್ಬರಾಗಿದ್ದರು. ಕರುಣ್ಯಗೃಹದ ಮಕ್ಕಳನ್ನು ಮತ್ತು ಟ್ರಸ್ಟಿನ ಇತರ ಚಟುವಟಿಕೆಗಳನ್ನು ನೋಡಲು ಅವರು ಪತ್ನಿ ಅರುಂಧತಿಯೊಂದಿಗೆ ಬಂದಿದ್ದರು. ಅವರ ಆ ಭೇಟಿಯ ನಂತರ ಟ್ರಸ್ಟ್ ಮತ್ತು ನಾಗ್ ದಂಪತಿಗಳ ನಡುವೆ ಮಧುರ ಬಾಂಧವ್ಯ ಏರ್ಪಟ್ಟಿತ್ತು. ಶಂಕರ್‌ನಾಗ್‌ರವರ ಅಗಲಿಕೆಯ ನಂತರ ನೇರ ಭೇಟಿ ಕಡಿಮೆಯಾಗಿ ಭಾವನಾತ್ಮಕ ಸಂಬಂಧ ಉಳಿದಿತ್ತು. ಅನೇಕ ವರ್ಷಗಳ ನಂತರ ಅರುಂಧತಿನಾಗ್‌ರವರು ತಮ್ಮ ಮಗಳು ಕಾವ್ಯಾಳೊಂದಿಗೆ ಡಿಸೆಂಬರ್ ಕೊನೆಯಲ್ಲಿ ಭೇಟಿನೀಡಿದರು ಮತ್ತು ಹಳೆಯ ನೆನಪುಗಳನ್ನು ಮೆಲಕು ಹಾಕಿದರು.

ಕಳೆದ ಎರಡು ವರ್ಷಗಳಿಂದ ಟ್ರಸ್ಟ್ ನಡೆಸುತ್ತಿರುವ ದತ್ತು ಕೇಂದ್ರದ ಕಾರ್ಯಕ್ರಮದ ಅಂಗವಾಗಿ ಇದುವರೆಗೆ ಹನ್ನೆರಡು ಮಕ್ಕಳನ್ನು ದತ್ತು ಕೊಡಲಾಗಿದೆ. ದತ್ತು ಹೋದ ಮಕ್ಕಳನ್ನು ಮತ್ತು ದತ್ತು ಪಡೆದ ತಂದೆ-ತಾಯಂದಿರನ್ನು ಒಟ್ಟು ಗೂಡಿಸುವ ಸ್ನೇಹ ಮಿಲನವೊಂದನ್ನು ಹೊಸ ಜೀವನ ದಾರಿ ಕೇಂದ್ರದಲ್ಲಿ ಏರ್ಪಡಿಸಲಾಗಿತ್ತು. ಎಲ್ಲರೂ ತಮ್ಮ ಮಕ್ಕಳೊಂದಿಗೆ ಬಂದಿದ್ದರು. ದತ್ತು ಸ್ವೀಕಾರ ನಂತರದ ಅನುಭವಗಳನ್ನು ಎಲ್ಲರೂ ಹಂಚಿಕೊಂಡರು. ಸ್ನೇಹಮಿಲನ ಸಹೃದಯತೆಯಿಂದ ಕೂಡಿದ್ದಾಗಿತ್ತು. ಮಾನವೀಯತೆಯ ಮಧುರ ವಾತಾವರಣ ನಿರ್ಮಾಣವಾಗಿತ್ತು. ಬೆಳಗಿನಿಂದ ಮಧ್ಯಾಹ್ನದ ವರೆಗೆ ಎಲ್ಲರೂ ಸಂತೋಷದಿಂದ ಸಮಯ ಕಳೆದು ಸಹಭೋಜನ ಮಾಡಿ ನಿರ್ಗಮಿಸಿದರು.

ಬೆಂಗಳೂರಿನ ಟ್ರಸ್ಟಿನ ಅಭಿಮಾನಿ ಸರಸ್ವತಿ ತಮ್ಮ ಮಗ ಅಪ್ರಮೇಯನ ಜನ್ಮದಿನದ ಸಂತೋಷದ ನಿಮಿತ್ತ ಟ್ರಸ್ಟಿಗೆ ಭೇಟಿಕೊಟ್ಟರಲ್ಲದೆ ಶ್ರೀ ಕೃಷ್ಣ ಕನ್ನಡ ಶಿಶುವಿಹಾರಕ್ಕೆ ವಿವಿಧ ಆಟದ ಸಾಮಾನುಗಳನ್ನು ಕೊಟ್ಟರು. ಅವರ ಜೊತೆಯಲ್ಲಿ ಟ್ರಸ್ಟಿನ ಅಭಿಮಾನಿ ಶ್ರೀ ರಮಾಕಾಂತ ಅನವಟ್ಟಿ ದಂಪತಿಗಳು ಬಂದಿದ್ದರು.

ಧಾರವಾಡದಲ್ಲಿ ಡಾ॥ಸಂಜಯ ಕುಲಕರ್ಣಿ ನಡೆಸುತ್ತಿರುವ ವಿಶೇಷ ಬಗೆಯ ಶಾಲೆ 'ಬಾಲಬಳಗ'ದ ವಿದ್ಯಾರ್ಥಿಗಳು ಮತ್ತು ಅಧ್ಯಾಪಕಿಯರು ಟ್ರಸ್ಟಿಗೆ ಭೇಟಿಕೊಟ್ಟರು.

ಶ್ರವಣಬೆಳಗೊಳದಲ್ಲಿರುವ ಬಾಹುಬಲಿ ಇಂಜನಿಯರಿಂಗ್ ಕಾಲೇಜಿನ ಅಧ್ಯಾಪಕ, ಅಧ್ಯಾಪಕಿಯರು ಭೇಟಿಕೊಟ್ಟರು. ಅವರನ್ನು ಟ್ರಸ್ಟಿಗೆ ಪರಿಚಯಿಸಿದವರು ಟ್ರಸ್ಟಿನ ಅಭಿಮಾನಿ ಮಿತ್ರರಾದ ಶ್ರೀ ಮೋಹನ್ ಕುಮಾರ್.

ಕೈಮಗ್ಗ ಉದ್ಯಮಕ್ಕೆ ಸರ್ಕಾರದ ನೀತಿಯಿಂದ ಆಪತ್ತು ಒದಗಿ ಬಂದಿರುವುದನ್ನು ವಿರೋಧಿಸುವುದಕ್ಕಾಗಿ ಅಖಿಲ ಭಾರತ ಕೈಮಗ್ಗ ಒಕ್ಕೂಟವು ನಡೆಸಿರುವ ಸತ್ಯಾಗ್ರಹ ಪ್ರಯುಕ್ತ ಸಾರ್ವಜನಿಕ ಸಭೆಯಲ್ಲಿ ಭಾಗವಹಿಸಲು ಶ್ರೀ ಸಂತೋಷ್ ಕೌಲಗಿಯವರು ಮಂಗಳೂರಿಗೆ ಹೋಗಿಬಂದರು.

ಜನಪದ ನಿಲಯದ ಅಂತರಂಗದಲ್ಲಿ.. ೧೧೮

– ಸುರೇಂದ್ರ ಕೌಲಗಿ



ಜನಪದ ಸೇವಾ ಟ್ರಸ್ಟ್ ಮತ್ತು ಜನಪದ ನಿಲಯ ಹಾಸು–ಹೊಕ್ಕಾಗಿ ಬೆರೆತಿವೆ. ಎಲ್ಲಾ ವಿಶೇಷ ಸಂಗತಿಗಳು ಈ ಎರಡೂ ಸ್ಥಾವರಗಳಿಗೆ ಅನ್ವಯಿಸುತ್ತವೆ. ೧೯೬೦ರ ಪೂರ್ವದಲ್ಲಿ ಜನಪದ ಸೇವಾ ಟ್ರಸ್ಟ್ ಸ್ಥಾಪಿತವಾಗುವ ಮೊದಲು ಈಗಿನ ಜನಪದ ನಿಲಯ ಮೇಲುಕೊಟೆಯಲ್ಲಿಯ ಎಲ್ಲಾ ಮನೆಗಳಂತೆ ಸಾಮಾನ್ಯವಾದ ಮತ್ತು ಸಹಜವಾದ ಮನೆಯಾಗಿತ್ತು. ಆದರೂ ಕೂಡ ಒಂದು ವಿಶೇಷತೆಯನ್ನು ಅದು ಉಳಿಸಿಕೊಂಡಿತ್ತು. ಪೆನಗೊಂಡೆ ರಾಘವಾಚಾರ್ಯ ಎಂಬ ರಾಮಾನುಜರ ಭಕ್ತರು ಈ ಮನೆಯನ್ನು ಕಟ್ಟಿಸಿದರು. ಇದು ಸುಮಾರು ನೂರು ವರ್ಷಗಳ ಹಿಂದೆ. ಆಗ ಎಲ್ಲವೂ ಅಗ್ಗ. ಆದ್ದರಿಂದ ಈ ಮನೆಯ ನಿರ್ಮಾಣಕ್ಕೆ ಆಗಿದ್ದ ಖರ್ಚನ್ನು ರೂಪಾಯಿ, ಆಣೆ, ಕಾಸುಗಳಲ್ಲಿ ಹೇಳಬಹುದಾದಷ್ಟು ಕಡಿಮೆ ಖರ್ಚಿನಲ್ಲಿ ಮನೆಯ ನಿರ್ಮಾಣವಾಯಿತು. ರಾಘವಾಚಾರ್ಯರ ಮನೆಯವರಿಗೆ ಮೈಸೂರಿನ ಪರಕಾಲ ಮಠದ ಸಂಬಂಧ ಇದ್ದುದ್ದರಿಂದ ಅವರ ಮನೆತನದವರು ಮೇಲುಕೋಟೆಯಲ್ಲಿ ಶ್ರೀ ನಾರಾಯಣ ಸ್ವಾಮಿ ದೇವಸ್ಥಾನದಲ್ಲಿ ಪರಕಾಲ ಮಠದ ಪ್ರತಿನಿಧಿಯಾಗಿ ದೇವಸ್ಥಾನದಲ್ಲಿ ಸಂಬಂಧಿಸಿದ 'ಮರ್ಯಾದೆ' ಮತ್ತು ಗೌರವಗಳನ್ನು ಪಡೆಯುತ್ತಿದ್ದರು. ರಾಘವಾಚಾರ್ಯರು ಕಾಲವಾದ ನಂತರ ಅವರ ಮಗ ಪಿ.ಆರ್. ದೇಶಿಕಾಚಾರ್ಯರು ಈ ಮನೆಯಲ್ಲಿ ವಾಸಮಾಡುತ್ತಾಬಂದರು. ಅವರೊಂದಿಗೆ ಅವರ ಪತ್ನಿ ಗುಂಡಮ್ಮ ಮತ್ತು ಅತ್ತೆಯಾದ ರುಕ್ಮಿಣಿಯಮ್ಮ ಗಂಡು ಮಕ್ಕಳಾದ ನರಸಿಂಹರಂಗನ್, ಶ್ರೀನಿವಾಸ್ ಹಾಗೂ ಮೂರ್‍ನಾಲ್ಕು ಜನ ವಾಸವಾಗಿದ್ದರು. ಮುಂದೆ ನರಸಿಂಹರಂಗನ್ 'ಮನು' ಎಂಬ ಹೆಸರಿನಲ್ಲಿ ಕಥೆ ಕಾದಂಬರಿಗಳನ್ನು ಬರೆದರು. ಅವರು ಬರೆದ ಒಂದೆರಡು ಕಾದಂಬರಿಗಳು ಚಲನಚಿತ್ರವಾಗಿ ಚಿತ್ರಿತಗೊಂಡವು. ಆ ಮನೆತನದ ಎಲ್ಲಾ ಕಾರ್ಯ ಬಾಹುಳ್ಯಗಳನ್ನು ದೇಶಿಕಾಚಾರ್ಯರು ನಿರ್ವಹಿಸಿಕೊಂಡು ಬರುತ್ತಿದ್ದರು. ಅವರ ತಮ್ಮ ಶೇಷಾಚಾರ್ಯರು 'ಕುಟ್ಟಿ' ಹೆಸರಿನಲ್ಲಿ ಎಲ್ಲರಿಗೂ ಪರಿಚಿತರಾಗಿದ್ದರು. ಕುಟ್ಟಿ ಬಿ.ಎಸ್.ಸಿ ವರೆಗೆ ವ್ಯಾಸಂಗ ಮಾಡಿದ್ದರು. ಅವರು ಬಾಲಕರಾಗಿದ್ದಾಗ ಪಾರ್ಶ್ವವಾಯುವಿಗೆ ತುತ್ತಾಗಿ ತಮ್ಮ ಎರಡೂ ಕೈಗಳ ಶಕ್ತಿಯನ್ನು ಕಳೆದುಕೊಂಡಿದ್ದರು. ಆದರೂ ಕೂಡ ತಮ್ಮ ಸ್ವಂತ ಕೆಲಸಗಳನ್ನು ತಾವೇ ಮಾಡಿಕೊಳ್ಳುವ ಸ್ವಾವಲಂಬಿಯಾಗಿದ್ದರು. ಇವರು ಕಾಲ ಕ್ರಮೇಣ ಆಚಾರ್ಯ ವಿನೋಬಾ ಭಾವೆಯವರ ಆಂದೋಲನಕ್ಕೆ ಸೇರಿಕೊಂಡರು. ಭೂದಾನ ಆಂದೋಲನದ ಕಾರ್ಯಕರ್ತರಾಗಿ ಹಳ್ಳಿಗಳಲ್ಲಿ ಪಾದಯಾತ್ರೆ ಮಾಡುತ್ತಿದ್ದರು. ತಮ್ಮ ಅಗತ್ಯದ ವಸ್ತುಗಳನ್ನು ಎರಡು ಹೆಗಲು ಚೀಲಗಳಲ್ಲಿ ಇಟ್ಟು ಕೊಳ್ಳುತ್ತಿದ್ದರು. ಆ ಚೀಲಗಳನ್ನು

ತಮ್ಮ ಎರಡು ಹೆಗಲುಗಳ ಮೇಲೆ ಒಂದೊಂದು ಹಾಕಿಕೊಂಡು ಪಾದಯಾತ್ರೆ ಮಾಡುತ್ತಿದ್ದರು. ಅವರ ಉಡುಗೆ ಬಹಳ ಸರಳವಾಗಿತ್ತು. ಮಂಡಿಯವರೆಗೆ ಖಾದಿ ಬಿಳಿ ಪಂಚೆಯನ್ನು ತೊಡುತ್ತಿದ್ದರು. ಮೈಮೇಲೆ ಅಷ್ಟೇ ಉದ್ದದ ಬಿಳಿ ಖಾದಿ ಬಟ್ಟೆಯನ್ನು ಹೊದ್ದುಕೊಳ್ಳುತ್ತಿದ್ದರು. ಕುಟ್ಟಿಯವರು ಮೇಲುಕೋಟೆಯವರೇ ಆದ ಶ್ರೀ ಅರೈಯರ್ ಶ್ರೀನಿವಾಸಯ್ಯಂಗಾರರ ಜೊತೆ ಶಿಷ್ಯತ್ವದ ಭಾವನೆಯಿಂದ ಜೊತೆಗೂಡಿದರು. ಅರೈಯರ್ ಸಂಸ್ಕೃತ ವಿದ್ವಾಂಸರಾಗಿದ್ದರು; ಆಧ್ಯಾತ್ಮಜೀವಿಯೂ ಆಗಿದ್ದರು. ಶ್ರೀವೈಷ್ಣವ ಸಂಪ್ರದಾಯದಲ್ಲಿರುವ ತೆಂಕಲೆ ಮತ್ತು ವಡಗಲೆ ಸಮುದಾಯಗಳ ಸಮನ್ವಯ ಆಚಾರ್ಯರಾಗಿ ಜೀವನ ನಡೆಸಲು ಪ್ರಯತ್ನಿಸುತ್ತಿದ್ದರು. ಆದ್ದರಿಂದ ಅವರು ತಮ್ಮ ಹಣೆಯ ಮೇಲೆ ತೆಂಕಲೆ ಮತ್ತು ವಡಗಲೆ ನಾಮಗಳ ಸಂಯೋಜನೆ ಮಾಡಿ ಹಚ್ಚಿಕೊಳ್ಳುತ್ತಿದ್ದರು. ಅರೈಯರ್ ಕೂಡ ವಿನೋಬಾರ ಪ್ರಭಾವಕ್ಕೆ ಒಳಗಾಗಿದ್ದವರು. ಆದ್ದರಿಂದ ಕುಟ್ಟಿ ಮತ್ತು ಅರೈಯರ್ ಇಬ್ಬರು ಜೊತೆಗೂಡಿ ತಂದೆ ಮಕ್ಕಳಂತೆ ಇದ್ದುಕೊಂಡು ಪಾದಯಾತ್ರೆ ಮಾಡುತ್ತಿದ್ದರು. ಯಾವ ರೀತಿ ರಕ್ತ ಮುಡಿಯಿಂದ ಪಾದದವರೆಗೆ ಮತ್ತು ಪಾದಗಳಿಂದ ಮುಡಿಯವರೆಗೆ ಸಂಚಾರ ಮಾಡುತ್ತದೊ ಅದೇ ರೀತಿ ನೀವು ಭೂದಾನ ಮತ್ತು ಸರ್ವೋದಯ ವಿಚಾರವನ್ನು ಹಳ್ಳಿಗಳಲ್ಲಿ ಸುತ್ತುತ್ತಾ ಪ್ರಚಾರ ಮಾಡಬೇಕೆಂದು ವಿನೋಬಾ ಕುಟ್ಟಿಯವರಿಗೆ ಹೇಳಿದ್ದರಿಂದ ಕುಟ್ಟಿ ಮತ್ತು ಅರೈಯರ್ ಕರ್ನಾಟಕವನ್ನು ನಿರಂತರವಾಗಿ ತಮ್ಮ ಜೀವಿತಾವಧಿಯವರೆಗೂ ಕೂಡ ಪಾದಯಾತ್ರೆ ಮಾಡುತ್ತಿದ್ದರು. ಕುಟ್ಟಿಯವರು ತಮಿಳುನಾಡಿನಲ್ಲಿ ಎಂಟು ತಿಂಗಳು ಪಾದಯಾತ್ರೆ ಮಾಡಿದರು. ಕುಟ್ಟಿಯವರ ತಮಿಳುನಾಡಿನ ತಂಜಾವೂರು ಜಿಲ್ಲೆಯಲ್ಲಿ ನಡೆದ ಪಾದಯಾತ್ರೆಯಿಂದ ಪ್ರಭಾವಿತರಾಗಿ ಅಲ್ಲಿಯ ಪ್ರಮುಖ ಭೂದಾನ ಆಂದೋಲನದ ಸಂಯೋಜಕರು ಕುಟ್ಟಿಯವರಿಗೆ ಹೀಗೊಂದು ಪತ್ರ ಬರೆದರು.

I am sure you will create a peaceful revolution. All this is due to your spiritual approach. We can not forget your Padayatra in this district and We wish that you should come back to this district and visit as many villages as possible.

ಈ ಪತ್ರದಿಂದ ಕುಟ್ಟಿಯವರ ತಮಿಳುನಾಡಿನ ಪಾದಯಾತ್ರೆಯ ಮಹತ್ವ ಅರ್ಥವಾಗುತ್ತದೆ. ಆಗ ತಮಿಳುನಾಡಿನಲ್ಲಿ ಅಗ್ರಗಣ್ಯ ಭೂದಾನ ಆಂದೋಲನದ ನಾಯಕರಾಗಿದ್ದ ಎಸ್.ಜಗನ್ನಾಥನ್ ಮತ್ತು ಅವರ ಪತ್ನಿ ಕೃಷ್ಣಮ್ಮ ಅವರ ಸಂಪರ್ಕ ಉಂಟಾಯಿತು. ಅವರ ಸಂಪರ್ಕ ಕುಟ್ಟಿಯವರ ಜೀವನದ ಮೇಲೆ ತುಂಬ ಪ್ರಭಾವ ಬೀರಿತು. ತಮಿಳುನಾಡಿನ ತಮ್ಮ ಎಂಟು ತಿಂಗಳ ಯಾತ್ರೆಯ ಅನುಭವವನ್ನು ತಮ್ಮ ಗುರು ಸಮಾನರಾಗಿದ್ದ ಅರೈಯರ್‌ಗೆ ಪತ್ರ ಮುಖೇನ ತಿಳಿಸುತ್ತಿದ್ದರು. ಅದೆನ್ನೆಲ್ಲಾ ಸಂಗ್ರಹಿಸಿದ್ದ ಅರೈಯರ್ ಅವುಗಳನ್ನು ಮೇಲುಕೋಟೆಯವರೇ ಆದ ವರಕವಿ ಪು.ತಿ.ನ.ರವರಿಗೆ ತೋರಿಸಿದಾಗ ಪು.ತಿ.ನ.ರವರು 'ಕುಟ್ಟಿ-ಗಟ್ಟಿ' ಎಂಬ ಉದ್ಗಾರ ತೆಗೆದರು. ಮುಂದೆ ವಿನೋಬಾ ಮೇಲುಕೋಟೆಗೆ ೧೯೫೭, ಅಕ್ಟೋಬರ್ ೨ನೇ ತಾರೀಖು ಬಂದಿದ್ದಾಗ ಕುಟ್ಟಿಯವರ ಮನೆಯನ್ನು ನೋಡಲು ಬಂದಿದ್ದರು.

ಕುಟ್ಟಿಯವರು ಜನಪದ ನಿಲಯದ ಮನೆಯನ್ನು ಸರ್ವೋದಯ ವಿಚಾರದ ಚಟುವಟಿಕೆಗಳ ಕೇಂದ್ರವಾಗಬೇಕೆಂದು ಬಯಸಿದ್ದರು. ಸರಿ ಸುಮಾರು ಅದೇ ಹೊತ್ತಿಗೆ ಜನಪದ ಸೇವಾ ಟ್ರಸ್ಟ್‌ನ ಸ್ಥಾಪನೆಯಾಗಿತ್ತು. ಸಹಜವಾಗಿಯೇ ಕುಟ್ಟಿಯವರ ಸಂಪರ್ಕ ಉಂಟಾಯಿತು. ಜನಪದ ಸೇವಾ ಟ್ರಸ್ಟ್‌ನ ಉದ್ದೇಶವೂ ಸರ್ವೋದಯ ಕಾರ್ಯವೇ ಆಗಿದ್ದರಿಂದ ಕುಟ್ಟಿಯವರು ತಮ್ಮ ಮನೆಯನ್ನು ಟ್ರಸ್ಟ್ ಚಟುವಟಿಕೆಗಳಿಗಾಗಿ ಕೊಡ ಬಯಸಿದ್ದರು. ಆದರೆ ಅವರ ಅಣ್ಣ ಪಿ.ಆರ್. ದೇಶಿಕಾಚಾರ್ಯರು ತಮ್ಮ ಪ್ರಾಪಂಚಿಕ ಜೀವನದ ಅನಿವಾರ್ಯತೆಗಳಿಂದಾಗಿ ತಮ್ಮ ಸಹೋದರರನ ಮಾತನ್ನು ನೆರವೇರಿಸಲು ಹಿಂಜರಿಯುತ್ತಿದ್ದರು. ಆದ್ದರಿಂದ ಜನಪದ ಸೇವಾ ಟ್ರಸ್ಟ್ ಆ ಮನೆಗೆ ಬಾಡಿಗೆ ನೀಡಲು ಒಪ್ಪಿತು. ನಂತರ ಮನೆಯಲ್ಲಿ ಟ್ರಸ್ಟಿನ ಕಾರ್ಯಕ್ರಮಗಳು ಪ್ರಾರಂಭವಾದವು. ಮುಂದೆ ಕುಟ್ಟಿಯವರು ತಮಿಳುನಾಡು, ಕೇರಳ, ಆಂಧ್ರಪ್ರದೇಶ, ಗುಜರಾತ್, ಮಧ್ಯಪ್ರದೇಶಗಳಲ್ಲಿ ಭೂದಾನದ ಪಾದಯಾತ್ರೆ ಕೈಗೊಂಡರು. ನಂತರ ವಿನೋಬಾರವರ ಪವನಾರ್ ಆಶ್ರಮಕ್ಕೆ ಹೋದರು. ಅಲ್ಲಿಂದ ಗುಜರಾತ್‌ಗೆ ಹೊರಟರು. ಗುಜರಾತ್ ರಾಜ್ಯದ ಸರ್ವೋದಯ ಕಾರ್ಯಕರ್ತರು ಕುಟ್ಟಿಯವರ ಅನುಭವ, ಅವರ ಸಾಮಾಜಿಕ ತುಡಿತ ಹಾಗೂ ವಿನೋಬಾರವರ ಬಗ್ಗೆ ಇದ್ದ ಅಪಾರ ಗೌರವವನ್ನು ತಿಳಿದು ಆ ರಾಜ್ಯದ ಸರ್ವೋದಯ ಮಂಡಲಿ ಕುಟ್ಟಿಯವರ ಸಹಾಯಕ್ಕಾಗಿ ಓರ್ವ ಕಾರ್ಯಕರ್ತೆಯನ್ನು ನಿಯೋಜಿಸಿತು. ಆ ಕಾರ್ಯಕರ್ತೆಯ ಹೆಸರು 'ಜಮ್ಮು ಬೆಹನ್'. ಜಮ್ಮು ಬೆಹನ್ ಗುಜರಾತ್ ರಾಜ್ಯದ ಡಾಂಗ್ ಪ್ರದೇಶದ ಆದಿವಾಸಿ ಹೆಣ್ಣು ಮಗಳು. ಅವಳು ಕೂಡ ವಿನೋಬಾರವರ ಭೂದಾನ ಕಾರ್ಯಕರ್ತರಾಗಿದ್ದರು. ಜಮ್ಮು ಬೆಹನ್ ಕುಟ್ಟಿಯವರ ಶ್ರದ್ಧೆ ಮತ್ತು ಅವರಲ್ಲಿರುವ ಅಂಗವೈಕಲ್ಯತೆಗಳನ್ನು ಗಮನಿಸಿ ಕುಟ್ಟಿಯವರೊಂದಿಗೆ ಇದ್ದುಕೊಂಡು ಪಾದಯಾತ್ರೆಯಲ್ಲಿ ತೊಡಗಲು ಮುಂದೆ ಬಂದರು. ಅವರ ಮತ್ತು ಅವರ ಮನೆಯ ಜೀವನ ನಿರ್ವಹಣೆಯ ಖರ್ಚನ್ನು ಗುಜರಾತ್ ಸರ್ವೋದಯ ಮಂಡಲ ನಿರ್ವಹಿಸಿತು.

ಜಮ್ಮು ಬೆಹನ್ ಹತ್ತು ವರ್ಷಗಳ ಕಾಲ ಅಖಂಡವಾಗಿ ಕುಟ್ಟಿಯವರ ಸೇವೆಯಲ್ಲಿ ತೊಡಗಿದ್ದರು. ಕುಟ್ಟಿಯವರ ಕೊನೆಯ ಉಸಿರಿನ ವರೆಗೆ ಅವರ ಬಳಿಯಲ್ಲೇ ಇದ್ದು ಕುಟ್ಟಿಯವರ ತಾಯಿಯಾಗಿ, ಸಹೋದರಿಯಾಗಿ ಸೇವೆ ಸಲ್ಲಿಸಿದರು. ಜಮ್ಮು ಬೆಹನ್‌ರ ಸೇವಾತತ್ಪರತೆಯನ್ನು ಕಂಡು ಜನ ಮುಗ್ಧಗೊಂಡಿದ್ದರು. ಕುಟ್ಟಿಯವರು ಒಟ್ಟು ಇಪ್ಪತ್ತು ವರ್ಷಗಳ ಕಾಲ ಭಾರತದಾದ್ಯಂತ ಪಾದಯಾತ್ರೆ ಮಾಡಿದರು. ಹೀಗೆ ಜನಪದ ನಿಲಯ ಸಾಮಾನ್ಯ ಮನೆಯಂತೆ ತೋರುತ್ತಿದ್ದರೂ ಆ ಮನೆಯಲ್ಲಿ ಕುಟ್ಟಿಯಂಥ ತ್ಯಾಗಿ ಮತ್ತು ಸರ್ವೋದಯ ವಿಚಾರದ ವ್ಯಕ್ತಿ ಅವರೊಂದಿಗೆ ಗುರುಸ್ಥಾನದಲ್ಲಿದ್ದುಕೊಂಡು ಸಾರ್ವಜನಿಕ ಸೇವೆ ಮಾಡುತ್ತಿದ್ದ ಅಯ್ಯರ್‌ರವರ ಆಗಾಗಿನ ಭೇಟಿಯ ಸ್ಥಳವಾದ ಈ ಮನೆ ಒಂದು ವಿಶೇಷತೆಯನ್ನು ಪಡೆದಿತ್ತೆಂದು ಅದಕ್ಕಾಗಿ ಪ್ರಾರಂಭದಲ್ಲಿಯೇ ಹೇಳಿದ್ದು.

(ಮುಂದುವರಿಯುವುದು...)

* * *

ಖಾದಿ ವಿಚಾರ

ಖಾದಿ ಬಟ್ಟೆ ಈಗ ವಿದೇಶಕ್ಕೂ ರವಾನೆಯಾಗುತ್ತಿದೆ. ವಿದೇಶದಿಂದ ಬಂದವರಲ್ಲಿ ಬಹುಮಂದಿ ಖಾದಿಯನ್ನೇ ತೊಡುತ್ತಾರೆ. ಖಾದಿಯೆಂದರೆ ಒರಟು ಬಟ್ಟೆಯೆನ್ನುವುದು ಹಳೆಯ ಮಾತಾಗಿದೆ. ಆಧುನಿಕ ವಿನ್ಯಾಸದ ಎಲ್ಲ ನಮೂನೆಯ ಖಾದಿ ಬಟ್ಟೆ ಮಿಲ್ಲಿನ ಬಟ್ಟೆಗಿಂತ ಕಡಿಮೆ ಬೆಲೆಯಲ್ಲಿ ಈಗ ಲಭ್ಯವಿದೆ. ಮುಂಬಯಿ ಖಾದಿ ಭವನದ ದಿನದ ಸರಾಸರಿ ವಿಕ್ರಿ ರೂ.೩೫,೦೦೦/-, ದೇಶದಲ್ಲಿ ಈಗ ಉತ್ಪಾದನೆಗಿಂತ ಖಾದಿ ಬಟ್ಟೆ ವಿಕ್ರಿ ಹೆಚ್ಚಿರುತ್ತದೆ. ಅರಳೆ ದರದ ಏರಿಕೆಮಾನದಲ್ಲಿ ಖಾದಿಯ ಬೆಲೆಯಲ್ಲಿ ಏರಿಕೆಯಾಗಿಲ್ಲ. ಮೇಲಾಗಿ ಖಾದಿ ಬೆಲೆಯಲ್ಲಿ ಅರ್ಧಕ್ಕಿಂತ ಹೆಚ್ಚು ರಕಂ ನೂಲುಗರ ಹಾಗೂ ನೇಕಾರರ ಕೂಲಿ ಒಳಗೊಂಡಿದೆ. ಖಾದಿಯ ಬೆಲೆ ಪತ್ರಿಕೆಯನ್ನು ತಯಾರಿಸುವಾಗ ಯಾವದೇ ಸಂದರ್ಭದಲ್ಲಿ ಕೂಲಿ ಇಳಿಯದಂತೆ ನೋಡಿಕೊಳ್ಳಲಾಗುತ್ತಿದೆ. ಖಾದಿ ಕೆಲಸಗಾರನ ಹೆಚ್ಚಿನ ಕೂಲಿಗೇ ಪ್ರಾಧಾನ್ಯ ವಿನಃ ಲಾಭದ ಆಕಾಂಕ್ಷೆಯಿಲ್ಲ. ಖಾದಿ ತುಟ್ಟಿಯಾಗುತ್ತದೆ ಎಂದು ಹೇಳುವವರು ಸಹ ಮೀಟರಿಗೆ ರೂ.೫೦ಕ್ಕೂ ಹೆಚ್ಚು ಬೆಲೆಯ ಟೆರಿಲಿನ್ ಬಟ್ಟ ಕೊಳ್ಳುವ ಬಗ್ಗೆ ಹಿಂದುಮುಂದು ನೋಡುವುದಿಲ್ಲ!

ಸರಕಾರವು ಖರೀದಿಸುವ ಖಾದಿ ಬಟ್ಟೆಯೆಂದರೆ ತನ್ನ ನೌಕರರಾದ (ಚಪ್ರಾಸಿ) ಮುಂತಾದವರಿಗೆ ಮಾತ್ರ; ಅದೂ ಕಡಿಮೆ ಬೆಲೆಯ ಬಟ್ಟೆ. ತಾಳಿಕೆ ಹೆಚ್ಚಾಗಿ ಅರಳೆಯ ದರ್ಜೆಯ ಮೇಲೆ ಅವಲಂಬಿಸಿದೆ. ಖಾದಿ ಆದಷ್ಟು ಕಡಿಮೆ ಬೆಲೆಯಿಂದ ಜನರನ್ನು ಆಕರ್ಷಿಸಲಿಚ್ಛಿಸುತ್ತದೆ. ಹೀಗಾಗಿ ಕಡಿಮೆ ಬೆಲೆಯ ಅರಳೆಯನ್ನು ಉಪಯೋಗಿಸುವುದರಿಂದ, ಅದು ತಾಳಿಕೆ ಬಾರದಿರಬಹುದು. ಆದರೆ ಅರಳೆಯ ಗುಣಮಟ್ಟ ಸುಧಾರಿಸಿದಂತೆ, ತಾಳಿಕೆಯಲ್ಲಿ ಮಿಲ್ಲಿನ ಬಟ್ಟೆಗಿಂತ ಅಭಂತರ ಕಂಡುಬರುವುದಿಲ್ಲ. ಈಗ ಖಾದಿ ಬಟ್ಟೆ ಕೂಡ, ಭಾರತೀಯ ವಸ್ತು ಪ್ರಮಾಣಿತ ಸಂಸ್ಥೆಯ ಸೂತ್ರಕ್ಕನುಗುಣವಾಗಿ (ಐ.ಎಸ್.ಐ) ತಯಾರಾಗುತ್ತದೆ. ಬಾಳಿಕೆಯ ಗ್ಯಾ-ರೆಂಟಿಯ ಮೇರೆಗೆ ರಾಷ್ಟ್ರಧ್ವಜ, ರೈಲ್ವೆ ಬೆಡ್‌ಶೀಟ್ ಹಾಗೂ ಸೈನ್ಯ ಖಾತೆಗೆ ಬೇಕಾಗುವ ವಸ್ತ್ರಗಳನ್ನು ಪೂರೈಸಲಾಗುತ್ತದೆ. ಸರಕಾರದ ಪೂರೈಕೆ ಹಾಗೂ ವಿತರಣಾ ಇಲಾಖೆಯ ಮುಖಾಂತರ ನಿಶ್ಚಿತ ಗುಣಮಟ್ಟ ಪರೀಕ್ಷಿಸಿ ಖಾದಿಯನ್ನು ಖರೀದಿಸಲಾಗುತ್ತಿದೆ. ಪರದೇಶಕ್ಕೆ ಕಳುಹಿಸುವ ಖಾದಿ ಕೂಡ ಇವೆಲ್ಲ ಪ್ರಯೋಗ ಮಾಧ್ಯಮವನ್ನು ದಾಟಬೇಕಾಗುತ್ತದೆ. ಪರದೇಶದವರು ಈಗೀಗ ಕೃತ್ರಿಮ (ಸಿಂಥೆಟಿಕ್) ಬಟ್ಟೆಯ ಬದಲಾಗಿ ಅರಳೆ ಬಟ್ಟೆಯನ್ನೇ ತೊಡುತ್ತಿದ್ದಾರೆ. ನಮ್ಮ ದೇಶದಿಂದ ರಫ್ತಾಗುವ ೨೨೧ ಕೋಟಿ ರುಪಾಯಿಯ ಬೆಲೆಯ ಬಟ್ಟೆ ಅರಳೆ ಬಟ್ಟೆ ವಿನಃ ಕೃತಕ ಬಟ್ಟೆಯಲ್ಲ.

* * *

ಸರ್ವೋದಯ ಆಂದೋಲನದ ಮುನ್ನಡೆ

ದೇಶದ ಎಲ್ಲ ರಾಜ್ಯಗಳಲ್ಲಿಯೂ ಆಯಾ ಪ್ರದೇಶದ ಸರ್ವೋದಯ ಮಂಡಳಿಗಳಿವೆ. ಅದೇ ಪ್ರಕಾರ ಕರ್ನಾಟಕ ಮತ್ತು ಮಹಾರಾಷ್ಟ್ರ ರಾಜ್ಯಗಳಲ್ಲಿಯೂ ಸರ್ವೋದಯ ಮಂಡಳಿಗಳಿವೆ. ಕಳೆದ ಡಿಸೆಂಬರ್ ತಿಂಗಳಲ್ಲಿ ೨೫,೨೬ ಮತ್ತು ೨೭ ದಿನಾಂಕಗಳಲ್ಲಿ ಮಹಾರಾಷ್ಟ್ರ ಸರ್ವೋದಯ ಸಮ್ಮೇಳನ ಮತ್ತು ಲೋಕಸೇವಕರ ಅಧಿವೇಶನ ನಡೆಯಿತು. ಅಧಿವೇಶನವನ್ನು ನರ್ಮದಾ ನದಿ ಉಳಿಸಿ ಆಂದೋಲನದ ನಾಯಕಿ ಮೇಧಾ ಪಾಟ್ಕರ್ ಉದ್ಘಾಟಿಸಿದರು ಮತ್ತು ಮಹಾರಾಷ್ಟ್ರದ ಸುಪ್ರಸಿದ್ಧ ವಿಚಾರವಂತ ಡಾ॥ ಸದಾನಂದ ಮೋರೆ ಮುಖ್ಯ ಅತಿಥಿಗಳಾಗಿದ್ದರು. ಸಮ್ಮೇಳನದಲ್ಲಿ ಸ್ವರಾಜ್ಯ ಸ್ಥಾಪನೆಯ ಪ್ರಯತ್ನ ಕುರಿತು ಚರ್ಚೆ ಮತ್ತು ಸಾಂಪ್ರದಾಯಿಕತೆಯ ಪ್ರಶ್ನೆ ಹಾಗೂ ಪರಿಸರಾತ್ಮಕ ಸಮಸ್ಯೆ ಮತ್ತು ಮರಾಠಿ ಸಾಹಿತ್ಯದ ಮೇಲೆ ಗಾಂಧೀ ವಿಚಾರದ ಪ್ರಭಾವ ಎಂಬ ವಿಷಯಗಳ ಮೇಲೆ ವಿಚಾರ ವಿನಿಮಯಗಳು ನಡೆದವು. ಲೋಕ ಸೇವಕರ ಅಧಿವೇಶನದಲ್ಲಿ ನಯೀತಾಲೀಮ್ ಸಂಘದ ಡಾ॥ಸುಗುಣ್ ಭರಂಟ್ ಮಾತನಾಡಿದರು.

ಕಳೆದ ಡಿಸೆಂಬರ್ ೨೦೧೩ರಂದು ರಾಜಸ್ಥಾನ ಪ್ರದೇಶ ಸರ್ವೋದಯ ಸಮ್ಮೇಳನ ಶ್ರೀಮತಿ ಆಶಾ ಭೋತ್ತರ ಅವರನ್ನು ಸರ್ವಾನು ಮತದಿಂದ ಪ್ರದೇಶ ಸರ್ವೋದಯ ಮಂಡಲದ ಅಧ್ಯಕ್ಷರನ್ನಾಗಿ ಆಯ್ಕೆ ಮಾಡಲಾಯಿತು. ಸಮ್ಮೇಳನದಲ್ಲಿ ಜೈಪುರ್, ಜೋಧ್‌ಪುರ್ ನಗರ, ಜೋಧ್‌ಪುರ್ ಗ್ರಾಮಾಂತರ ಪ್ರದೇಶ, ನಗೌರ, ಸಿಕರ್, ಬಾಂಬ್‌ಸ್ವಾಡ ಇತ್ಯಾದಿ ಜಿಲ್ಲೆಗಳಿಂದ ಒಟ್ಟು ೫೨ ಪ್ರತಿನಿಧಿಗಳು ಭಾಗವಹಿಸಿದ್ದರು. ಅಖಿಲ ಭಾರತ ಸರ್ವೋದಯ ಮಂಡಲದ ಪ್ರತಿನಿಧಿಯಾಗಿ ಶ್ರೀ ಮಹಾವೀರ್ ತ್ಯಾಗಿ ಉಪಸ್ಥಿತರಿದ್ದರು.

ಗಾಂಧೀಜಿಯವರು ಪ್ರತಿಪಾದಿಸಿದ್ದ ಹದಿನೆಂಟು ರಚನಾತ್ಮಕ ಕಾರ್ಯಕ್ರಮಗಳಲ್ಲಿ ಮದ್ಯಪಾನ ನಿಷೇಧ ಕೂಡ ಒಂದಾಗಿತ್ತು. ಗಾಂಧೀಯವರ ತದನಂತರ ಮದ್ಯಪಾನ ನಿಷೇಧವನ್ನು ಪ್ರಚಾರ ಮಾಡಲು ಅಖಿಲ ಭಾರತೀಯ ಮದ್ಯಪಾನ ನಿಷೇಧ ಪರಿಷತ್ ಆ ನಿಟ್ಟಿನಲ್ಲಿ ಕೆಲಸಮಾಡಿಕೊಂಡು ಬರುತ್ತಿದೆ.೨೦೧೪ ಮಾರ್ಚ್ ೮ ರಂದು ಪಂಜಾಬಿನ ಮೊಗ ಎಂಬ ಊರಿನಲ್ಲಿ ಪರಿಷತ್ತಿನ ಕಾರ್ಯಕಾರಿಣಿ ಸಭೆ ಮತ್ತು ಸಾಧಾರಣ ಸಭೆಯ ಸದಸ್ಯರ ಸಭೆಯನ್ನು ಕರೆಯಲಾಗಿದೆ ಎಂದು ಪರಿಷತ್ತಿನ ಕಾರ್ಯದರ್ಶಿಯವರಾದ ಮಹಾವೀರ್ ತ್ಯಾಗಿ ತಿಳಿಸಿದ್ದಾರೆ.

ಮಹಾತ್ಮಾ ಗಾಂಧೀ ಅಮರರಾದ ಜನವರಿ ಮಾಹೆಯನ್ನು 'ಸರ್ವೋದಯ ಮಾಹೆಯೆಂದು' ಆಚರಿಸಬೇಕು. ಆ ತಿಂಗಳ ಪೂರ್ತಾ ಗಾಂಧೀಯವರು ಪ್ರತಿಪಾದಿಸಿದ ಹದಿನೆಂಟು ಬಗೆಯ ರಚನಾತ್ಮಕ ಕಾರ್ಯಗಳನ್ನು ಕೈಗೊಳ್ಳಬೇಕು ಮತ್ತು ಸರ್ವೋದಯ ಸಮಾಜ ರಚನೆ ಬಗ್ಗೆ ಗಾಂಧೀಜಿ ಸೂಚಿಸಿದ್ದ ಗ್ರಾಮನೀತಿ, ಶಿಕ್ಷಣ ನೀತಿ, ಅರ್ಥನೀತಿ, ಕೈಗಾರಿಕಾ ನೀತಿ ಮುಂತಾದವುಗಳ ಬಗ್ಗೆ ವಿಚಾರ ಸಂಕೀರ್ಣ, ಚರ್ಚಾಗೋಷ್ಠಿ ಇತ್ಯಾದಿಗಳು ನಡೆಯಬೇಕು ಎಂಬುದು ಈ ಸರ್ವೋದಯ ಮಾಸಾಚರಣೆಯ ಉದ್ದೇಶವಾಗಿದೆ. ಕರ್ನಾಟಕ ಸರ್ವೋದಯ ಮಂಡಲ ಸರ್ಕಾರಕ್ಕೆ ಮಾಡಿಕೊಂಡಿದ್ದ ಈ ವಿನಂತಿಯನ್ನು ಮನ್ನಿಸಿ ರಾಜ್ಯದಲ್ಲಿರುವ ಎಲ್ಲ ಬಗೆಯ ಶಿಕ್ಷಣನೀತಿಗಳು, ಸರ್ವೋದಯ ಮಾಸಾಚರಣೆಯಲ್ಲಿ ಸೂಚಿಸಿತ್ತು. ಅದರಂತೆ ಹಲವೆಡೆ ಹಲವು ಕಾರ್ಯಕ್ರಮಗಳು ನಡೆದುಬಂದವೆಂದು ವರದಿಯಾಗಿದೆ.

ಬಾಂಧವ್ಯ

ಜನಪದ ವಿಚಾರವು ಚಂದಾದಾರರೊಂದಿಗಿನ
ತನ್ನ ಬಾಂಧವ್ಯವನ್ನು ಸದಾಸ್ಮರಿಸುತ್ತದೆ.

ಪ್ರೊ॥ ಎಚ್.ವಿ.ಮಂಜುನಾಥ; ಶ್ರೀ ಎಮ್.ಕೆ.ನಾರಾಯಣ;
ಶ್ರೀ ಎಂ.ಕೆ.ಸುಬ್ಬರಾವ್; ಶ್ರೀ ಎಂ.ಕೆ.ಶಂಕರ್ – ಬೆಂಗಳೂರು
ಶ್ರೀ ವಿ.ಗಣೇಶ್ – ಮೈಸೂರು
ಡಾ॥ ಎಚ್.ಎಸ್.ಮುದ್ದೇಗೌಡ – ಮಂಡ್ಯ

ಇವರು ಪತ್ರಿಕೆಯ ಚಂದಾ ನವೀಕರಿಸಿದ್ದಕ್ಕಾಗಿ ಹಾಗೂ
ಹೊಸದಾಗಿ ಪತ್ರಿಕೆಗೆ ಚಂದಾದಾರರಾದ

ಶ್ರೀ ಚೌಡಪ್ಪ; ಶ್ರೀ ಧೀರೇಂದ್ರ ಪುರೋಹಿತ – ಬೆಂಗಳೂರು
ಶ್ರೀ ಹೊಳಲು ಶ್ರೀಧರ್; ಶ್ರೀ ಕೆ.ಎನ್.ಮಲ್ಲೇಗೌಡ – ಮಂಡ್ಯ
ಶ್ರೀ ಚಂದ್ರಶೇಖರ ಮೂರ್ತಿ; ಶ್ರೀ ಎಚ್.ಪುಟ್ಟಸ್ವಾಮಿ – ಬಸರಾಳು
ಶ್ರೀ ಬಿ.ಎಂ.ವೀರಣ್ಣ – ಹೆಬ್ಬೂರು
ಶ್ರೀ ಜಿ.ಎನ್.ಮನುಕುಮಾರ್ – ಗೊರವಾಲೆ

ಇವರಿಗೆ ಜನಪದ ವಿಚಾರದ ಕೃತಜ್ಞತೆಗಳು

"ಜನಪದ ವಿಚಾರ" ವೈಚಾರಿಕ ಮಾಸ ಪತ್ರಿಕೆಯನ್ನು ನೀವು ನೋಡಿದ್ದೀರಿ.

ಸಧ್ಯಕ್ಕೆ ಕರ್ನಾಟಕದಲ್ಲಿ ಗಾಂಧೀ ವಿಚಾರವನ್ನು, ಮುಖ್ಯವಾಗಿ ಸರ್ವೋದಯ ವಿಚಾರವನ್ನು ಜನತೆಗೆ ತಿಳಿಸುತ್ತಿರುವಂಥ ಪತ್ರಿಕೆ 'ಜನಪದ ವಿಚಾರ' ಒಂದೇ. ಈಗ ಭಾರತದಲ್ಲಿ ಮತ್ತು ವಿಶ್ವದ ಬೇರೆಡೆಯಲ್ಲಿ ಸಂಭವಿಸುತ್ತಿರುವ ಸಮಾಜ ಹಿತ–ವಿರೋಧಿ ಬೆಳವಣಿಗೆಗಳನ್ನು ಸರಿಯಾಗಿ ವಿಶ್ಲೇಷಿಸಿ ಸರ್ವೋದಯ ಸಮಾಜ ರಚನೆಯ ಅಗತ್ಯವಿದೆಯೆಂದು ಜನತೆಗೆ ಮುಖ್ಯವಾಗಿ ಯುವಜನತೆಗೆ ತಿಳಿಸುವ ಮಹದ್ಕಾರ್ಯವನ್ನು ಮಾಡುವುದು ಇಂದಿನ ಯುಗಧರ್ಮವಾಗಿದೆ.

ಈ ಅಭಿಪ್ರಾಯವನ್ನು ಗಮನದಲ್ಲಿರಿಸಿಕೊಂಡು ಜನಪದ ವಿಚಾರಕ್ಕೆ ಯೋಗ್ಯವಾದ ಲೇಖನಗಳನ್ನು ಬರೆಯಬಲ್ಲ ಸಮಾನಮನಸ್ಕರ ಬಳಗವೊಂದನ್ನು ರೂಪಿಸಲು ಉದ್ದೇಶಿಸಿದ್ದೇವೆ. ನೀವು ಸಮಾನಮನಸ್ಕರಲ್ಲಿ ಒಬ್ಬರಾಗಿರುವುದರಿಂದ ಜನಪದ ವಿಚಾರದ ಲೇಖಕರ ಬಳಗಕ್ಕೆ ನಿಮ್ಮನ್ನು ಗೌರವಾನ್ವಿತ ಲೇಖಕರನ್ನಾಗಿ ಆಯ್ಕೆಮಾಡಿಕೊಳ್ಳಬಯಸಿದ್ದೇವೆ.

ನೀವು ತಿಂಗಳಿಗೆ ಒಂದು ಲೇಖನವನ್ನು ಅಥವಾ ಪ್ರಚಲಿತ ವಿಷಯಗಳ ಬಗ್ಗೆ ನಿಮ್ಮ ಪ್ರತಿಕ್ರಿಯೆಗಳನ್ನು ಬರೆದು ಆಯಾ ತಿಂಗಳ ೧೫ನೇ ತಾರೀಖಿನೊಳಗೆ ಕಳುಹಿಸಿಕೊಡಬೇಕೆಂದು ಕೋರುತ್ತೇವೆ.

ಲೇಖನಗಳಲ್ಲಿಯ ವಿಚಾರಗಳಿಗೆ ಆಯಾ ಲೇಖಕರು ಹೊಣೆ

ತೆರೆದ-ಅಂಚೆ

KA / SK / MND / 470 / 2012-2014
Regd. no. KAR / KAN / 2000 / 3820

ಶ್ರೀಮತಿ/ ಶ್ರೀ..

....

....

JANAPADA VICHARA
Kannada Monthly Digest Edited Printed and Published by Surendra Koulagi at Janapada Seva Trust Melkote, Dist- Mandya – 571431. Phone : 08236 316344 / 299854
e-mail : janapada@yahoo.com - web : janapada.net
Printed at Sanketh Mudrana, Melkote.